ಸಂಪುಟ 15
ಸಂಚಿಕೆ 40

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ರೂ. 2.00
10 ಅಕ್ಟೋಬರ್ 1993

ಪರ್ಯಾಯ ಕೃಷಿ ನೀತಿ ಬಗ್ಗೆ ಅಖಿಲ ಭಾರತ ವಿಚಾರಸಂಕಿರಣ

"ಬಡ ರೈತ -- ಕೃಷಿ ಕೂಲಿಕಾರರತ್ತ ಗಮನ ಕೇಂದ್ರೀಕರಿಸಿ"

--ಸುರ್ಜಿತ್

ಐ.ಎಂ.ಎಫ್. ಹೇರಿದ ಆರ್ಥಿಕ ನೀತಿಗಳಿಂದಾಗಿ ಕೃಷಿರಂಗದಲ್ಲಿ ಬಹುರಾಷ್ಟ್ರೀಯ ಕಂಪೆನಿಗಳ ಪ್ರವೇಶ, ಅದರ ಜತೆಗೆ ಭಾರತೀಯ ಸರಕಾರ ಸತತವಾಗಿ ಅನುಸರಿಸಿಕೊಂಡು ಬಂದ ಭೂ ಮಾಲಕ ಪರ ನೀತಿಗಳಿಂದಾಗಿ ದೇಶದ ಬಹುಪಾಲು ಕೃಷಿ ಕೂಲಿಕಾರರ, ಎಡ ರೈತರ ಪರಿಸ್ಥಿತಿ ದಿನೇ-ದಿನೇ ಹದಗೆಡುತ್ತಿದೆ. ಎಡ ಆಂದೋಲನ ಒಂದು ಪರ್ಯಾಯ ಕಾರ್ಯತಂತ್ರವನ್ನು ರೂಪಿಸದಿದ್ದರೆ, ಈ ಜನವಿಭಾಗಗಳನ್ನು ಅಣಿನೆರಿಸದಿದ್ದರೆ ಕೋಮುವಾದಿ, ಜಾತಿವಾದಿ ಶಕ್ತಿಗಳು ಅವರ ಅಸಂತೃಪ್ತಿಯ ದುಷ್ಟ ಪ್ರಯೋಜನ ಪಡೆಯುತ್ತವೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಒತ್ತಿ ಹೇಳಿದ್ದಾರೆ. ಅವರು ಸೆಪ್ಟೆಂಬರ್ 25 ರಂದು ನವದೆಹಲಿಯಲ್ಲಿ 'ಪರ್ಯಾಯ ಕೃಷಿ ಧೋರಣೆ' ಎಂಬ ವಿಚಾರ ಸಂಕಿರಣವನ್ನು ಉದ್ಘಾಟಿಸುತ್ತಾ ಮಾತನಾಡುತ್ತಿದ್ದರು. ಈ ಎರಡು ದಿನಗಳ ವಿಚಾರಸಂಕಿರಣವನ್ನು ಅಖಿಲ ಭಾರತ ಕಿಸಾನ್ ಸಭಾ ಹಾಗೂ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ಜಂಟಿಯಾಗಿ ಏರ್ಪಡಿಸಿದ್ದವು.

ಈ ಎರಡು ದಿನಗಳ ವಿಚಾರಸಂಕಿರಣದಲ್ಲಿ ದೇಶದ ಎಲ್ಲಾ ರಾಜ್ಯಗಳಿಂದ ರೈತರ ನಡುವೆ ಕೆಲಸ ಮಾಡುವ ಪ್ರಮುಖ ಸಂಗಾತಿಗಳು ಹಾಜರಿದ್ದರು. ವಿಚಾರ ಸಂಕಿರಣದ ಸಭಾಂಗಣ ಕಿಕ್ಕಿರಿದು ತುಂಬಿತ್ತು. ನಾಲ್ಕು ಅಧಿವೇಶನಗಳಲ್ಲಿ ನಡೆದ ಈ ವಿಚಾರಸಂಕಿರಣ ಕೃಷಿ ರಂಗದಲ್ಲಿ ಈಗಿನ ಪರಿಸ್ಥಿತಿಯ ವಿಭಿನ್ನ ಆಯಾಮಗಳನ್ನು ಚರ್ಚಿಸಿತು. ಸರಕಾರದ ಹೊಸ ಕೃಷಿ ನೀತಿಗೆ ಪರ್ಯಾಯವಾದ ನೀತಿಯನ್ನು ರೂಪಿಸಲು, ದೇಶದಲ್ಲಿ ಕ್ರಾಂತಿಕಾರಿ ಕೃಷಿ ಆಂದೋಲನವನ್ನು ಇನ್ನಷ್ಟು ಬಲಗೊಳಿಸಲು ಈ ವಿಚಾರಸಂಕಿರಣ ನಡೆಯುತ್ತಿದೆ ಎಂದು ಎ.ಐ.ಕೆ.ಎಸ್. ನ ಕಾಂ. ಶಂಕರಯ್ಯ ತನ್ನ ಆರಂಭಿಕ ಭಾಷಣದಲ್ಲಿ ತಿಳಿಸಿದರು. ಈ ವಿಚಾರ ಸಂಕಿರಣ ಕಿಸಾನ್ ಸಭಾ ಹಾಗೂ ಕೃಷಿ ಕೂಲಿಗಾರ ಸಂಘದ ಸಕ್ರಿಯ ಕಾರ್ಯಕರ್ತರು ಈ ರಂಗಗಳಲ್ಲಿ ಅಧ್ಯಯನ ಮಾಡುತ್ತಿರುವ ಸಮಾಜ ವಿಜ್ಞಾನಿಗಳೊಡನೆ ಪರಸ್ಪರ ವಿಚಾರ ವಿನಿಮಯ ಮಾಡಲು ಅವಕಾಶ ಮಾಡಿಕೊಡುತ್ತದೆ ಎಂದು ಅವರು ಹೇಳಿದರು.

ಹೊಸ ಆರ್ಥಿಕ ನೀತಿಗಳು ಹಾಗೂ ಕೃಷಿಯ ಪ್ರಸ್ತುತ ಘಟ್ಟದಲ್ಲಿ ಅವುಗಳ ಪ್ರಭಾವದ ವಿವಿಧ ಅಂಶಗಳ ಬಗ್ಗೆ ಚರ್ಚಿಸಿದ ಪ್ರಬಂಧಗಳನ್ನು ಇಲ್ಲಿ ಮಂಡಿಸಲಾಯಿತು. ಪ್ರಸಿದ್ಧ ಆರ್ಥಿಕ ತಜ್ಞರುಗಳಾದ ಉತ್ಸಾ ಪಟ್ನಾಯಕ್ ಈಗಿನ ಸನ್ನಿವೇಶದಲ್ಲಿ ಭೂಸುಧಾರಣೆಯ ಪ್ರಶ್ನೆಯ ಬಗ್ಗೆ, ಅಭಿಜಿತ್ ಸೇನ್ ನೀರಾವರಿ ಕುರಿತಾದ ಪ್ರಶ್ನೆಗಳ ಬಗ್ಗೆ, ಬೆಲೆ, ಸಬ್ಸಿಡಿ ಇತ್ಯಾದಿ ಕುರಿತಂತೆ ಸೌಮ್ಯಜಿತ್ ಭಟ್ಟಾಚಾರ್ಜಿ, ಸುನಿಲ್ ಬತ್ರಾ, ಸುಜಿತ್ ಜಾನ್ ಹಾಗೂ ಸುಮಂಗಳಾ ದಾಮೋದರನ್, ಹೊಸ ಆರ್ಥಿಕ ನೀತಿ ಮತ್ತು ರೈತರು ಎಂಬ ಬಗ್ಗೆ ಬಿಪ್ಲವ್ ದಾಸ್ ಗುಪ್ತಾ ಹಾಗೂ ಕಾರ್ತಿಕ್ ರಾಯ್ ಪ್ರಬಂಧಗಳನ್ನು ಮಂಡಿಸಿದರು.

ಆಳುವ ವರ್ಗಗಳ ಟೊಳ್ಳುಮಾತು

ಭೂ ಸುಧಾರಣೆಗಳ ಬಗ್ಗೆ ಬಹ

ಪುಟ 6ನೋಡಿ

ಯೆಲ್ಟ್‌ಸಿನ್ ಕೃತ್ಯ ಖಂಡನೀಯ
ಪಾಶ್ಚಿಮಾತ್ಯರ ಗೋಸುಂಬೆತನ ಬಯಲು

ಪೊಲಿಟ್ ಬ್ಯೂರೋ

ರಶ್ಯಾದ ಜನತಾ ಪ್ರತಿನಿಧಿಗಳ ಕಾಂಗ್ರೆಸ್ ಹಾಗೂ ಸುಪ್ರೀಂ ಸೋವಿಯೆತ್‌ನ್ನು ವಿಸರ್ಜಿಸಲು ಅಲ್ಲಿಯ ಅಧ್ಯಕ್ಷ ಬೋರಿಸ್ ಯೆಲ್ಟ್‌ಸಿನ್ ಕೈಗೊಂಡ ಕ್ರಮಗಳು ಅತ್ಯಂತ ಕಾನೂನು ಬಾಹಿರ ಹಾಗೂ ಸಂವಿಧಾನ-ವಿರೋಧಿ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಖಂಡಿಸಿದೆ. ಈಗಿರುವ ಅಲ್ಲಿಯ ಸಂವಿಧಾನ ಸಂಸತ್ತನ್ನು ವಿಸರ್ಜಿಸಲು ಅಧ್ಯಕ್ಷರಿಗೆ ಯಾವುದೇ ಅಧಿಕಾರ ನೀಡುವುದಿಲ್ಲ. ...ಕ ಸಂಕಷ್ಟಗಳು, ದೇಶದ ಆರ್ಥಿಕದಲ್ಲಿಯ ಅರಾಜಕತೆಯಿಂದ ಜನಗಳಲ್ಲಿ ಹೆಚ್ಚೆಚ್ಚು ಅಸಂತೃಪ್ತಿ ಹರಡುತ್ತಿರುವುದನ್ನು ಕಂಡ ಯೆಲ್ಟ್‌ಸಿನ್ ಚುನಾಯಿತ ಸಂಸತ್ತನ್ನು ವಿಸರ್ಜಿಸುವ ಮೂಲಕ ಒಂದು ಕ್ಷಿಪ್ರಕ್ರಾಂತಿ ನಡೆಸುವ ಪ್ರಯತ್ನ ನಡೆಸಿದಾರ. ಆ ದೇಶದ ಸಂವಿಧಾನಿಕ ನ್ಯಾಯಾಲಯ ಕೂಡಾ ಈ ಕೃತ್ಯ ಕಾನೂನು ಬಾಹಿರ ಹಾಗೂ ಯೆಲ್ಟ್‌ಸಿನ್‌ರ ಮೇಲೆ ಮಹಾದೋಷಾರೋಪಣೆ ಹಾಕಲು ಅವಕಾಶ ನೀಡಿದೆ ಎಂದು ಅಭಿಪ್ರಾಯಪಟ್ಟಿದೆ.

ರಶ್ಯಾದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲೆ ಈ ಹಲ್ಲೆಯನ್ನು ಅಮೇರಿಕಾ ಮತ್ತು ಇತರ ಪಾಶ್ಚಿಮಾತ್ಯ ಶಕ್ತಿಗಳು ತಕ್ಷಣ ಸ್ವಾಗತಿಸಿರುವುದು ರಶ್ಯಾದಲ್ಲಿ ಪ್ರಜಾಪ್ರಭುತ್ವ ಬಗ್ಗೆ ಅವರು ಇದು ತೋರುತ್ತಿದ್ದ ಆಸಕ್ತಿ ಕೇವಲ ನಾಟಕ ಎಂದು ತೋರಿಸಿ ಅವರ ಗೋಸುಂಬೆತನವನ್ನು ಬಯಲಿಗೆಳೆದಿದೆ ಎಂದಿರುವ ಪೊಲಿಟ್‌ಬ್ಯೂರೋ ರಶ್ಯಾದ ಪಾರ್ಲಿಮೆಂಟ್ ಜನಗಳನ್ನು ಪ್ರತಿನಿಧಿಸುವ ತನ್ನ ಸಾರ್ವಭೌಮ ಹಕ್ಕನ್ನು ರಕ್ಷಿಸಿಕೊಳ್ಳುವ ನಿಲುವು ತಳೆದಿರುವುದನ್ನು ಸ್ವಾಗತಿಸಿದೆ. ಆ ಬಗ್ಗೆ ತನ್ನ ಸೌಹಾರ್ದವನ್ನು ವ್ಯಕ್ತಪಡಿಸಿದೆ.



ರಶ್ಯನ್ ಸಂಸತ್ತಿನ ಕಟ್ಟಡದ ಎದುರು ಇರುವ ಸೈನಿಕನ ಪ್ರತಿಮೆಯ ಬಂದೂಕಿನನಳಿಗೆಗೆ ಜನ ಸೋವಿಯತ್ ಬಾವುಟ ಕಟ್ಟುತ್ತಿದ್ದಾರೆ

ಅಮೇರಿಕಾದಿಂದ ಸೈ ಎನ್ನಿಸಿಕೊಳ್ಳಲು ಯೆಲ್ಟ್‌ಸಿನ್‌ಗೆ ಭಾರತ ಸರಕಾರದ ಬೆಂಬಲ!

ಯೆಲ್ಟ್‌ಸಿನ್‌ಗೆ ಭಾರತ ಸರಕಾರ ಬೆಂಬಲ ಘೋಷಿಸಿರುವುದನ್ನು ಸಿಪಿಐ(ಎಂ) ವಕ್ತಾರರು ಬಲವಾಗಿ ಖಂಡಿಸಿದ್ದಾರೆ. ವಿದೇಶಾಂಗ ಇಲಾಖೆಯ ಹೇಳಿಕೆ ಯಾವ ಮಟ್ಟದವರೆಗೆ ಹೋಗಿದೆಯೆಂದರೆ "ಮಾರುಕಟ್ಟೆ ಸಂಬಂಧಗಳ ಮೇಲೆ ಆಧಾರಿತ ಆರ್ಥಿಕ ವ್ಯವಸ್ಥೆ"ಯನ್ನು ಸ್ಥಾಪಿಸುವಲ್ಲಿ ಅದು ಯೆಲ್ಟ್‌ಸಿನ್‌ರ ಪಾತ್ರವನ್ನು ಅನುಮೋದಿಸಿದೆ. ಇದು ರಷ್ಯಾ ಯಾವ ರೀತಿಯ ಸಾಮಾಜಿಕ ವ್ಯವಸ್ಥೆ ಅಂಗೀಕರಿಸಬೇಕು ಎಂದು ಪ್ರತಿಪಾದಿಸುವ, ರಷ್ಯಾದ ಆಂತರಿಕ ವ್ಯವಹಾರಗಳಲ್ಲಿ ಭಾರತ ಸರಕಾರ ಮೂಗು ತೂರಿಸುವ ಕ್ರಮವಲ್ಲದೆ ಮತ್ತೇನೂ ಅಲ್ಲ ಎಂದಿರುವ ಸಿಪಿಐ(ಎಂ) ವಕ್ತಾರರು ನರಸಿಂಹ ರಾವ್ ಸರಕಾರ ಯೆಲ್ಟ್‌ಸಿನ್‌ಗೆ ಅಮೇರಿಕನ್ ಬೆಂಬಲವನ್ನು ಅನುಮೋದಿಸಲು ಎಷ್ಟೊಂದು ಕಾತುರವಾಗಿದೆ ಎಂಬುದನ್ನು ಇದು ತೋರಿಸುತ್ತದೆ ಎಂದಿದ್ದಾರೆ. ಇದುವರೆಗೆ ಭಾರತ ತೆಗೆದುಕೊಂಡಿರುವ ನಿಲುವಿಗೆ ಸಂಪೂರ್ಣವಾಗಿ ವಿರುದ್ಧವಾದ ನಿಲುವು ಇದು ಎಂದೂ ಅವರು ಟೀಕಿಸಿದ್ದಾರೆ.

30 ಸಾವಿರ ಜೀವಗಳನ್ನು ನುಂಗಿದ ಭೀಕರ ಭೂಕಂಪ

ಮಹಾರಾಷ್ಟ್ರದಲ್ಲಿ ಸೆಪ್ಟೆಂಬರ್ 30ರ ಮುಂಜಾವಿನಲ್ಲಿ ಸಂಭವಿಸಿದ ಭೀಕರ ಭೂಕಂಪ ಇಡೀ ದೇಶವನ್ನು ತಲ್ಲಣಗೊಳಿಸಿದೆ. ಆ ರಾಜ್ಯದ ಮರಾಠಾವಾಡಾ ಪ್ರದೇಶದ ಲಟೂರ್ ಹಾಗೂ ಒಸ್ಮಾನಾಬಾದ್ ಜಿಲ್ಲೆಗಳಲ್ಲಿ ಭಾರೀ ಸಾವು-ನೋವುಗಳಿಗೆ ಕಾರಣವಾದ ಈ ಭೂಕಂಪ ಕರ್ನಾಟಕದ ಗಡಿ ಜಿಲ್ಲೆಗಳಾದ ವಿಜಾಪುರ, ಗುಲ್ಬರ್ಗಾ ಹಾಗೂ ರಾಯಚೂರಿನ ಹಲವೆಡೆಗಳಲ್ಲೂ ಹಾನಿಯುಂಟುಮಾಡಿದೆ. ಅಷ್ಟೇ ಅಲ್ಲ ಆಂಧ್ರ, ಮಧ್ಯಪ್ರದೇಶ, ಗುಜರಾತ್, ಗೋವಾ, ತಮಿಳುನಾಡು, ಪುದುಚೇರಿ, ಕೇರಳಗಳಲ್ಲೂ ಭೂಕಂಪದ ಬಿಸಿ ತಟ್ಟಿದೆ. ಈ ದಶಕದಲ್ಲಿ ವಿಶ್ವದಲ್ಲೇ 4 ನೇ ದೊಡ್ಡ ಭೂಕಂಪ, ಭಾರತದಲ್ಲಿ ಕಳೆದ ಐದು ದಶಕಗಳಲ್ಲಿ ಅತ್ಯಂತ ಭೀಕರ ನರಸಂಹಾರ ಮಾಡಿರುವ ಭೂಕಂಪ ಇದು ಎಂದು ಹೇಳಲಾಗಿದೆ.

ಮಹಾರಾಷ್ಟ್ರದ ಲಟೂರ್ ಜಿಲ್ಲೆಯ ಖಿಲಾರಿ ಹಾಗೂ ಸುತ್ತಮುತ್ತಲಿನ ಸುಮಾರು 30 ಹಳ್ಳಿಗಳು ಸಂಪೂರ್ಣವಾಗಿ ಧ್ವಂಸವಾಗಿವೆ, ಕಲ್ಲು-ಮಣ್ಣಿನ ಮನೆಗಳು ಕುಸಿದು ಮುಂಜಾವಿನ ಗಾಢನಿದ್ರೆಯಲ್ಲಿದ್ದ ಸಾವಿರಾರು ಮಂದಿ ತಂತಮ್ಮ ಮನೆಗಳಲ್ಲೇ ಸಮಾಧಿಯಾದರು. ಬದುಕುಳಿದವರು ಎಲ್ಲಾ ಕಳಕೊಂಡು ಹಾಹಾಕಾರ ಮಾಡುವಂತಾಗಿದೆ. ಕರ್ನಾಟಕದ ಮೂರು ಗಡಿ ಜಿಲ್ಲೆಗಳಲ್ಲೂ ನೂರಾರು ಮನೆಗಳು, ಗುಡಿಸಲುಗಳು ಕುಸಿದು 13 ಸಾವುಗಳು ಸಂಭವಿಸಿವೆ ಎಂದು ವರದಿಯಾಗಿದೆ. ಒಟ್ಟು ಸಾವು 30 ಸಾವಿರ ಮೀರುವ ಸದಭವವಿದೆ.

ಲಟೂರ್ ಜಿಲ್ಲೆಯ ಹಲವು ಕಡೆ ಕಳೆದ ಒಂದು ವರ್ಷದಲ್ಲಿ ಹಲವು ಬಾರಿ ಲಘು ಭೂಕಂಪಗಳಾಗಿದ್ದರೂ ಇಂತಹ ಭೀಕರ ಭೂಕಂಪ ಸಂಭವಿಸಬಹುದೆಂಬ ನಿರೀಕ್ಷೆ ಇರಲಿಲ್ಲ ಎಂದು ಪರಿಣತರು ಹೇಳಿದ್ದಾರೆ. ಭಾರತದಲ್ಲಿ ಹಿಮಾಲಯ ಪ್ರದೇಶ ದಖ್ಖಣ ಪ್ರಸ್ಥಭೂಮಿಗಿಂತ ನಂತರ ರೂಪುಗೊಂಡಿರುವುದರಿಂದ ಅಲ್ಲೇ ಭೂಕಂಪದ ಸಂಭವ ಹೆಚ್ಚು. ದಖ್ಖಣ ಪ್ರಸ್ಥಭೂಮಿಯಲ್ಲಿ ಇಷ್ಟೊಂದು ಭೀಕರ ಭೂಕಂಪ ಅನೀರಿಕ್ಷಿತ ಎಂದು ಹೇಳಲಾಗಿದೆ. ಆದರೆ ಲಟೂರ್ ಜಿಲ್ಲಾ ಆಡಳಿತವಾಗಲೀ, ಮಹಾರಾಷ್ಟ್ರ ಸರ್ಕಾರವಾಗಲೀ ಈ ಬಗ್ಗೆ ಏನೂ ಕ್ರಮ ಕೈಗೊಳ್ಳದಿರಲು ಇದು ಕಾರಣವಲ್ಲ. ಜನಸಾಮಾನ್ಯರ ಜೀವ-ಆಸ್ತಿಗಳ ಬಗ್ಗೆ ಸಾಮಾನ್ಯವಾಗಿ ಬೆಳೆದಿರುವ ನಿರ್ಲಕ್ಷ್ಯವೇ ಇದಕ್ಕೆ ಮುಖ್ಯಕಾರಣ.

ಗೋಳನ್ನು ನೂರ್ಮಡಿಗೊಳಿಸುವ ಅಸಮಾನತೆಯ ಸಮಾಜ

ಎಂದಿನಂತೆ ಪ್ರಾಕೃತಿಕ ವಿಕೋಪಗಳಲ್ಲೂ ಅತೀ ಹೆಚ್ಚು ಹಾನಿಗೀಡಾಗುವವರು ಸಮಾಜದ ಬಡವಿಭಾಗಗಳ ಜನ. ವಿಜ್ಞಾನ-ತಂತ್ರಜ್ಞಾನದ ಸಾಧನೆಗಳ ಪ್ರಯೋಜನ ಇವರನ್ನು ತಲುಪುವುದು ಭಾರೀ ವಿಳಂಬದ ನಂತರ. ಸಂಪೂರ್ಣ ಧ್ವಂಸವಾದ ಖಿಲ್ಲಾರಿ ಗ್ರಾಮ ವೈಜ್ಞಾನಿಕ ಕಬ್ಬು ಕೃಷಿಗೆ, ಸಿಹಿಸಕ್ಕರೆಗೆ ಹೆಸರಾದ ಗ್ರಾಮ. ಸಮಾಜದ ಸಂಪನ್ನ ವಿಭಾಗಗಳಿಗೆ ವೈಜ್ಞಾನಿಕ ಕೃಷಿಯ ಪ್ರಯೋಜನಗಳು ತಲುಪಿದ್ದರೂ ಕೇಂದ್ರ ಕಟ್ಟಡ ನಿರ್ಮಾಣ ಸಂಶೋಧನಾ ಸಂಸ್ಥೆ ವಿಕಾಸ ಗೊಳಿಸಿರುವ ಭೂಕಂಪ- ನಿರೋಧಕ ಸರಳ ಮನೆಗಳ ತಂತ್ರಜ್ಞಾನ ಈ ಹಳ್ಳಿಯನ್ನು ತಲುಪಿಲ್ಲ. ಇನ್ನೂ ಯಾವ ಹಳ್ಳಿಯನ್ನೂ ತಲುಪಿಲ್ಲ. ಈ ಭೂಕಂಪದಿಂದ ಬಹುಪಾಲು ಮಂದಿ ಮನೆಕುಸಿದು ಸತ್ತಿರುವುದನ್ನು ಗಮನಿಸಿದರೆ ಇಂತಹ ಭೂಕಂಪನ-ನಿರೋಧಕ ಸರಳ ತಂತ್ರಜ್ಞಾನವನ್ನು ಬಳಸಿದ್ದರೆ ಎಷ್ಟೋ ಜೀವಗಳು ಉಳಿಯುತ್ತಿದ್ದವು ಎಂದು ನೆನೆಸಿಕೊಂಡಾಗ ತೀವ್ರ ಕಸಿವಿಸಿಯುಂಟಾಗುವುದು ಸಹಜ. ಇಂತಹ ವಿಕೋಪಗಳು ಸಂಭವಿಸಿದ ನಂತರವೂ ಅಗತ್ಯ ಪರಿಹಾರದಿಂದ ವಂಚಿತರಾಗುವವರು ಕೂಡಾ ಸಮಾಜದ ಬಡ ವಿಭಾಗಗಳ ಜನ, ಪರಿಹಾರದ ಅತೀ ಹೆಚ್ಚು ಅಗತ್ಯ ವಿರುವ ಜನ. ಎರಡು ವರ್ಷಗಳ ಹಿಂದೆ ಉತ್ತರ ಕಾಶಿಯಲ್ಲಿ ಭೂಕಂಪ-ಪೀಡಿತ ಬಡವರ ಗೋಳು ಇನ್ನೂ ಮುಗಿದಿಲ್ಲ. ಅಲ್ಲಿಯ ಸಾವು- ನೋವು ಈ ಭೀಕರ ದುರಂತದ ಹತ್ತನೇ ಒಂದಂಶ ಮಾತ್ರ ಎಂಬುದನ್ನು ಗಮನಿಸಿದರೆ ಈ ಬಾರಿಯ ದುರಂತ ಪೀಡಿತ ಜನಸಾಮಾನ್ಯರ ಗೋಳು ಏನಾಗಬಹುದು ಎಂದು ಊಹಿಸಿಕೊಳ್ಳಬೇಕಷ್ಟೆ. ಆದ್ದರಿಂದಲೇ ವಿವಿಧ ಜನವಿಭಾಗಗಳ ನಡುವೆ ಸಾಮಾಜಿಕ ಅಸಮಾನತೆ, ಅನ್ಯಾಯದ ವಿರುದ್ಧ ಹೋರಾಡುತ್ತಿರುವ ಸಾಮೂಹಿಕ ಸಂಘಟನೆಗಳು ಮಧ್ಯಪ್ರವೇಶಿಸಬೇಕು, ದುರಂತ ಪೀಡಿತರ ನೆರವಿಗೆ ಧಾವಿಸಬೇಕು, ಸರ್ಕಾರ, ಆಡಳಿತ ಚುರುಕಿನಿಂದ ಪರಿಹಾರ ತಲುಪಿಸುವಂತೆ ಒತ್ತಡ ಹಾಕಬೇಕು.

ಸಿಪಿಐ(ಎಂ) ಪೊಲಿಟ್‌ಬ್ಯೂರೋ ಈ ಭೀಕರ ದುರಂತ ನಡೆದಿರುವ ಬಗ್ಗೆ ತನ್ನ ಆಘಾತ ಹಾಗೂ ಅತೀವ ದುಃಖವನ್ನು ವ್ಯಕ್ತಪಡಿಸಿದೆ. ಸಿ.ಪಿ.ಐ(ಎಂ) ರಾಜ್ಯ ಘಟಕವು ಕರ್ನಾಟಕದ ಪಕ್ಷದ ಘಟಕಗಳು ಮತ್ತು ಸಾಮೂಹಿಕ ಸಂಘಟನೆಗಳು ಕೂಡಲೇ ಸ್ಥಳಕ್ಕೆ ಧಾವಿಸಿ ಸಾಧ್ಯವಿದ್ದ ಎಲ್ಲಾ ಸಹಾಯವನ್ನು ಭೂಕಂಪದಿಂದ ಹಾನಿಗೊಳಗಾದ ಜನತೆಗೆ ಕೊಡಲು ಮುಂದಾಗಬೇಕೆಂದು ಕರೆ ಕೊಟ್ಟಿದೆ.

ಬಿಜೆಪಿಯ ದಿವಾಳಿಕೋರತನವನ್ನು ಸಾರಿದ "ಜನಾದೇಶ" ಯಾತ್ರೆಗಳು

"ನಾಲ್ಕು ರಾಜ್ಯಗಳಲ್ಲಿ ನಾವು ಅಯೋಧ್ಯಾ ಪ್ರಶ್ನೆಯ ಮೇಲೆಯೇ ಚುನಾವಣಾ ಹೋರಾಟ ನಡೆಸುತ್ತೇವೆ"- ನಾಲ್ಕು ಯಾತ್ರೆಗಳ ನಂತರ ದಿಲ್ಲಿಗೆ ಹಿಂದಿರುಗಿದ ಬಿಜೆಪಿ ಅಧ್ಯಕ್ಷ, ಎಲ್.ಕೆ. ಅಡ್ವಾಣಿಯವರು ಬಿಜೆಪಿ ಕೇಂದ್ರ ಮುಖಂಡರ ಸಭೆಯ ನಂತರ ನೀಡಿದ ಹೇಳಿಕೆ, ಅಡ್ವಾಣಿಯವರ ಈ ಹೇಳಿಕೆಯಲ್ಲಿ ಅದಕ್ಕಿಂತಲೂ ಬಹಳ ದೀರ್ಘವಾದ ಟಿಪ್ಪಣಿಗಳಲ್ಲಿ ಎಲ್ಲೂ ಬೇರೆ ಯಾವುದೇ ವಿಷಯದ ಪ್ರಸ್ತಾಪವಿರಲಿಲ್ಲ. ಆರ್ಥಿಕ ವಿಷಯಗಳು, ಬೆಲೆಯೇರಿಕೆ, ಭ್ರಷ್ಟಾಚಾರ, ನಿರುದ್ಯೋಗ ಇತ್ಯಾದಿ ಯಾವುದರ ಪ್ರಸ್ತಾಪವೂ ಇರಲಿಲ್ಲ ಎಂದೂ "ಹಿಂದೂ"ಪತ್ರಿಕೆಯ ವಿಶೇಷ ವರದಿಗಾರರು ಬರೆದಿದ್ದಾರೆ. (ಸೆಪ್ಟೆಂಬರ್ 27) ಏಕೆ ಈ ಒಂದು ಉದ್ರೇಕಕಾರಿ ವಿಷಯವನ್ನಷ್ಟೇ ನೀವು ಮತ್ತೆ-ಮತ್ತೆ ಎತ್ತುತ್ತೀರಿ ಎಂದು ಪತ್ರಕರ್ತರು ಕೇಳಿದಾಗಲಷ್ಟೇ ಭ್ರಷ್ಟಾಚಾರ, ಕಾಶ್ಮೀರ, ಡಂಕೆಲ್ ಪ್ರಸ್ತಾಪಗಳು ಇತ್ಯಾದಿ ಬಗ್ಗೆ ಒಂದು ನೀತಿ ನಿರೂಪಣಾ ಹೇಳಿಕೆಯನ್ನು 'ಸದ್ಯದಲ್ಲೇ' ಹೊರಡಿಸುತ್ತೇವೆ ಎಂದರಂತೆ.

ತಮ್ಮ "ಜನಾದೇಶಯಾತ್ರೆ"ಯ ಸಂಧರ್ಭದಲ್ಲೂ ಬಿಜೆಪಿಯ ಹಿಂದಿನ ವಿಜಯಗಳಲ್ಲಿ ಶ್ರೀ ರಾಮನ ಪ್ರಸಾದವೇ ಪ್ರಮುಖವಾಗಿತ್ತು, ಈ ಬಾರಿ ಕೂಡಾ ನಾಲ್ಕು ರಾಜ್ಯಗಳ ಚುನಾವಣಾ ಪ್ರಚಾರದಲ್ಲಿ ಅದೇ ಪ್ರಮುಖ ಅಂಶ ಎಂದು ಒತ್ತಿ ಹೇಳಿದರು.

ನಾಲ್ಕು ರಾಜ್ಯಗಳಲ್ಲಿ ಆಡಳಿತ ನಡೆಸಿದ, ಕೇಂದ್ರದಲ್ಲಿ ಅತೀ ದೊಡ್ಡ ವಿರೋಧ ಪಕ್ಷವೆನಿಸಿಕೊಂಡ, ನಾಳೆ ತನ್ನದೇ ಅಧಿಕಾರ ಎಂದು ಬೀಗುವ ಈ ರಾಜಕೀಯ ಪಕ್ಷಕ್ಕೆ ಜನತೆಯ ಮುಂದಿಡಲು ಬೇರೇನೂ ಇಲ್ಲ ಎಂಬ ಇದಕ್ಕಿಂತ ದೊಡ್ಡ ತಪ್ಪೊಪ್ಪಿಗೆ ಬೇರೆ ಬೇಕೆ? ಇದಕ್ಕಿಂತ ನಾಚಿಕೆಗೇಡಿನ ದಿವಾಳಿ ಕೋರತನದ ಪ್ರದರ್ಶನ ಬೇರೆ ಸಾಧ್ಯವೇ?

ಬಿಜೆಪಿಗೆ ಅಯೋಧ್ಯೆ ಬಿಟ್ಟು ಬೇರೆ ವಿಷಯಗಳೂ ಗೊತ್ತು, ಅದು ಬೇರೆ ವಿಷಯಗಳ ಬಗ್ಗೆಯೂ ಗಮನ ಹರಿಸುತ್ತಿದೆ, ತನ್ನ ನೆಲೆಯನ್ನೂ ವ್ಯಾಪಕಗೊಳಿಸುತ್ತಿದೆ ಎಂದು ಬೆಂಗಳೂರು ಸಭೆಯ ನಂತರ ಹಲವು ಪತ್ರಕರ್ತರು ನಂಬಿದರು. ಆಗಾಗ ಬಿಜೆಪಿ ಮುಖಂಡತ್ವ ಭ್ರಷ್ಟಚಾರ, ಬಹುರಾಷ್ಟ್ರೀಯ ಕಂಪೆನಿಗಳ ಪ್ರವೇಶ, ಡಂಕೆಲ್ ಪ್ರಸ್ತಾಪಗಳು ಇತ್ಯಾದಿಗಳ ಬಗ್ಗೆ ದೊಡ್ಡೆಯೆಬ್ಬಿಸುತ್ತಲೂ ಇತ್ತು. ಈ ಯಾತ್ರೆಗಳು ಕೂಡಾ ಧರ್ಮವನ್ನು ರಾಜಕೀಯದಿಂದ ಪ್ರತ್ಯೇಕಿಸುವ ಮಸೂದೆಗಳ ವಿರುದ್ಧ ಜನಾಭಿಪ್ರಾಯ ಮೂಡಿಸಲು ಎಂದು ಘೋಷಿಸಿದ್ದರೂ ಯಾತ್ರೆಗಳ ಸಮಯದಲ್ಲಿ ಈ ವಿಷಯಕ್ಕೆ ಜನಗಳು ನಿರಾಸಕ್ತಿ ತೋರಿದನ್ನು ಕಂಡ ಬಿಜೆಪಿ ಮುಖಂಡರು ತಮ್ಮ ಏಕಮಾತ್ರ ಅಸ್ತ್ರ 'ರಾಮಜನ್ಮಭೂಮಿ' ಮೂಲಕ ಕೋಮುಭಾವನೆಗಳನ್ನು ಉದ್ರೇಕಿಸುವ ಎಂದಿನ ತಂತ್ರವನ್ನೇ ಬಳಸಬೇಕಾಯಿತು.

ಬೇರೇನು ತಾನೇ ಮಾಡಬಲ್ಲರು? ಮಧ್ಯಪ್ರದೇಶದಲ್ಲಿ ಹತ್ತಾರು ಮಿಲ್ಲುಗಳು ಮುಚ್ಚುತ್ತಿರುವಾಗ, ಹಿಮಾಚಲ ಪ್ರದೇಶದಲ್ಲಿ ಕಾರ್ಮಿಕರು ಮತ್ತೆ -ಮತ್ತೆ ಮುಷ್ಕರ ನಡೆಸಬೇಕಾದ ಪರಿಸ್ಥಿತಿಯಿರುವಾಗ ರಾಜಸ್ಥಾನದಲ್ಲಿ ರೈತಾಪಿ ವರ್ಗ ಈಗಲೂ ವಿನಾಶಕಾರಿ ಪ್ರವಾಹದಿದ ನರಳುತ್ತಿರುವಾಗ, ಉತ್ತರ ಪ್ರದೇಶದಲ್ಲಿ ಎಂದು ಮತ್ತೆ ಹಿಂಸಾಚಾರ ಭುಗಿಲೆನ್ನುತ್ತದೋ ಎಂಬ ಭಯ ಜನರನ್ನು ವ್ಯಾಪಿಸಿರುವಾಗ ತನ್ನ ಕಾರ್ಯನಿರ್ವಹಣೆ, ರಾಜ್ಯಭಾರದ 'ಫಲ'ಗಳನ್ನು ತೋರಿಸಿ ನಾಲ್ಕು ರಾಜ್ಯಗಳ ಮತದಾರಲ್ಲಿ ಮತ್ತೆ ಮತ ಕೇಳಲು ಹೇಗೆ ಸಾಧ್ಯ? ಆದ್ದರಿಂದ ಯಾತ್ರೆ ಅವರ ನೆರವಿಗೆ ಬರುವಂತದ್ದು "ಅಯೋಧ್ಯೆ" ಮಾತ್ರ. ಆದ್ದರಿಂದಲೇ ಮತ್ತೆ ಈ 'ಯಾತ್ರೆ'ಗಳ ರಾಜಕೀಯ.

1991 ರಲ್ಲಿ ದೇಶದ ಎಲ್ಲರಿಕಿಂತಲೂ ದೊಡ್ಡ ವಿರೋಧಿ ಪಕ್ಷವಾಗಿ ಮೂಡಿಬಂದ, ಡಿಸೆಂಬರ್ 1992ರ ಬಾಬ್ರಿ ಮಸೀದಿ ಧ್ವಂಸದ ನಂತರ ದೇಶದ ರಾಜಕೀಯದ ಅಜೆಂಡಾವನ್ನು ರೂಪಿಸುವುದು ತಾನೇ ಎಂದು ಮೆರೆಯಲಾರಂಭಿಸಿದ ಈ ಪಕ್ಷ, ಕಳೆದೆರಡು ತಿಂಗಳಲ್ಲಿ ಮೂಲೆಗೆ ತಳ್ಳಲ್ಪಟ್ಟಿತ್ತು. ಸಂಸತ್ತಿನಲ್ಲಿ ಸಿಪಿಐ(ಎಂ) ತಂದ ಅವಿಶ್ವಾಸ ಠರಾವು ಆ ಠರಾವಿನ ಮೇಲಿನ ಚರ್ಚೆಯಲ್ಲಿ ಎತ್ತಿ ತೋರಲ್ಪಟ್ಟ ವಿಷಯಗಳು, ಅವಿಶ್ವಾಸ ಠರಾವನ್ನು ಬೆಂಬಲಿಸಲು ಅದು ಬಾರೀ ಸದ್ದುಗದ್ದಲದೊಂದಿಗೆ ಹಾಕಿದ ಶರತ್ತುಗಳನ್ನು ತಾನೇ ಕೈಬಿಡಬೇಕಾದ ಸ್ಥಿತಿ, ಆಗಸ್ಟ್ 19ರ ಬೃಹತ್ ಜೈಲ್ ಭರೋ, ಸೆಪ್ಟೆಂಬರ್ 9ರ ಭಾರತ್ ಬಂದ್, ಅದರ ಬೆನ್ನ ಹಿಂದೆಯೇ ಚೌರಿಂಗಿ, ಒಟ್ಟಪಾಳಂಗಳಲ್ಲಿ ಸಿಪಿಐ(ಎಂ)ನ ಮಹತ್ವದ ಚುನಾವಣಾ ವಿಜಯಗಳು ದೇಶದ ಮುಂದೆ ಬೇರೊಂದೇ ಅಜೆಂಡಾವನ್ನು ಇಟ್ಟಾಗ ಕಕ್ಕಾಬಿಕ್ಕಿಯಾದ ಬಿಜೆಪಿ ಮತ್ತೆ ತನ್ನ ಇರುವು ತೋರಿಸಿಕೊಳ್ಳಲು ಈ 'ಜನಾದೇಶ ಯಾತ್ರೆ'ಗಳ ಮೊರಹೋಗಬೇಕಾಯಿತು.

ಡಿಸೆಂಬರ್ 6 ರ ಧ್ವಂಸಕಾರ್ಯದ ನಂತರ, ವಿಶೇಷವಾಗಿ ತನ್ನ ಬೆಂಗಳೂರು ಅಧಿವೇಶನದ ನಂತರ ಬೇರೆ ಪ್ರತಿಯೊಂದು ರಂಗದಲ್ಲೂ ತಾನು ಕಾಂಗ್ರೆಸ್(ಐ)ಗೆ

ಪುಟ 8ನೋಡಿ

ಬಿಜೆಪಿಯ "ಧರ್ಮ" ಎಂತದ್ದು?

ಬಿಜೆಪಿ ಮುಖಂಡರು ಧರ್ಮ, ಅಧರ್ಮಗಳ ಬಗ್ಗೆ ಉಪದೇಶ ಝಾಡಿಸಿದ ಈ ಯಾತ್ರೆಗಳ ಒಂದು ಗಮನಾರ್ಹ ಅಂಶವೆಂದರೆ ಕ್ರಿಮಿನಲ್‌ಗಳಿಂದ ಈ ಪಕ್ಷ ಪಡೆಯುತ್ತಿರುವ ಬೆಂಬಲ. ಮುರಳಿ ಮನೋಹರ ಜೋಷಿಯವರು ಗುಜರಾತಿನ ಪೋರ್‌ಬಂದರ್‌ನಿಂದ ಆರಂಭಿಸಿದ 'ಯಾತ್ರೆ'ಯಲ್ಲಿ ಇದು ಅತ್ಯಂತ ನಗ್ನವಾಗಿ ಕಂಡುಬಂದರೆ, ಇತರೆಡೆ ಬೇರೆ ಬೇರೆ ಮಟ್ಟಗಳಲ್ಲಿ ಕಂಡುಬಂತು.

ಜೋಷಿಯವರ ಯಾತ್ರೆ ಆರಂಭಿಸಿದ ಪೋರ್ ಬಂದರ್‌ನ ಕುಖ್ಯಾತ ಕಳ್ಳ ಸಾಗಾಣಿಕೆದಾರ ಗೋವಿಂದ್ ತೋರ್ರೈನಾ. ಗೋವಿಂದ್ ತಿತಿ ಎಂದೇ ಕುಖ್ಯಾತನಾದ ಈತನ ಮೇಲೆ ಸುಮಾರು 25 ಕ್ರಿಮಿನಲ್ ಕೇಸ್‌ಗಳಿವೆ. ಕೊಲೆ ಪ್ರಯತ್ನ, ದಂಗೆ, ಕಳ್ಳಸಾಗಾಣಿಕೆ ಇತ್ಯಾದಿ ಕೇಸ್‌ಗಳು. ಮಾಫಿಯಾದ ರೀತಿಯಲ್ಲಿ ಕೋಟಿಗಟ್ಟಲೆ ವ್ಯವಹಾರಗಳ ಸಾರಿಗೆ ಉದ್ದಿಮೆಯನ್ನು, ವ್ಯಾಪಾರವನ್ನು ತನ್ನ ಹತೋಟಿಯಲ್ಲಿ ಇಟ್ಟುಕೊಂಡಿರುವ ಈತ ಬಿಜೆಪಿಯ ಪೋರ್‌ಬಂದರ್ ನಗರ ಘಟಕದ ಮುಖ್ಯಸ್ಥನಂತೆ. ಈತ ಬಹಿರಂಗವಾಗಿ ಉದ್ಘಾಟಿಸಿದ 'ಯಾತ್ರೆ'ಯಲ್ಲಿ ಮುರಳೀ ಮನೋಹರ ಜೋಷಿಯವರು "ಈಗ ಸಾರ್ವಜನಿಕ ಜೀವನದಲ್ಲಿ ಸತ್ಯವನ್ನು, ಧರ್ಮವನ್ನು ಮತ್ತೆ ತರಬೇಕಾಗಿದೆ. ಬಿಜೆಪಿ ಮಾತ್ರವೇ ಧರ್ಮವನ್ನು ಎತ್ತಿ ಹಿಡಿಯುವಂತದ್ದು" ಎಂದರಂತೆ! ಇಷ್ಟೇ ಅಲ್ಲ. ಈ "ಯಾತ್ರೆ"ಗಳಲ್ಲಿ ಕಂಡು ಬಂದ ಸಾಲು ಸಾಲು ವಾಹನಗಳು, ಹಣವನ್ನು ನೀರಿನಂತೆ ಖರ್ಚುಮಾಡಿದ ಅಲಂಕಾರಗಳು, ಪತ್ರಿಕಾ ಪ್ರಚಾರಗಳು ಇವಕ್ಕೆಲ್ಲಾ ಲಕ್ಷಾಂತರ ರೂಪಾಯಿ ಹರಿದು ಹೋಯಿತು. ಇವೆಲ್ಲಾ ಎಲ್ಲಿಂದ ಬಂದವು? ಕಾಳಸಂತೆಕೋರರ ಜೇಬಿನಲ್ಲಿರುವ ಕಪ್ಪ ಹಣದಿಂದ, ಈಗ ಬಿಜೆಪಿಯತ್ತ ನೋಡುತ್ತಿರುವ ದೊಡ್ಡ ಬಂಡವಾಳಿಗರ ತೆರಿಗೆ ತಪ್ಪಿಸಿದ ಲಾಭಗಳಿಂದ. ಇಂತಹ ಪಕ್ಷ ಬೆಂಗಳೂರು ಸಭೆಯ ನಂತರ ಹರ್ಷದ್ ಮೆಹ್ತಾ ಪ್ರಕರಣದ ಹಿನ್ನೆಲೆಯಲ್ಲಿ ಜೂನ್ 26 ರಿಂದ ಸೆಪ್ಟೆಂಬರ್ 25 ರ ವರೆಗೆ ಸಾರ್ವಜನಿಕ ಜೀವನದಲ್ಲಿ ಭ್ರಷ್ಟಾಚಾರದ ವಿರುದ್ಧ ನಡೆಸುತ್ತೇನೆ ಎಂದ "ಭಾರಿ ಪ್ರಕ್ಷೋಭೆ" ಆರಂಭವೇ ಆಗಗಿದ್ದರೆ ಆಶ್ಚರ್ಯವೇನಿದೆ? ಈ ಪಕ್ಷ ಎತ್ತಿ ಹಿಡಿಯುವ "ಧರ್ಮ" ದ ಹೂರಣವೇ ಅದು.

ಒಂದು ಲಕ್ಷ "ಧಾರ್ಮಿಕ" ವಿಡಿಯೋ ಕ್ಯಾಸೆಟ್ಟುಗಳು!

ಜನಗಳ ಮುಂದಿಡಲು ಯಾವುದೇ ವಿಶಿಷ್ಟ ಸಾಮಾಜಿಕ-ಆರ್ಥಿಕ ನೀತಿಗಳಿಲ್ಲದ ಈ ಪಕ್ಷ ಸಹಜವಾಗಿಯೇ ಧಾರ್ಮಿಕ ಸಂಕೇತಗಳನ್ನೇ ಬಳಸುತ್ತದೆ. ಆದ್ದರಿದಲೇ 'ಈಗ ಸಂಸತ್ತಿನ ಮುಂದಿರುವ ಮಸೂದೆಗಳ ಬಗ್ಗೆ ಅದಕ್ಕೆ ಎಲ್ಲಿಲ್ಲದ ಭಯ.

ಇತ್ತೀಚೆಗೆ ಬಿಜೆಪಿ ನಡೆಸಿದ "ಮಾಧ್ಯಮ ವರ್ಕ್‌ಶಾಪ್"ನಲ್ಲಿ ಉತ್ತರ ಭಾರತದಲ್ಲಿ ವ್ಯಾಪಕವಾಗಿ ನಡೆಯುವ ಹತ್ತು ದಿನಗಳ ರಾಮಲೀಲಾ ಕಾರ್ಯಕ್ರಮಗಳನ್ನು ತನ್ನ ಚುನಾವಣಾ ಪ್ರಚಾರಕ್ಕೆ ಬಳಸಿಕೊಳ್ಳಲು ಯೋಜನೆ ಹಾಕಿದೆ ಎಂದು "ಟೈಂಸ್ ಆಫ್ ಇಂಡಿಯಾ" ಪ್ರಕಟಿಸಿದೆ. ಈ ಯೋಜನೆಯ ಪ್ರಚಾರ ಸುಮಾರು ಒಂದು ಲಕ್ಷ ರಾಮಲೀಲಾ ಕಮಿಟಿಗಳಿಗೆ ಅಗ್ಗ ದರದಲ್ಲಿ 'ರಾಮಲೀಲಾ'ದ ವಿವಿಧ ಪ್ರಕರಣಗಳನ್ನು ತೋರುವ, ಅದರಲ್ಲಿ "ಅತ್ಯಂತ ಸೂಕ್ಷ್ಮವಾಗಿ ಪ್ರಸ್ತುತ ಸನ್ನಿವೇಶವನ್ನು ಬೆರೆಸಿದ" ವಿಡಿಯೋ ಕ್ಯಾಸೆಟ್ಟುಗಳನ್ನು ನೀಡಲಾಗುವುದು. ತನ್ನ ಬಳಿಯಿರುವ ಅಪಾರ ನಿಧಿಯ "ಧಾರ್ಮಿಕ"ಬಳಕೆಯ ರೀತಿಯಿದು!

ಇತಿಹಾಸದ ಪುಟಗಳಿಂದ

ಕಾಂ. ಇ.ಎಂ.ಎಸ್.

ಭಾರತದ ಕಮ್ಯುನಿಸ್ಟರು ಅಂಗೀಕರಿಸಬೇಕಾದದ್ದು ಭಾರತದ ಮಾರ್ಗವೇ ಎಂದು ತಿಳಿಸಿದ ಕಾಂ. ಲೂ ನಿಂಗ್

ಅಂತರಾಷ್ಟ್ರೀಯ ಕಾರ್ಮಿಕ ಚಳುವಳಿಯ ಮುಖಂಡರಾದ ಚೈನಾದ ಕಾಂ. ಲೂ ನಿಂಗ್ 1951ರ ಮೊದಲ ಭಾಗದಲ್ಲಿ ಭಾರತಕ್ಕೆ ಭೇಟಿ ನೀಡಿದರು. ಈ ಭೇಟಿಯ ಭಾಗವಾಗಿ ಅವರು ಕಲ್ಕತ್ತಕ್ಕೂ ಭೇಟಿ ಕೊಟ್ಟರು. ನನಗೆ ವಹಿಸಿದ್ದ ಜವಾಬ್ದಾರಿಯ ಪ್ರಕಾರ ಇವರು ನಾನು ಭೇಟಿ ಮಾಡಿದ ಎರಡನೇ ಅಂತರಾಷ್ಟ್ರೀಯ ಕಮ್ಯುನಿಸ್ಟ್ ಮುಖಂಡರು.

ಅಂದು ಕಾನೂನುಬಾಹಿರವಾಗಿದ್ದ ಕಮ್ಯುನಿಸ್ಟ್ ಪಕ್ಷದ ಕಲ್ಕತ್ತಾದಲ್ಲಿ ಕೇಂದ್ರ ಕಛೇರಿಯಲ್ಲಿ ನಾನು ಭೂಗತವಾಗಿ ಕೆಲಸ ಮಾಡುತ್ತಿದ್ದೆ. ಈ ಸಂದರ್ಭದಲ್ಲಿ ಪಕ್ಷದ ಕಾರ್ಯದರ್ಶಿಯಾಗಿದ್ದ ಅಜಯ್‌ಘೋಷ್, ಪಿ.ಬಿ. ಸದಸ್ಯರಾದ ಡಾಂಗೆ, ಬಸವಪುನ್ನಯ್ಯ, ರಾಜೇಶ್ವರರಾವ್ ಇವರುಗಳು ಸೋವಿಯತ್ ಕಮ್ಯುನಿಸ್ಟ್ ಪಕ್ಷದ ಜೊತೆ ಚರ್ಚಿಸಲು ಮಾಸ್ಕೋಗೆ ಕಾನೂನುಬಾಹಿರವಾಗಿ ತೆರಳಿದ್ದರು. ಇಂತಹ ಪರಿಸ್ಥಿತಿಯಲ್ಲಿ ಕಚೇರಿಯಲ್ಲಿದ್ದ ಏಕೈಕ ಪಿ.ಬಿ. ಸದಸ್ಯನಾಗಿದ್ದ ನಾನು ಚೈನಾದ ಕಮ್ಯುನಿಸ್ಟ್ ಮುಖಂಡರ ಜೊತೆ ಚರ್ಚಿಸಬೇಕಾಗಿತ್ತು.

ಇವರ ಜೊತೆ ಚರ್ಚೆ ಮಾಡಲು ನನಗೆ ಅವಕಾಶ ದೊರೆತದ್ದು ನನ್ನ ಮಟ್ಟಿಗೆ ಹೇಳುವುದಾದರೆ ಬಹಳ ಸಂತೋಷದ ವಿಷಯವಾಗಿತ್ತು. ಏಕೆಂದರೆ ಪಕ್ಷದ ಕಲ್ಕತ್ತ ಅಧಿವೇಶನದಲ್ಲಿ ಬಿ.ಟಿ.ಆರ್. ರವರ ನೇತೃತ್ವದಲ್ಲಿ ರಚನೆಯಾಗಿದ್ದ ಕೇಂದ್ರ ಸಮಿತಿಯ ಸ್ಥಾನವಲ್ಲಟವಾಗಿ ರಾಜೇಶ್ವರರಾವ್ ನೇತೃತ್ವದ ಸಮಿತಿ ಅಸ್ತಿತ್ವಕ್ಕೆ ಬಂದಿತ್ತು. ಭಾರತದ ಕ್ರಾಂತಿಯ ಹಾದಿ ಹೇಗಿರಬೇಕೆಂಬ ವಿಷಯಕ್ಕೆ ಸಂಬಂಧಿಸಿ ನಡೆದಿದ್ದ ಈ ಪ್ರಕ್ರಿಯೆಯ ಸಂದರ್ಭದಲ್ಲಿ ನನ್ನ ಮತ್ತು ಚೈನಾ ಮುಖಂಡರ ಜೊತೆಗಿನ ಭೇಟಿ ನಡೆದಿತ್ತು.

ಸೋವಿಯತ್ ಮಾದರಿಯಲ್ಲಿ ಕಾರ್ಮಿಕರನ್ನು ಆಧಾರವಾಗಿಟ್ಟುಕೊಂಡು ಶಸ್ತ್ರಾಸ್ತ್ರಗಳ ಸಹಾಯದಿಂದ ನಗರಗಳನ್ನು ವಶಪಡಿಸಿಕೊಳ್ಳುವುದರ ಮೂಲಕ ಕ್ರಾಂತಿ ಮಾಡುವುದು ಬಿ.ಟಿ.ಆರ್. ನೇತೃತ್ವದ ಕೇಂದ್ರ ಸಮಿತಿಯ ವಾದವಾಗಿದ್ದರೆ, ಕಾರ್ಮಿಕ ವರ್ಗದ ನಾಯಕತ್ವ ಹೊಂದಿರುವ ಭಾರತದ ಕಮ್ಯುನಿಸ್ಟ್ ಪಕ್ಷ ಗೆರಿಲ್ಲಾ ಯುದ್ಧದ ಮೂಲಕ ಚೈನಾ ಮಾದರಿಯಲ್ಲಿ ಹಳ್ಳಿಗಳನ್ನು ಮೊದಲು ವಶಪಡಿಸಿಕೊಂಡು ನಂತರ ಪಟ್ಟಣಗಳನ್ನು ಆಕ್ರಮಿಸುವುದು ರಾಜೇಶ್ವರರಾವ್ ನೇತೃತ್ವದ ಕೇಂದ್ರ ಸಮಿತಿಯ ವಾದವಾಗಿತ್ತು. ಇಂತಹ ಎರಡು ಅಭಿಪ್ರಾಯ ಭೇದಗಳು ನಮ ಪಕ್ಷದೊಳಗೆ ಇತ್ತು.

ಈ ಭಿನ್ನ ಮಾರ್ಗಗಳ ಬಗ್ಗೆ ಸೋವಿಯತ್ ಪಕ್ಷದ ಅಭಿಪ್ರಾಯ ಕೇಳಲಿಕ್ಕಾಗಿಯೇ ನಮ್ಮ ಪಕ್ಷದ ನಾಲ್ಕು ಪ್ರತಿನಿಧಿಗಳು ಮಾಸ್ಕೊಗೆ ಹೋಗಿದ್ದುದು. 1943 ರಿಂದಲೇ ಇಲ್ಲವಾಗಿದ್ದ ಕಮ್ಯುನಿಸ್ಟ್ ಅಂತರಾಷ್ಟ್ರೀಯದ ಬದಲಿಗೆ ಸೋವಿಯತ್ ಪಕ್ಷದ ನಾಯಕತ್ವವನ್ನು ಒಪ್ಪಬೇಕೆಂಬುದು ಅಂದಿನ ವಿಶ್ವದ ಕಮ್ಯುನಿಸ್ಟ್ ಪಕ್ಷಗಳ ಅಭಿಪ್ರಾಯವಾಗಿತ್ತು.

ಲೂ ನಿಂಗ್ ಜೊತೆ ನನ್ನ ಭೇಟಿಯ ಸಮಯದಲ್ಲಿ ನಮ್ಮ ಪಕ್ಷದ ನಿಯೋಗ ಮಾಸ್ಕೋದಲ್ಲಿತ್ತು. ಅಲ್ಲಿ ಚರ್ಚೆ ಮುಗಿದು ಯಾವಾಗ ಹಿಂದಿರುಗಬಹುದೆಂಬ ಬಗ್ಗೆ ಯಾವುದೇ ನಿರ್ದಿಷ್ಟತೆಯಿರಲಿಲ್ಲ. ಆದ್ದರಿಂದ ಚೈನಾದ ಸಂಗಾತಿಯ ಜೊತೆ ನನ್ನ ಭೇಟಿ ತುಂಬಾ ಸಂತೋಷದ ವಿಷಯವಾಗಿತ್ತು. ವೈಯುಕ್ತಿಕವಾಗಿ ಹೇಳುವುದಾದರೆ ಚೈನಾದ ಮಾದರಿಯ ಕ್ರಾಂತಿಯು ನನ್ನ ಮಾದರಿಯೂ ಆಗಿತ್ತು. ಆದರೆ ಆ ಮಾದರಿಯ ಜಾರಿಯ ವಿಷಯದಲ್ಲಿ ರಾಜೇಶ್ವರ್ ರಾವ್ ನೇತೃತ್ವದ ಕೇಂದ್ರ ಸಮಿತಿಯ ಜೊತೆ ದುಡಿಯುವುದು ನನಗೆ ಸಂಪೂರ್ಣವಾಗಿ ಅಸಾಧ್ಯವಾಗಿತ್ತು. ಆದ್ದರಿಂದಲೇ ಕೇಂದ್ರ ಸಮಿತಿಯು ಹೊಸ ಪೊಲಿಟ್‌ಬ್ಯೂರೋವನ್ನು ಚುನಾಯಿಸುವಾಗ ನನ್ನನ್ನು ಉದ್ದೇಶಪೂರ್ವಕವಾಗಿ ಪೊಲಿಟ್‌ಬ್ಯೂರೋ ಹೊರಗಿಟ್ಟರು. "ಸೋವಿಯೆತ್ ಮಾದರಿ" ಮತ್ತು "ಚೈನಾ ಮಾದರಿ"ಯೆರಡನ್ನೂ ಒಪ್ಪುತ್ತಿದ್ದ ಕೇಂದ್ರ ಸಮಿತಿಯು ರಚನೆಯಾದ ಮೇಲೆಯೇ ನನ್ನನ್ನು ಪಿ.ಬಿ.ಗೆ ತೆಗೆದುಕೊಂಡಿದ್ದು (1942ರಲ್ಲಿ ಬಿ.ಟಿ.ಆರ್. ನೇತೃತ್ವದ ಕೇಂದ್ರ ಸಮಿತಿಯೂ ಸಹ ನನ್ನ ಪಿ.ಬಿಯಿಂದ ಕೈಬಿಟ್ಟಿತ್ತು. ಬಿಟಿಆರ್. ರವರ ಕಲ್ಕತ್ತ ಲೈನನ್ನು ನಾನು ಸಂಪೂರ್ಣವಾಗಿ ಒಪ್ಪದಿದ್ದರಿಂದ)


ಈ ಸಂದರ್ಭದಿಂದಲೇ ಅಂದಿನ ನನ್ನ ಮತ್ತು ಚೈನಾದ ಸಂಗಾತಿಯ ಜೊತೆಗಿನ ಭೇಟಿ ನನಗೆ ಹೆಮ್ಮೆ ತರುವಂತದ್ದು. ಅಧಿಕೃತ ಕೆಲಸಗಳಿಗಾಗಿ ಬಂದಿದ್ದ ಲೂನಿಂಗ್ ಅವರು ಕೇವಲ ಒಂದು ಗಂಟೆ ಮಾತ್ರ ನನ್ನ ಜೊತೆ ಪೋಲೀಸ್‌ರನವರ ಕಣ್ತಪ್ಪಿಸಿ ಗುಪ್ತವಾಗಿ ಮಾತನಾಡಿದರು. ಚೈನಾದ ಪಕ್ಷದೊಡನೆ ನಾನು ಸಂಬಂಧ ಬೆಳೆಸಲು ಈ ಚರ್ಚೆ ಕಾರಣವಾಯ್ತು.

ಈ ಒಂದು ಗಂಟೆಯ ಅವಧಿಯಲ್ಲಿ ಚೈನಾ ಜನತೆಯ ಪ್ರಜಾಪ್ರಭುತ್ವ ಸರ್ಕಾರದ ಕೆಲಸ ಕಾರ್ಯಗಳ ಬಗ್ಗೆ ನನಗೆ ತಿಳಿದುಕೊಳ್ಳಲು ಸಾಧ್ಯವಾಯ್ತು. ಮತ್ತು ಭಾರತದ ಕಾರ್ಮಿಕ ವರ್ಗ ಎದುರಿಸುತ್ತಿರುವ ಸಮಸ್ಯೆಗಳು, ನಡೆಸುತ್ತಿರುವ ಚಟುವಟಿಕೆಗಳ ಬಗ್ಗೆ ಒಂದು ಸ್ಥೂಲವಾದ ಪರಿಚಯವನ್ನು ಅವರಿಗೆ ಮಾಡಿಕೊಡಲು ಸಾಧ್ಯವಾಯ್ತು. ಇದಲ್ಲದೆ ಪಕ್ಷದಲ್ಲಿದ್ದ ಎರಡು ವಾದಗಳ ಬಗ್ಗೆ ಮತ್ತು ಮಾಸ್ಕೋದಲ್ಲಿದ್ದ ಪಕ್ಷದ ನಿಯೋಗದ ಚರ್ಚೆಯ ಬಗ್ಗೆಯೂ ಚರ್ಚಿಸಲಾಯ್ತು.

ಈ ಎರಡು ಭಿನ್ನ ಅಭಿಪ್ರಾಯಗಳ ಬಗ್ಗೆಯಾಗಲೀ, ಮಾಸ್ಕೋಗೆ ಹೋಗಿದ್ದ ನಿಯೋಗದ ಚರ್ಚೆಯ ಬಗ್ಗೆಯಾಗಲೀ, ಲೂ ನಿಂಗ್ ಅವರು ವೈಯುಕ್ತಿಕವಾಗಿ ಅಥವಾ ಪಕ್ಷದ ಪರವಾಗಿ ಯಾವುದೇ ಅಭಿಪ್ರಾಯವನ್ನು ನೀಡಲಿಲ್ಲ. ಆದರೆ ಅವರು ಒಂದು ವಿಷಯಕ್ಕೆ ಪ್ರಾಮುಖ್ಯತೆ ನೀಡಿ ಹೇಳಿದರು. ಅದೇನೆಂದರೆ, ದೇಶದೊಳಗಿರುವ ರಾಜಕೀಯ ಮತ್ತು ಆರ್ಥಿಕ ಸ್ಥಿತಿಗಳ ಬಗ್ಗೆ ಸಾಮೂಹಿಕವಾದ ಚಟುವಟಿಕೆಗಳ ಅನುಭವದ ಆಧಾರದಲ್ಲಿ ಸಾಮೂಹಿಕ ಚರ್ಚೆಗಳ ಮೂಲಕ ನಾಯಕತ್ವ ತಯಾರಾಗಬೇಕೆಂಬುದು. ಆಗಮಾತ್ರವೇ ಪಕ್ಷದ ಆಂತರಿಕ ಸಮಸ್ಯೆಗಳಿಗೆ ಪರಿಹಾರ ಕಾಣಲು ಸಾಧ್ಯ. ರಾಷ್ಟ್ರದ ರಾಜಕೀಯ ಮತ್ತು ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ಕಾಣಲಿಕ್ಕೆ ಸಹಾಯ ಮಾಡುವಂಥ ರಾಜಕೀಯ ಶಕ್ತಿ ಮಾತ್ರ ಪಕ್ಷದೊಳಗಿನ ಐಕ್ಯತೆಯನ್ನು ಕಾಪಾಡಲು ಸಾಧ್ಯ.

ಲೂ ನಿಂಗ್‌ರವರ ಜೊತೆಗಿನ ಭೇಟಿಯ ನಂತರ ಚೈನಾದ ಕಮ್ಯುನಿಸ್ಟ್ ಪಾರ್ಟಿಯ ಜೊತೆಗೆ ನನ್ನ ಸ್ನೇಹವು


ಪುಟ 8ನೋಡಿ



ವಿಶ್ವ ಕಮ್ಯುನಿಸ್ಟ್ ಮುಖಂಡರೊಡನೆ ಇ.ಎಂ.ಎಸ್. -1

ಅದು 1948-52 ರ ಅವಧಿ. ಅಂದಿನ ಅವಿಭಜಿತ ಕಮ್ಯುನಿಸ್ಟ್ ಪಕ್ಷವನ್ನು ಭಾರತ ಸರಕಾರ ತೆಲಂಗಾಣಾ ಹೋರಾಟದ ಹಿನ್ನೆಲೆಯಲ್ಲಿ ಕಾನೂನು ಬಾಹಿರಗೊಳಿಸಿತ್ತು. ಆಗ ಪಕ್ಷದ ಕೇಂದ್ರ ಕಛೇರಿ ಕಲ್ಕತ್ತೆಯಲ್ಲಿದ್ದು ಅಲ್ಲಿ ಕೆಲಸ ಮಾಡುತ್ತಿದ್ದ ಏಕೈಕ ಪೊಲಿಟ್ ಬ್ಯೂರೋ ಸದಸ್ಯ ಇ.ಎಂ.ಎಸ್. ನಂಬೂದರಿಪ್ಪಾಡ್ ಅಲ್ಲಿಂದಲೇ ಭೂಗತ ಚಟುವಟಿಕೆ ನಡೆಸುವ ಸಂಧರ್ಭದಲ್ಲಿ ಬೇರೆ ದೇಶಗಳ ಕಮ್ಯುನಿಸ್ಟ್ ಮುಖಂಡರೊಡನೆ ಬೇಟಿ, ಅಂತರಾಷ್ಟ್ರೀಯ ಕಮ್ಯುನಿಸ್ಟ್ ಆಂದೋಲನದ ಜೊತೆಗಿನ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು. ಆಗ ಅವರು ಭೇಟಿ ಮಾಡಿದ ಅಂತರಾಷ್ಟ್ರೀಯ ಕಮ್ಯುನಿಸ್ಟ್ ಆಂದೋಲನದ ಮುಖಂಡರೊಡನೆ ತನ್ನ ಚರ್ಚೆಗಳನ್ನು ನೆನಪಿಸಿಕೊಳ್ಳುವ ಒಂದು ಲೇಖನಮಾಲೆಯನ್ನು ಪಕ್ಷದ ಮಾಲೆಯಾಳೀ ಪತ್ರಿಕೆ "ದೇಶಾಭಿಮಾನಿ" ಪ್ರಕಟಿಸುತ್ತಿದೆ. ನಮ್ಮ ದೇಶದ ಕಮ್ಯುನಿಸ್ಟ್ ಆಂದೋಲನದ ಇತಿಹಾಸದಲ್ಲಿನ ಆ ಘಟ್ಟದ ಒಂದು ಚಿತ್ರ ನೀಡುತ್ತಿರುವ ಆ ಲೇಖನಮಾಲೆಯನ್ನು 'ಐಕ್ಯರಂಗ' ಓದುಗರಿಗಾಗಿ ಇಲ್ಲಿ ಕಾಂ.ಇ.ಕೆ.ಎನ್. ರಾಜನ್ ಹಾಗೂ ಕಾಂ. ಪ್ರಕಾಶ್ ಒದಗಿಸುತ್ತಿದ್ದಾರೆ. ಈ ಲೇಖನಮಾಲೆಯ ಮೊದಲ ಲೇಖನ ಬ್ರಿಟನ್ನಿನ ಕಮ್ಯುನಿಸ್ಟ್ ಪಾರ್ಟಿಮುಖಂಡರಾದ ಕಾಂ. ರಜನಿ ಪಾಮೆದತ್‌ರೊಡನೆ ಮಾತುಕತಗೆ ಸಂಬಂಧಪಟ್ಟಿದ್ದು. ಕಾರಣಾಂತರಗಳಿಂದ ಅದನ್ನು ಪ್ರಕಟಿಸಲಾಗದೆ, ಆ ಲೇಖನಮಾಲೆಯ ಎರಡನೆಯ ಲೇಖನದಿಂದ ಪ್ರಾರಂಭಿಸುತ್ತಿದ್ದೇವೆ. ಅದನ್ನು ಮುಂದೆ ಪ್ರಕಟಿಸಲಾಗುವುದು.

ರಾಜ್ಯದಲ್ಲಿ ಆಡಳಿತೆ ಕುಸಿತಕ್ಕೆ ಕಾಂಗ್ರೆಸ್(ಐ) ಪಕ್ಷವೇ ಜವಾಬ್ದಾರಿ



ಎಲ್ಲವೂ ಮೇಲಿಂದಲೇ - ದಿಲ್ಲಿಯಿಂದಲೇ
ಕಾಂಗ್ರೆ ಬೀದಿ ಜಗಳದ ಒಂದು ಮಾದರಿ
ಉಪ ಮುಖ್ಯಮುಖ್ಯ ಮಂತ್ರಿ ಮನೆಯೆದುರು "ಭಿನ್ನ"ರ ಸಂಖ್ಯಾ ಪ್ರದರ್ಶನ

ಚುನಾವಣೆಯಲ್ಲಿ ಅತ್ಯಧಿಕ ಬಹುಮತ ಗಳಿಸಿದ ಕಾಂಗ್ರೆಸ್(ಐ) ಪಕ್ಷದ ಕರ್ನಾಟಕ ರಾಜ್ಯದ ಆಡಳಿತ ಸಂಪೂರ್ಣವಾಗಿ ಕುಸಿದಿದೆ. ಜನರ ಸಮಸ್ಯೆಗಳನ್ನು ಪರಿಹರಿಸುವ ಗತಿಯೇ ಇಲ್ಲವಾಗಿದೆ. ಅಭಿವೃದ್ಧಿ ಯೋಜನೆಗಳೆಲ್ಲ ಸ್ಥಗಿತವಾಗಿದೆ. ರಾಜ್ಯದ ಮುಖ್ಯಮಂತ್ರಿ ವೀರಪ್ಪ ಮೊಯಿಲಿಯವರಿಗೆ ದಿನ ಬಿಟ್ಟು ದಿನ ದಿಲ್ಲಿಗೆ ಹೋಗಿ ಕಾಂಗ್ರೆಸ್(ಐ) ಅಧ್ಯಕ್ಷ ನರಸಿಂಹರಾಯರ ಮನೆಬಾಗಿಲನ್ನು ಕಾಯುವುದೇ ಆಗಿದೆ. "ನಮ್ಮ ಮಂತ್ರಿ ಮಂಡಳದ ಬಿಕ್ಕಟ್ಟನ್ನು ಬಗೆಹರಿಸಿರಿ" ಎಂದು ಬೇಡಿ ಕಾಡುವ ಪರಿಸ್ಥಿತಿ ಬಂದಿದೆ ಒಂದು ರಾಜ್ಯದ ಮುಖ್ಯಮಂತ್ರಿಗೆ. ಇದು ಯಾಕೆ ಹೀಗೆ? ಇದಕ್ಕೆ ಜವಾಬ್ದಾರಿ ಯಾರು?

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಹಿಂದಿನಿಂದಲೇ ಹೇಳುತ್ತಾ ಬಂದಿರುವುದನ್ನು ಈ ಸಂದರ್ಭದಲ್ಲಿ ನೆನಪು ಮಾಡುವುದು ಸಮಂಜಸವಾಗುವುದು: "ಆಳುವ ಕಾಂಗ್ರೆಸ್(ಐ) ಪಕ್ಷದೊಳಗೇನೇ ಪ್ರಜಾಪ್ರಭುತ್ವ ವಿಧಿ ವಿಧಾನಗಳು ಇಲ್ಲದಿರುವುದು ದೇಶದ ಪ್ರಜಾಪ್ರಭುತ್ವಕ್ಕೇನೇ ಕುತ್ತು ತರಲಿದೆ" ಕಾಂಗ್ರೆಸ್(ಐ) ಪಕ್ಷದಲ್ಲಿ ಸದಸ್ಯತ್ವ ಇಲ್ಲ; ಸಮಿತಿಗಳು ಆಂತರಿಕ ಚುನಾವಣೆಯ ಮೂಲಕ ಆರಿಸಲ್ಪಡುವ ವಿಧಾನ ಇಲ್ಲ; ಬದಲು ಎಲ್ಲಾ ಸಮಿತಿಗಳು ಮೇಲಿಂದಲೇ- ದಿಲ್ಲಿಯಿಂದಲೇ ಕಾಂಗ್ರೆಸ್(ಐ) ಅಖಿಲ ಭಾರತ ಅಧ್ಯಕ್ಷರಿಂದಲೇ ನೇಮಕವಾಗುವುದೇ ಆ ಪಕ್ಷದ ವಿಧಿ, ಮಂತ್ರಿಮಂಡಳದಲ್ಲಿ ಯಾರು ಮಂತ್ರಿಗಳಾಗಿರಬೇಕೆಂಬ ತೀರ್ಮಾನವೂ ಮುಖ್ಯಮಂತ್ರಿಗಳದ್ದಲ್ಲ; ಮುಖ್ಯಮಂತ್ರಿಯ ಆಯ್ಕೆಯೂ ವಿಧಾನ ಸಭೆಯಲ್ಲಿರುವ ಕಾಂಗ್ರೆಸ್(ಐ) ಪಕ್ಷದ ವಿಧಾನಸಭಾ ಸದಸ್ಯರಿಂದಲ್ಲ; ಅವರೂ ಕಾಂಗ್ರೆಸ್(ಐ) ಅಖಿಲ ಭಾರತ ಅಧ್ಯಕ್ಷರಿಂದಲೇ ನೇಮಕಗೊಳ್ಳಬೇಕು. ಇತ್ಯಾದಿ ಇತ್ಯಾದಿ!! ಈ ಎಲ್ಲಾ ವಿಧಿ ವಿಧಾನಗಳು ಪ್ರಜಾಪ್ರಭುತ್ವ ವಿರೋಧಿ ವಿಧಿ ವಿಧಾನಗಳು.

ಕಾಂಗ್ರೆಸ್(ಐ) ಪಕ್ಷದ ಈ ಪ್ರಜಾಪ್ರಭುತ್ವ ವಿರೋಧಿ ವಿಧಾನಗಳೇ ಇಂದು ಕರ್ನಾಟಕ ರಾಜ್ಯದ ಅಸ್ಥಿರತೆಗೆ, ಆಡಳಿತ ಕುಸಿತಕ್ಕೆ ಕಾರಣವಾಗಿದೆ.

ಹಿಂದೆ, ವೀರೇಂದ್ರ ಪಾಟೀಲರನ್ನು ವಜಾ ಮಾಡಿ ಬಂಗಾರಪ್ಪನವರನ್ನು ರಾಜ್ಯದ ಮುಖ್ಯಮಂತ್ರಿಯಾಗಿ ಮಾಡಿದ್ದಾಗಲೇ ರಾಜ್ಯದ ಮಾರ್ಕ್ಸ್‌ವಾದಿ ಪಕ್ಷವು ತನ್ನ ಪ್ರತಿಭಟನೆಯನ್ನು ಸೂಚಿಸಿತ್ತು. "ಅದು ನಮ್ಮ ಸಂಪ್ರದಾಯ" ಎಂದು ಕಾಂಗ್ರೆಸ್ಸಿಗರು ಬೊಬ್ಬಿಟ್ಟಿದ್ದರು. ಈಗ ಮೊಯಿಲಿಯವರು ಮೂರು ವರ್ಷಗಳಲ್ಲಿ ರಾಜ್ಯದ ಮೂರನೇ ಮುಖ್ಯಮಂತ್ರಿಯಾದರೂ ಕಾಂಗ್ರೆಸ್(ಐ) ಪಕ್ಷದವರಿಗೆ ತೃಪ್ತಿಯಿಲ್ಲ. ಅವರನ್ನು ಕೆಳಗುರುಳಿಸಿ ಇನ್ನೊಬ್ಬರನ್ನು ಮುಖ್ಯಮಂತ್ರಿಯಾಗಿ ಮಾಡಿಕೊಳ್ಳಬೇಕೆಂಬ ಹಂಚಿಕೆ ಅವರದ್ದು. ಇವಕ್ಕೆಲ್ಲಾ ಕಾಂಗ್ರೆಸ್(ಐ) ಪಕ್ಷದ ವಿಧಿ ವಿಧಾನಗಳು (ಪ್ರಜಾಪ್ರಭುತ್ವವಿರೋಧಿ) ಸಹಾಯಕವಾಗಿದೆ.

ಇದನ್ನು ರಾಜ್ಯದ ಜನತೆ ತೀವ್ರವಾಗಿ ಪ್ರತಿಭಟಿಸಬೇಕು. ಹಿಂದೆ ದೇವರಾಜ ಅರಸರು ಕಾಂಗ್ರೆಸ್(ಐ) ಪಕ್ಷದ ಕ್ರಮವನ್ನು ಪ್ರತಿಭಟಿಸಿದ್ದರು. (ಅವರ ಅಧಿಕಾರ ಹೋಗಿರಬಹುದು. ಆದರೆ ಅವರು ನ್ಯಾಯವಾಗಿಯೇ ಹೋರಾಡಿದರು.) ಈಗ ರಾಜ್ಯದಲ್ಲಿ ಈ ಕಾಂಗ್ರೆಸ್(ಐ) ಪಕ್ಷದ ವಿಧಿ ವಿಧಾನಗಳ ಫಲವಾಗಿ ಆಡಳಿತೆಯು ಕುಸಿದಿದೆ.

ಮಂತ್ರಿಗಳೇ ಸರಾಗವಾಗಿ ನಾಲ್ಕು ಐದು ಮಂತ್ರಿ ಮಂಡಳದ ಸಭೆಗಳಿಗೆ ಹಾಜರಾಗದಿದ್ದರೂ, ಅವರು ದಿನನಿತ್ಯ ರಾಜ್ಯದ ಮುಖ್ಯಮಂತ್ರಿಯ ವಿರುದ್ಧ ರಾಜ್ಯದ ಆಡಳಿತೆಯು ಕುಸಿದಿದೆ, ನಿರ್ವೀರ್ಯವಾಗಿದೆ ಎಂದು ಹೇಳಿಕೆಗಳನ್ನು ಕೊಡುತ್ತಿದ್ದರೂ (ತಾವೇ ಆಡಳಿತೆಗೆ ಜವಾಬ್ದಾರಿಯಿರುವ ಪ್ರಾಥಮಿಕ ಅರಿವೂ ಇಲ್ಲದವರಂತೆ) ಅವರನ್ನು ಮಂತ್ರಿಮಂಡಳದಲ್ಲಿ ಮುಂದುವರಿಸಲಾಗುತ್ತಿದೆ. ಮಂತ್ರಿಗಳು ರಾಜೀನಾಮೆ ಕೊಟ್ಟು ವಾರಗಳೇ ಉರುಳಿದರೂ ಅವರ ಬಗ್ಗೆ ಏನೂ ಕ್ರಮ ವಹಿಸುವುದಿಲ್ಲ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಹಾಗೂ ಇವಕ್ಕೆಲ್ಲಾ ಹೈಕಮಾಂಡ್ ಆದ ಕಾಂಗ್ರೆಸ್(ಐ) ರಾಷ್ಟ್ರಾಧ್ಯಕ್ಷರು.

ಇದೆಲ್ಲಾ ಎಷ್ಟು ದಿನವೆಂದು ರಾಜ್ಯದ ಜನತೆ ಕಾದು ನೋಡುತ್ತಿದ್ದಾರೆ. ಅದ್ದರಿಂದ, ರಾಜ್ಯದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಕಾಂಗ್ರೆಸ್(ಐ) ಪಕ್ಷವೇ ಇಂದಿನ ಪರಿಸ್ಥಿತಿಗೆ ಕಾರಣವೆಂದು ಘಂಟಾಘೋಷವಾಗಿ ಸಾರುತ್ತದೆ. ಕೂಡಲೇ ವೀರಪ್ಪಮೊಯಿಲಿವರಾಗಲಿ ಅವರ ಪಕ್ಷವಾಗಲಿ ಈ ಕುರಿತು ನಿರ್ಣಯ ಕೈಗೊಳ್ಳದಿದ್ದಲ್ಲಿ, ರಾಜ್ಯದ ಜನತೆ "ರಾಜ್ಯದಲ್ಲಿ ಪ್ರಜಾಪ್ರಭುತ್ವ ಪುನಸ್ಥಾಪನೆಗೆ" ಬೀದಿಗಿಳಿದು ಹೋರಾಟ ಮಾಡಬೇಕಾಗಿ ಬರಬಹುದು ಎಂದು ಎಚ್ಚರಿಸ ಬಯಸುತ್ತದೆ.

ಉದ್ಯೋಗ ನೇಮಕಾತಿ ಒತ್ತಾಯಿಸಿ ಡಿವೈಎಫ್‌ಐ ಸಮಾವೇಶ

ರಾಜ್ಯದಲ್ಲಿ ನೇಮಕಾತಿಯ ಮೇಲಿರುವ ನಿರ್ಬಂಧವನ್ನು ಸರಕಾರ ಕೂಡಲೇ ತೆಗೆಯಬೇಕು, ತಕ್ಷಣವೇ ಸರಕಾರ ಶಿಕ್ಷಕರ ನೇಮಕಾತಿ ಮಾಡಬೇಕು, ಅರೆಕಾಲಿಕ, ಪೂರ್ಣಕಾಲಿಕ ಶಿಕ್ಷಕರನ್ನು ಖಾಯಂ ಮಾಡಬೇಕು ಎಂದು ಡಿವೈಎಫ್‌ಐ ಒತ್ತಾಯಿಸಿದೆ. ಅರಣ್ಯ ಇಲಾಖೆ, ಕಾಮಗಾತಿ, ಯುವಜನ ಸೇವಾ ಇಲಾಖೆ ಮತ್ತಿತರ ಕಡೆಗಳಲ್ಲಿ ಹಂಗಾಮಿಯಾಗಿ ಕೆಲಸ ಮಾಡುವ ಕೆಲಸಗಾರರನ್ನು ಖಾಯಂ ಮಾಡಬೇಕು, ಮುಚ್ಚಿರುವ ಕಾರ್ಖಾನೆಗಳನ್ನು ತೆರೆಯಬೇಕು, ಕರ್ನಾಟಕ ರಾಜ್ಯದ ಅಭಿವೃದ್ಧಿ ಯೋಜನೆಗಳು ಕೂಡಲೇ ಜ್ಯಾರಿಯಾಗಬೇಕೆಂದೂ ಸಮಾವೇಶ ಒತ್ತಾಯಿಸಿದೆ. ಇದಕ್ಕಾಗಿ ನವಂಬರ್ ಒಂದರಿಂದ ರೈಲ್ ಪಿಕೆಟಿಂಗ್ ಹಾಗೂ ಐಕ್ಯತಾ ಚಳುವಳಿ ನಡೆಸಲು ಅದು ನಿರ್ಧರಿಸಿದೆ.

ಸೆಪ್ಟೆಂಬರ್ 25ರಂದು ಬೆಂಗಳೂರಿನಲ್ಲಿ ಏರ್ಪಡಿಸಿದ್ದ ಸಮಾವೇಶ ಈ ನಿರ್ಣಯಗಳನ್ನು ಕೈಗೊಂಡಿದೆ.

ಮಾಜಿ ಎಂಎಲ್‌ಸಿ ಪ್ರೊ. ಬಿ.ಕೆ. ಚಂದ್ರಶೇಖರ್ ಸಮಾವೇಶವನ್ನು ಉದ್ಘಾಟಿಸಿದರು. ಸಿಐಟಿಯು ಮುಖಂಡರಾದ ಆರ್.ಶ್ರೀನಿವಾಸ್ ಹಾಗೂ ಬಂಡಾಯ ಸಾಹಿತಿ ಎಲ್.ಹನುಮಂತಯ್ಯ ದೇಶದ ಕೈಗಾರಿಕೆ ಹಾಗೂ ಸಿರುದ್ಯೋಗ ಸಮಸ್ಯೆಗಳ ಕುರಿತು ಮಾತನಾಡಿದರು. ಡಿವೈಎಫ್‌ಐ ರಾಜ್ಯ ಅಧ್ಯಕ್ಷ ನಾಗಮೋಹನದಾಸ್ ಸಮಾರೋಪ ಭಾಷಣ ಮಾಡಿದರು. ಸಮಾವೇಶದ ಅಧ್ಯಕ್ಷತೆಯನ್ನು ಜಿಲ್ಲಾ ಡಿವೈಎಫ್‌ಐ ಅಧ್ಯಕ್ಷರಾದ ಟಿ.ಶಿವಶಂಕರ್ ವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಗೋಪಾಲಕೃಷ್ಣ ನಿರ್ಣಯಗಳನ್ನು ಮಂಡಿಸಿದರು.

ಮೂಡಬಿದಿರೆಯಲ್ಲಿ ಮೂಡಿ ಕಾರ್ಮಿಕರ ಸಮಾವೇಶ

ಮೂಡಬಿದ್ರೆ ಪ್ರದೇಶದಲ್ಲಿ ಬೀಡಿ ಕಾರ್ಮಿಕ ಸಂಘದ ಸರ್ವ ಸದಸ್ಯರ ಸಭೆಯು ಸೆಪ್ಟೆಂಬರ್ 17, 1993 ರಂದು ಬೆಳಿಗ್ಗೆ 10 ಗಂಟೆಗೆ ತೋಡಾರು ಸಂಘದ ಕಛೇರಿಯಲ್ಲಿ ನಡೆಯಿತು. ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಯು.ಬಿ. ಲೋಕಯ್ಯನವರು ವಹಿಸಿದ್ದರು.

ಲೋಗ್ ಪುಸ್ತಕ ಹಾಗೂ ಐಡೆಂಟಿಟೀ ಕಾರ್ಡ್ ಕೊಡದೆ ಕಾರ್ಮಿಕರನ್ನು ವಂಚಿಸುವುದು ಎಲೆ ಎವರೇಜ್ ಲೆಕ್ಕದಲ್ಲಿ ಬೀಡಿ ಮಜೂರಿಯಲ್ಲಿ ಕಡಿತ, ಪ್ರಾವಿಡೆಂಟ್ ಫಂಡಿನಲ್ಲಾಗುವ ಮೋಸ, ಎಲೆ ತಂಬಾಕಿನ ತೂಕದಲ್ಲಿ ಮೋಸ ಮಾಡುವುದು. ಕಡಿಮೆ ಮಜೂರಿ ಕೊಡುವುದು, ಬೋನಸ್ಸಿನಲ್ಲಿ ಮೋಸ ಮಾಡುವುದು. ಹೆಂಗಸರ ಹೆಸರಿನಲ್ಲಿ ಕೊಡಬೇಕಾದ ಲೋಗ್ ಪುಸ್ತಕವನ್ನು ಗಂಡಸರ ಹೆಸರಿಗೆ ವರ್ಗಾಯಿಸುವುದು, ಲೋಗ್ ಪುಸ್ತಕ ಕಾರ್ಮಿಕರ ಕೈಯಲ್ಲಿ ಕೊಡದಿರುವುದು, ಕೊಟ್ಟರೂ ಬೀಡಿಯ ಲೆಕ್ಕವನ್ನು ಅದರಲ್ಲಿ ದಾಖಲಿಸದೆ ಇರುವುದು, ಹೆರಿಗೆ ಭತ್ಯೆ ಹಾಗೂ ಕಲ್ಯಾಣ ನಿಧಿಯಿಂದ ಸಿಗಬೇಕಾದ ಸೌಲಭ್ಯಗಳಿಂದ ಕಾರ್ಮಿಕರನ್ನು ವಂಚಿಸುವುದು, ಈ ಎಲ್ಲಾ ಅನ್ಯಾಯಗಳನ್ನು ತಿಳಿದೂ ಸರ್ಕಾರವಾಗಲೀ, ಅದರ ಕಾರ್ಮಿಕ ಅಧಿಕಾರಿಗಳಾಗಲೀ ಏನೊಂದು ಚಕಾರವೆತ್ತದೆ ಮಾಲಕರ ಹಾಗೂ ಕಂಟ್ರಾಕ್ಟುದಾರರ ಪರ ವಹಿಸುತ್ತಿದ್ದಾರೆ. ಆದುದರಿಂದ ಈ ಅನ್ಯಾಯವನ್ನು ಕಾರ್ಮಿಕರ ಐಕ್ಯ ಹೋರಾಟದಿಂದಷ್ಟೇ ಎದುರಿಸಿ ಪರಿಹರಿಸಬಹುದಾಗಿದೆ. ಈ ಅನ್ಯಾಯಗಳ ವಿರುದ್ಧ ಹೋರಾಟದ ಪೂರ್ವಭಾವಿಯಾಗಿ ಅಕ್ಟೋಬರ್ 10, 1993 ರಂದು ಸಮಾವೇಶ ನಡೆಸಲು ತೀರ್ಮಾನಿಸಲಾಯಿತು.

●

ಉಡುಪಿಯಲ್ಲಿ ನೇಯ್ಗೆ ಕೆಲಸಗಾರರಿಂದ ಘೇರಾವ್

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ಶಾಖೆ, ದ.ಕ.ಜಿಲ್ಲೆ, ಇಲ್ಲಿ ನೂಲಿನ ಅಭಾವದಿಂದ ನೇಯ್ಗೆ ಕೆಲಸಗಾರರು ಉಪವಾಸದಿಂದ ನರಳುತ್ತಿದ್ದಾರೆ. ನೇಕಾರರಿಗೆ ಸರಿಯಾಗಿ ನೂಲು ಸಿಗದೆ ಐದಾರು ವರ್ಷದಿಂದ ಇದ್ದು ಈಗ ಒಂದು ತಿಂಗಳಾಗುತ್ತಾ ಬಂತು. ನೂಲು ಇಲ್ಲದೆ ಮಗ್ಗಗಳು ನಿಂತಿವೆ. ನೇಯ್ಗೆ ಕೆಲಸಗಾರರ ಸಂಘವು ಐದಾರು ವರ್ಷದಿಂದ ಕೈಮಗ್ಗ ನಿಗಮದ ಮೇನೇಜ್‌ಮೆಂಟಿಗೆ ಮನವಿ ಪತ್ರಗಳನ್ನು, ತಂತಿ ಕೂಡ ಕಳುಹಿಸಿದರು. ಕೈಮಗ್ಗ ನಿಗಮವು ಅದರ ಮೇನೇಜ್‌ಮೆಂಟ್ ನೇಕಾರರ ಬಗೆಗೆ ಯಾವ ಕಾಳಜಿಯನ್ನು ತೋರಿಸದೆ ಇದ್ದುದರಿಂದ ನೇಯ್ಗೆ ಕೆಲಸಗಾರರು ಚಳುವಳಿ ಪ್ರಾರಂಭಿಸುವುದು ಅನಿವಾರ್ಯವಾಯ್ತು. ಅದೇ ರೀತಿ ನಿಗಮದಲ್ಲಿ ನೂಲಿಗೆ ಕಲರ್ ಹಾಕುವವರಿಗೆ ನೇಕಾರರ ಸಹಕಾರಿ ಸಂಘಗಳಲ್ಲಿ ಕೊಡುವ ಕೂಲಿಗಿಂತ ಅರ್ಧ ಕಡಿಮೆ ಕೂಲಿಯನ್ನು ಕೊಡುವುದು, ಅದನ್ನು ವಿರೋಧಿಸಿ ಮೇನೇಜ್‌ಮೆಂಟಿಗೂ ಸ್ಥಳೀಯ ಶಾಖೆಗೂ ಮನವಿ ಕೊಡಲಾಗಿದೆ. ಆ ಬಗ್ಗೆ ಯಾವ ಪ್ರತಿಕ್ರಿಯೆಯೂ ಇಲ್ಲ.

ಜವಳಿ ಮಂತ್ರಿ ಎಚ್.ಕೆ. ಪಾಟೀಲರು ಉಡುಪಿಗೆ ಬಂದವರು ಪೂರ್ಣ ಪ್ರಜ್ಞ ಕಾಲೇಜಿನಲ್ಲಿ ಇತ್ತೀಚೆಗೆ ನೇಕಾರರ ವಿಚಾರದಲ್ಲಿ ಅನೇಕ ಭರವಸೆಗಳನ್ನು ಕೊಟ್ಟಿದ್ದರೂ ಕೂಡಾ ಅದೆಲ್ಲ ಪೊಳ್ಳು ಭರವಸೆ ಆಗಿದೆ. ನೇಕಾರರು ತಿಂಗಳಿಗೆ ಮೂನ್ನೂರ ಐವತ್ತರಿಂದ ನಾನೂರು ರೂ. ಸಂಪಾದನೆ ಮಾಡಿ ಜೀವನ ನಡೆಸುತ್ತಾ ಇದ್ದಾರೆ. ಆದರೆ ಈಗ ನೂಲಿನ ಅಭಾವದಿಂದ ನೇಕಾರರ ಕುಟುಂಬಗಳು ಉಪವಾಸ ಬಿದ್ದಿದೆ. ಈ ಪರಿಸ್ಥಿತಿಯನ್ನು ಕಂಡು ನೇಯ್ಗೆ ಕೆಲಸಗಾರರ ಸಂಘವು ತೀವ್ರ ರೂಪದ ಚಳುವಳಿಗೆ ಕರೆ ಕೊಟ್ಟಿದೆ.

ಅಕ್ಟೋಬರ್ 24, 1993 ರಂದು ಉಡುಪಿಯಲ್ಲಿ ಕೈಮಗ್ಗ ನಿಗಮದ ಅಧಿಕಾರಿಯನ್ನು ಘೇರಾವ್ ಮಾಡುವ ಕಾರ್ಯಕ್ರಮವನ್ನು ನೇಯ್ಗೆ ಕೆಲಸಗಾರರ ಸಂಘ ತೀರ್ಮಾನಿಸಿ ಪ್ರಕಾರ ಈ ಕಾರ್ಯಕ್ರಮವನ್ನು ಜಾರಿ ಮಾಡುವಾಗಲೇ ಅಧಿಕಾರಿಯು ಸಂಘದ ಮುಖಂಡರನ್ನು ಕರೆದು ಮಾತುಕತೆ ನಡೆಸಿದರು. ಟ್ರಕ್ ಮುಷ್ಕರದಿಂದಾಗಿ ಹಂಚಾ ತೊಂದರೆ ಆಗಿದೆ, ಆದ್ದರಿಂದ ಈ ಕಾರ್ಯಕ್ರಮವನ್ನು ಟ್ರಕ್ ಮುಷ್ಕರ ಮುಗಿಯುವವರೆಗೆ ನಿಲ್ಲಿಸಬೇಕೆಂದು ವಿನಂತಿಸಿಕೊಂಡಿದ್ದರಿಂದ ಘೇರಾವ್ ಕಾರ್ಯಕ್ರಮವನ್ನು ಮುಂದೂಡಲಾಗಿದೆ.

ಈ ಕಾರ್ಯಕ್ರಮದ ನೇತೃತ್ವವನ್ನು ಸಂಘದ ಅಧ್ಯಕರಾದ ಸಂಜೀವ ಸೆಟ್ಟಿಗಾರ, ಕಾರ್ಯದರ್ಶಿ ಗುರುರಾಜ ಶೆಟ್ಟಿಗಾರ, ಖಜಾಂಚಿ ತೇಜಪಾಲ ಸೋನ್ಸ್ ವಹಿಸಿದ್ದರು.

ಜನವಾದಿ ಮಹಿಳಾ ಸಂಘಟನೆಯ ಉಡುಪಿ ತಾಲೂಕು ಸಮ್ಮೇಳನ

"ಮಹಿಳೆಯರು ಸಂಘಟಿತರಾಗಬೇಕು ತಿಳುವಳಿಕೆ ಪಡೆದು ಜಾಗೃತರಾಗಿ ಹಕ್ಕುಗಳನ್ನು ರಕ್ಷಿಸಲು ಹೋರಾಟ ನಡೆಸಲು ಮುಂದಾಗಬೇಕು. ಎಲ್ಲಾ ವಿಧದ ದೌರ್ಜನ್ಯಗಳನ್ನು ವಿರೋಧಿಸಲು ಮುಂದಾಗಬೇಕು" ಎಂದು ಜನವಾದಿ ಮಹಿಳಾ ಸಂಘಟನೆಯ ಕರ್ನಾಟಕ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ವಿಮಲ ಕೆ.ಎಸ್. ಮಹಿಳೆಯರಿಗೆ ಕರೆ ನೀಡಿದರು.

ಸೆಪ್ಟೆಂಬರ್ 26, 1993 ರಂದು ಉಡುಪಿಯಲ್ಲಿ ರಾಜ್ಯ ಸರಕಾರಿ ನೌಕರರ ಸಭಾಭವನದಲ್ಲಿ ಜರುಗಿದ ಜನವಾದಿ ಮಹಿಳಾ ಸಂಘಟನೆಯ ಉಡುಪಿ ತಾಲೂಕಿನ ಐದನೇ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು "ಜನವಾದಿ ಮಹಿಳಾ ಸಂಘಟನೆಯ ಧ್ಯೇಯ ಧೋರಣೆಗಳನ್ನು ವಿವರವಾಗಿ ತಿಳಿಸಿದರು. ನಮ್ಮ ಸಂಘಟನೆಯು ದೇಶದಲ್ಲಿಯೇ ಮಹಿಳೆಯರ ಹಕ್ಕುಗಳ ರಕಣೆಗಾಗಿ ಮುಂಚೂಣಿಯಲ್ಲಿದ್ದು ಹೋರಾಡುವ ಸಂಘಟನೆಯಾಗಿದೆ" ಎಂದೂ ತಿಳಿಸಿದರು.

ಸಮ್ಮೇಳನದ ಅಧ್ಯಕತೆಯನ್ನು ಶ್ರೀಮತಿ ಇಂದಿರಾ ವಹಿಸಿದ್ದರು. ಕುಮಾರಿ ಯುಶೋಧಾ ಸ್ವಾಗತಿಸಿದರು.

ಪಿ.ವಸಂತಿಯವರು ಕಳೆದ ಸಮ್ಮೇಳನದ ನಂತರ ಚಟುವಟಿಕೆಯ ವರದಿಯನ್ನು ಸಮ್ಮೇಳನದ ಮುಂದೆ ಮಂಡಿಸಿದರು. ವರದಿಯ ಮೇಲಿನ ಚರ್ಚೆಯಲ್ಲಿ ಶ್ರೀಮತಿ ಯಶೋಧಾ, ಕಮಲ, ಪದ್ಮ ಸುಮಿತ್ರ, ಯಮುನ, ರಾಜಮ್ಮ ಮೊದಲಾದವರು ಭಾಗವಹಿಸಿ ಸಲಹೆ ಸೂಚನೆಗಳನ್ನು ನೀಡಿದರು.

ಆಹ್ವಾನಿತರಾಗಿ ಬಂದಿದ್ದ ಶ್ರೀಮತಿಯರಾದ ಎಸ್. ಸತ್ಯ ಮತ್ತು ರೇಣುಕಾರವರು ವೇದಿಕೆಯಲ್ಲಿದ್ದರು.

ವಿಮಾ ನೌಕರರ ಸಂಘದ ಉಪಾಧ್ಯಕರಾದ ಶ್ರೀ ಎ.ಎಸ್.ಆಚಾರ್ಯ ಮಾತನಾಡುತ್ತಾ ಮಹಿಳೆಯರ ಸಂಘಟನೆ ಬಲಪಡಿಸಬೇಕಾದ ಅಗತ್ಯ ತಿಳಿಸಿ ಶುಭ ಕೋರಿದರು.

ಶ್ರೀ ದೋಣಿ ಸುವರ್ಣ, ಶ್ರೀಮತಿ ಗೋಪಿ ಮಾತನಾಡಿದರು. ಮುಂದಿನ ಅವಧಿಗೆ ಪದಾಧಿಕಾರಿಗಳಾಗಿ ಶ್ರೀಮತಿ ಎ. ಶಾವಂತಿ ಅಧ್ಯಕ್ಷೆ ಇಂದಿರಾ, ಯಶೋಧ, ಸುಮತಿ ಉಪಾಧ್ಯಕ್ಷೆಯರಾಗಿ, ಕುಮಾರಿ ವಸಂತಿ ಪಿ. ಪ್ರಧಾನ ಕಾರ್ಯದರ್ಶಿ, ಗೋಪಿ, ಕಲ್ಯಾಣಿ, ಯಶೋಧ ಕಾರ್ಯದರ್ಶಿಗಳಾಗಿಯೂ ರೇಣುಕಾರವರು ಕೋಶಾಧ್ಯಕಿಯಾಗಿಯೂ ಇರುವ 25 ಮಂದಿಯ ಕಾರ್ಯನಿರ್ವಾಹಕ ಸಮಿತಿಯನ್ನು ಆರಿಸಲಾಯಿತು.

ಶ್ರೀಮತಿ ವಿಮಲಾರವರು ಸಮಾರೋಪ ಭಾಷಣದಲ್ಲಿ "ಸಂಘಟನೆಯ ಮಹತ್ವ ಮತ್ತು ಮುಖ್ಯ ಕಾರ್ಯಕರ್ತರ ತರಬೇತಿಯಿಂದ ಮಾತ್ರ ಸಂಘಟನೆ ಬೆಳಸಬಹುದಾಗಿದೆ. ದಕಿಣ ಕನ್ನಡ ಜಿಲ್ಲೆಯಲ್ಲಿ ಪ್ರಬಲವಾದ ಮಹಿಳಾ ಚಳುವಳಿ ಮೂಡಿ ಬರುವಂತಾಗಲಿ" ಎಂದರು.

ಶ್ರೀದೇವಿಡ್.ಎ.ಕರ್ಕಡ ವೇದಿಕೆಯಲ್ಲಿದ್ದು ಸಹಕರಿಸಿದರು. ಕೊನೆಯಲ್ಲಿ ವಸಂತಿ ಪಿ. ಧನ್ಯವಾದ ಸಲ್ಲಿಸಿದರು.

ಶಹಾಪುರದಲ್ಲಿ 'ಭಾರತ್ ಬಂದ್'

ಕೇಂದ್ರ ಸರ್ಕಾರದ ಹೊಸ ಆರ್ಥಿಕ ನೀತಿ ಮತ್ತು ಕೈಗಾರಿಕಾ ನೀತಿಯನ್ನು ವಿರೋಧಿಸಿ "ಭಾರತ್ ಬಂದ್" ಕರೆಯ ಮೇರೆಗೆ ಶಹಾಪುರದ ಕೆ.ಎಸ್.ಆರ್.ಟಿ.ಸಿ ಬಸ್ ಡಿಪೋದಿಂದ ಮೆರವಣಿಗೆ ಹೊರಟು ಪ್ರಮುಖ ಬೀದಿಗಳಲ್ಲಿ ಕ್ರಾಂತಿಕಾರಿ ಘೋಷಣೆ ಕೂಗುತ್ತಾ ತಹಸೀಲ್ದಾರರ ಮುಖಾಂತರ ಭಾರತದ ರಾಷ್ಟ್ರಾಧ್ಯಕರಿಗೆ ಹೋರಾಟದ ಕೂಗನ್ನು ಮುಟ್ಟಿಸಲಾಯಿತು.

ಸಭೆಯನ್ನು ಉದ್ದೇಶಿಸಿ ಜೀವ ವಿಮಾ ನಿಗಮದ ಮುಖಂಡರಾದ ಬಿ.ಎಲ್. ತೋಡಿಲ್ಲಾಯರು, ಜನತಾದಳದ ಮುಖಂಡರಾದ ಮರಿಗೌಡರು, ಭಾರತ ವಿದ್ಯಾರ್ಥಿ ಫೆಡರೇಷನ್ನಿನ (ಎಸ್.ಎಫ್.ಐ) ಮುಖಂಡರಾದ ಶಿವಲಿಂಗಪ್ಪ ಸುರುಪುರರವರು ಮಾತನಾಡಿದರು.

ಕೆ.ಎಸ್.ಆರ್.ಟಿ.ಸಿ.ಯ ಸ್ಟಾಫ್ ಅಂಡ್ ವರ್ಕರ್ಸ್ ಯೂನಿಯನ್ನಿನ ಮುಖಂಡರಾದ ಎಫ್.ಬಿ. ನಾಯ್ಕರ್‌ರವರು, ಕಾರ್ಮಿಕ ಮುಖಂಡರಾದ ಎಂ. ದೇವಿಂದ್ರಪ್ಪ ಪತ್ತಾರವರು, ಅಂಗನವಾಡಿ ಕಾರ್ಯಕರ್ತೆಯರ ಹಾಗೂ ಸಹಾಯಕಿಯರ ಸಂಘದ ಅಧ್ಯಕರಾದ ಶ್ರೀಮತಿ ದಾಕಾಯಿಣಿ ಗುರುಶೆಟ್ಟಿಯವರು, ಸಿಪಿಐ(ಎಂ) ನ ಕಾರ್ಯದರ್ಶಿಯವರಾದ ಸಿ.ಎಸ್. ಆನೆಗುಂದಿಯವರು ಜನ-ವಿರೋಧಿ ಕಾಂಗ್ರೆ ನೀತಿಗಳನ್ನು ಖಂಡಿಸಿದರು.

ಮೆರವಣಿಗೆಯ ನೇತೃತ್ವವನ್ನು ಜನತಾದಳದ ಅಧ್ಯಕರಾದ ಮಲ್ಲಣ್ಣ ಮಡ್ಡಿ, ಎಸ್. ಶೇಖರ ವಕೀಲರು, ಸಿ.ಪಿ.ಐ(ಎಂ) ಮುಖಂಡರಾದ ಲಕ್ಷ್ಮಯ್ಯ ಕಲಾಲ್, ಕೆ.ಎಸ್. ಆರ್.ಟಿ.ಸಿ. ಕಾರ್ಮಿಕರ ಸಂಘಟನೆಯ ಮುಖಂಡರಾದ ಕಾಂ. ಸುಕುಮುನಿ, ಕಾಂ. ಅಮರಯ್ಯ ಸ್ವಾಮಿ, ಕಾಂ. ಇಸಾಬ್, ಕಾಂ. ಮಡಿವಾಳಪ್ಪ ಹಾಗೂ ಎಸ್.ಎಫ್.ಐ ಅಧ್ಯಕರಾದ ಬಸವರಾಜ ಕಂದಳ್ಳಿ, ಕಾರ್ಯದರ್ಶಿ ಜೈಲಾಲ್, ಅಂಬ್ಲಪ್ಪ, ಮಹಾದೇವಪ್ಪ ಕರ್ನಾಟಕ ಪ್ರಾಂತ ರೈತ ಸಂಘದ ತಾಲೂಕು ಅಧ್ಯಕರಾದ ಕೇಶವರಾಜ್ ಥಾಜರ ಯಲ್ಲಪ್ಪ, ದೊಡ್ಡಮನಿಯವರು ವಹಿಸಿದ್ದರು.

ದೇಶದ ಬೆಳವಣಿಗೆ ಎಡಚಳುವಳಿಗೆ ಸ್ಫೂರ್ತಿದಾಯಕ

--ಕೃಷ್ಣಪ್ಪ ಕೊಂಚಾಡಿ

ಇತ್ತೀಚೆಗೆ ದೇಶದಲ್ಲಿ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆ-ಬಿಜೆಪಿ ಕೂಟಗಳಿಗೆ ಸೋಲು ಉಂಟಾಗಿರುವುದು, ಪಶ್ಚಿಮ ಬಂಗಾಳದ ಪಂಚಾಯತು, ಜಿಲ್ಲಾಪರಿಷತ್ತು ಚುನಾವಣೆಯಲ್ಲಿ ಎಡರಂಗ ಭಾರಿ ಜಯಭೇರಿ ಹೊಡಿದಿರುವುದು, ಕೇರಳದ ಒಟ್ಟಪಾಳಂ ಲೋಕಸಭಾ ಚುನಾವಣೆಯಲ್ಲಿ ಸಿಪಿಐ(ಎಂ) ಪಕದ ಅಭ್ಯರ್ಥಿ ಭಾರಿ ಮತಗಳಿಂದ ಕಾಂಗ್ರೆ-ಬಿಜೆಪಿ ಕೂಟವನ್ನು ಸೋಲಿಸಿರುವುದು ದೇಶದ ಪ್ರಸ್ತುತ ಬೆಳವಣಿಗೆಯಾಗಿದ್ದು ಎಡ ಪ್ರಜಾಸತ್ತಾತ್ಮಕ ಚಳುವಳಿಗೆ ಸ್ಫೂರ್ತಿದಾಯಕವಾಗಿದೆ. ಈ ನಿಟ್ಟಿನಲ್ಲಿ ನಮ್ಮ ಯುವಜನ ಸಂಘಟನೆಯನ್ನು ಬಲಿಷ್ಠಗೊಳಿಸಬೇಕೆಂದು ಡಿ.ವೈ.ಎಫ್. ಐ ದ.ಕ. ಜಿಲ್ಲಾ ಸಮಿತಿ ಖಜಾಂಚಿ ಕಾಂ. ಕೃಷ್ಣಪ್ಪ ಕೊಂಚಾಡಿಯವರು ಯುವಜನರಿಗೆ ಕರೆ ನೀಡಿದರು. ಅವರು ಸೆಪ್ಟೆಂಬರ್ 19, 1993 ರಂದು ಕುಪ್ಪೆಪದವಿನಲ್ಲಿ ಡಿ.ವೈ.ಎಫ್.ಐ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಸಭೆಯು ಕುಪ್ಪೆಪದವು ಕಲ್ಲಾಡಿ, ಕುಪ್ಪೆಪದವು ದೋಲಿಯ ರಸ್ತೆಗೆ ಡಾಮರೀಕರಣಗೊಳಿಸಬೇಕು, ಕುಪ್ಪೆಪದವಿನಿಂದ ಮೋಣೆಪಲ್ಲದವರೆಗೆ ರಸ್ತೆ ಅಗಲಪಡಿಸಬೇಕು, ಕುಪ್ಪೆಪದವಿನ ಸರಕಾರಿ ಆಸ್ಪತ್ರೆಯನ್ನು ಶೀಘ್ರವಾಗಿ ತೆರೆದು ಔಷಧಿ, ಇತ್ಯಾದಿ ಒದಗಿಸಬೇಕೆಂಬ ನಿರ್ಣಯವನ್ನು ಅಂಗೀಕರಿಸಲಾಯಿತು.

ಸಭೆಯಲ್ಲಿ ಪಾಲ್ಗೊಂಡು ಡಿ.ವೈ.ಎಫ್.ಐ. ದ.ಕ. ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿಯವರು ಸೂಕ್ತ ಮಾರ್ಗದರ್ಶನ ನೀಡಿದರು. ಸಭೆಯ ಅಧ್ಯಕತೆಯನ್ನು ಕೆ. ಹಾಮಿದ್‌ರವರು ವಹಿಸಿದ್ದರು. ಪ್ರಾರಂಭದಲ್ಲಿ ಎಸ್.ಎ. ಹಸಬ್ಬರವರು ಸ್ವಾಗತಿಸಿ, ಕೊನೆಯಲ್ಲಿ ವಂದಿಸಿದರು.

ಎಸ್.ಎಫ್.ಐ ಕರೆ

ಇಂಜಿನಿಯರಿಂಗ್ ಮತ್ತು ವೈದ್ಯಕೀಯ ವೃತ್ತಿಪರ ಶಿಕ್ಷಣದ ಶುಲ್ಕ ಹೆಚ್ಚಳವನ್ನು ವಿರೋಧಿಸಿ ಮತ್ತು ಆಯ್ಕೆಯಾಗಿರುವ ವಿದ್ಯಾರ್ಥಿಗಳಿಗೆ ಖಾಸಗಿ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳಿಗೆ, ಖಾಸಗಿ ಶಿಕ್ಷಣ ಸಂಸ್ಥೆಗಳ ಮಾಲೀಕರು ಪ್ರವೇಶ ನಿರಾಕರಿಸುತ್ತಿರುವುದನ್ನು ಖಂಡಿಸಿ ರಾಜ್ಯಾದ್ಯಂತ ಪ್ರತಿಭಟನೆಗೆ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಕರ್ನಾಟಕ ರಾಜ್ಯ ಸಮಿತಿಯು ಕರೆ ನೀಡಿದೆ.

ಎಸ್.ಎಫ್.ಐ.ನ ಎಲ್ಲಾ ಜಿಲ್ಲಾ ಸಮಿತಿಗಳು, ತಾಲೂಕು ಘಟಕಗಳು ಕೆಳಕಂಡ ಬೇಡಿಕೆಗಳನ್ನು ಇಟ್ಟು ಚಳುವಳಿಯನ್ನು (ತಾಲೂಕು ಕಛೇರಿ, ಜಿಲ್ಲಾ ಕಛೇರಿಗಳ ಮುಂದೆ ಧರಣಿ, ಪಿಕೆಟಿಂಗ್ ಇತ್ಯಾದಿ) ನಡೆಸಬೇಕೆಂದು ಸೂಚಿಸಲಾಗಿದೆ.

ಬೇಡಿಕೆಗಳು:

ಸರ್ಕಾರ ನಿಗದಿಗೊಳಿಸಿರುವ ದುಬಾರಿ ಶುಲ್ಕಗಳನ್ನು ತಕ್ಷಣ ಇಳಿಸಬೇಕು, ಆಯ್ಕೆಯಾಗಿರುವ "ಉಚಿತ" ಹಾಗೂ "ಪಾವತಿ" ಸೀಟುಗಳ ವಿದ್ಯಾರ್ಥಿಗಳಿಗೆ ಕೂಡಲೇ ಪ್ರವೇಶ ನೀಡಬೇಕು, ಪ್ರವೇಶ ನಿರಾಕರಿಸುವ ಖಾಸಗೀ ಸಂಸ್ಥೆಗಳಿಗೆ ಆಡಳಿತಾಧಿಕಾರಿಗಳನ್ನು ನೇಮಿಸಿ ಕಾಲೇಜುಗಳನ್ನು ನಡೆಸಬೇಕು ಹಾಗೂ ಪ್ರವೇಶದ ಹಕ್ಕನ್ನು ಕುರಿತು ಖಾಸಗಿ ಸಂಸ್ಥೆಗಳ ಪರವಾಗಿ ಸರ್ಕಾರ ವಕಾಲತ್ತು ವಹಿಸುವುದನ್ನು ನಿಲ್ಲಿಸಬೇಕು.

ಬೆಂಗಳೂರಿನಲ್ಲಿ ದಿನಾಂಕ ಅಕ್ಟೋಬರ್ 5, 1993 ರಂದು ರಾಜ್‌ಭವನ್ ಮುಂದೆ ಧರಣಿಯನ್ನು ನಡೆಸಲಾಗುತ್ತದೆ ಎಂದು ಎಸ್‌ಎಫ್‌ಐನ ಪ್ರಕಟಣೆ ತಿಳಿಸಿದೆ.

ಕೋಮುವಾದಿಗಳಿಗಿಲ್ಲ ಇಲ್ಲಿ ಜಾಗ

32 ವರ್ಷದ ಸಖೀನಾಳ ಮುಖದಲ್ಲೀಗ ಒಂದು ಸಾಧನೆಯ ನಗೆ. ಅವಳಿಗೆ ಅವಳದ್ದೇ ಆದ ಚಿಕ್ಕ ಗುಡಿಸಲಿದೆ. ಕೆಲವು ತಿಂಗಳ ಹಿಂದೆ ಪೂರ್ಣಿಯಾ ಪೇಟೆಯ ಲೈನ್ ಬಝಾರ್‌ನ ಮುಚ್ಚುರಸ್ತೆಯೇ ಆಕೆಯ ಮನೆಯಾಗಿತ್ತು. ಮಹಮ್ಮದ್ ಸಯಾಮ್, ಮುನವ್ವರ್ ಹಾಗೂ ಮಹಮ್ಮದ್ ಕಮಾಲ್- ಇವರೂ ಹಗಲೆಲ್ಲಾ ಕೂಲಿ ಮಾಡಿ ರಾತ್ರಿ ದಾರಿಬದಿಯಲ್ಲಿ ಮಲಗುತ್ತಿದ್ದರು. ಪ್ರತಿ ದಿನ ಪೋಲೀಸರ ಕಾಟ ಎದುರಿಸುತ್ತಿದ್ದವರು. ಈಗ ಅವರಿಗೂ ಸ್ವಂತ ಚಿಕ್ಕ ಗುಡಿಸಲಿದೆ- "ನೋಡಿ ಕಾಮ್ರೇಡ್, ನಾನೀಗ ಇಲ್ಲಿ ಖುಷಿಯಾಗಿದ್ದೇನೆ. ನನಗೀಗ ಯಾರ ಕಾಟವೂ ಇಲ್ಲ" ಎನ್ನುತ್ತಾರೆ ಅವರು ಹಿಗ್ಗಿನಿಂದ. ಹೌದು. ಇವರೆಲ್ಲಾ ಪೂರ್ಣಿಯಾದಲ್ಲಿ ಈ ವರ್ಷದ ಆರಂಭದಲ್ಲಿ ಶುರುವಾದ ಭೂಹೋರಾಟದ ಫಲವಾಗಿ ಹೊಸದಾಗಿ ನಿರ್ಮಾಣಗೊಂಡ 'ಮುಝಫರ್ ಅಹ್ಮದ್ ನಗರ' ದ ನಿವಾಸಿಗಳು.

ಭಾರತೀಯ ಕಮ್ಯುನಿಸ್ಟ್ ಆಂದೋಲನದ ಪ್ರವರ್ತಕರಲ್ಲೊಬ್ಬರ ಹೆಸರು ಹೊತ್ತ ಈ "ನಗರ"ದ ಗುಡಿಸಲುಗಳ ವಿಶೇಷತೆ ಇಷ್ಟೇ ಅಲ್ಲ. ಪೂರ್ಣಿಯಾ ನಗರದ ಮಾಧವ್ ಪಾರಾ ಪ್ರದೇಶದಲ್ಲಿ ಮಾಜಿ ಮಂತ್ರಿ ಹಾಗೂ ದೊಡ್ಡ ಜಮೀಂದಾರ ಜೈನಾರಾಯಣ್ ಮೆಹ್ತಾ 40 ಎಕ್ರೆ ಮಿಗುತೆ ಭೂಮಿಯನ್ನು ಆಕ್ರಮಿಸಿಕೊಂಡಿದ್ದ. ಸಿಪಿಐ(ಎಂ) ಎಂ.ಎಲ್.ಎ. ಕಾ. ಅಜಿತ್ ಸರ್ಕಾರ್ ನೇತೃತ್ವದಲ್ಲಿ ಭೂ ಹೀನ ಕೃಷಿ ಕಾರ್ಮಿಕರು ಮತ್ತು ಹಿಂದುಳಿದ ವರ್ಗಗಳ ಜನ ಹೋರಾಟ ಆರಂಭಿಸಿದರು.

ಇದನ್ನು ಕಂಡ ಜೈನಾರಾಯಣ್ ಮೆಹ್ತಾ ಸ್ಥಳೀಯ ಆಡಳಿತದ ಒಂದು ವಿಭಾಗದ ಶಾಮೀಲಿನಿಂದ ತಾನು ಆಕ್ರಮಿಸಿಕೊಂಡಿದ್ದ ಜಮೀನಿನ 29 ಎಕ್ರೆಯನ್ನು 500 ಹರಿಜನರಲ್ಲಿ ಹಂಚಿದ. ಈ ಜಮೀನಿಗೆ ಹೊಂದಿಕೊಂಡಂತೆ ಒಂದು ಮುಸಲ್ಮಾನರ ಸ್ಮಶಾನ ಇತ್ತು. ಹರಿಜನರು ಸಾಕಿದ ಹಂದಿಗಳು ಈ ಸ್ಮಶಾನದತ್ತ ಹೋಗಿ ಕೋಮು ಪರಿಸ್ಥಿತಿ ಉದ್ರಿಕ್ತಗೊಳ್ಳುತ್ತದೆ, ಆ ಮೂಲಕ ಭೂ ಹೋರಾಟಕ್ಕೆ ಒಂದು ಕೆಟ್ಟ ತಿರುವು ನೀಡಲು ಸಾಧ್ಯವಾಗುತ್ತದೆ ಎಂಬುದು ಅವರ ಎಣಿಕೆಯಾಗಿತ್ತು. ಅಜಿತ್ ಸರ್ಕಾರ್ ಮತ್ತವರ ಸಂಗಾತಿಗಳಿಗೆ ಇದು ಅರಿವಾಯಿತು. ಭೂಮಿ ಪಡೆದ ಹರಿಜನರ ಒಂದು ಸಭೆ ಕರೆದು ಜಮೀಂದಾರರ ಈ ಹಂಚಿಕೆಯನ್ನು ವಿವರಿಸಲಾಯಿತು. ಅವರಿಗೂ ಇದು ಮನವರಿಕೆಯಾಯಿತು. ಅವರು ತಮ್ಮ ಪ್ರದೇಶದ ಬಡ ಮುಸ್ಲಿಮರಿಗೆ ತಮಗೆ ದೊರೆತ ಜಮೀನನ್ನು ಕೊಡಲು ನಿರ್ಧರಿಸಿದರು. ಅಷ್ಟೇ ಅಲ್ಲ ಅವರೇ ಮುಂದೆ ನಿಂತು 400 ಗುಡಿಸಲುಗಳನ್ನು ಕಟ್ಟಿ ಕೊಟ್ಟರು ಎಧವ್ರ ಜಮೀಂದಾರನ, ಆಡಳಿತದ ಕುಯುಕ್ತಿ-ಹರಿಜನರ ತ್ಯಾಗದಿದ ವಿಫಲವಾಯಿತು. ಮುಝಫರ್ ಅಹ್ಮದ್ ನಗರ ಸ್ಥಾಪನೆಗೊಂಡಿತು. ಹರಿಜನರ ತ್ಯಾಗವನ್ನು ಕಂಡ ಬಡ ಮುಸಲ್ಮಾನರೂ ಹಿಂದೆ ಬೀಳಲಿಲ್ಲ. ಅವರೂ ಬಡಹರಿಜನ, ಆದಿವಾಸಿಗಳಿಗೆ ತಮ್ಮ "ನಗರ"ದಲ್ಲೇ ಒಂದು ಜಮೀನು ಕೊಟ್ಟು ಅವರಿಗಾಗಿ ಗುಡಿಸಲು ಕಟ್ಟಿಕೊಟ್ಟರು. ಈಗ ಈ ಜಮೀಂದಾರ ಆಕ್ರಮಿಸಿಕೊಂಡಿದ್ದ 40 ಎಕ್ರೆ ಜಾಗದಲ್ಲಿ 700 ಹಿಂದು-ಮುಸ್ಲಿಂ ಬಡಕುಟುಂಬಗಳು ನೆಲೆಸಿವೆ.

ಡಿಸೆಂಬರ್ 6 ರಂದು ಅಯೋಧ್ಯೆಯಲ್ಲಿ ಕೋಮುವಾದಿಗಳ ಹೀನ ಕೃತ್ಯದ ನಂತರ ದೇಶದೆಲ್ಲಡೆಯಂತೆ ಬಿಹಾರದ ನಗರ-ಪಟ್ಟಣ ಹಳ್ಳಿಗಳಲ್ಲಿ ಕೋಮುದಂಗೆಗಳೆದ್ದಾಗ, ಸುತ್ತಲಿನ ಜಿಲ್ಲೆಗಳನ್ನೂ ಆವರಿಸಿದ್ದಾಗ ಈ ಪಟ್ಟಣ ಹಾಗೂ ಭೂ ಹೋರಾಟ ರಭಸದಿಂದ ನಡೆದ ಈ ಜಿಲ್ಲೆಯ ಇತರೆಡೆಗಳಲ್ಲಿ ಯಾವುದೇ ಕೋಮುದಂಗೆ ನಡೆಯಲಿಲ್ಲ.

ಇದು ಕೋಮುದಂಗೆಗಳ ಸ್ವರೂಪದತ್ತ ನಮ್ಮ ಗಮನ ಸೆಳೆಯುತ್ತದೆ. ಸಾಮಾನ್ಯವಾಗಿ ಕೋಮುದಂಗೆಗಳ ಕಾಲದಲ್ಲಿ ಮೇಲ್ಜಾತಿಯ ಭೂಮಾಲಿಕರು ಕೆಳಜಾತಿಯ ಒಕ್ಕಲುಗಳನ್ನು ಇತರರನ್ನು ಇತರ ಮತಾವಲಂಬಿಗಳ ಮೇಲೆ ಛೂ ಬಿಡುತ್ತಾರೆ. ಆದರೆ ವರ್ಗ ಹೋರಾಟ ನಡೆಯುತ್ತಿರುವಾಗ, ಈ ಜಮೀಂದಾರರ ನಿಜವಾದ ವರ್ಗಸ್ವರೂಪ ತಾಂಡವಾಡುತ್ತಿರುವಾಗ ಜಮೀಂದಾರರುಗಳಿಗೆ ಹೀಗೆ ಮಾಡಲಾಗುವುದಿಲ್ಲ. ವರ್ಗ ಹೋರಾಟ ತೀವ್ರಗೊಂಡಾಗ, ತಮ್ಮ ನಿಜವಾದ ಶತ್ರುಗಳು ಯಾರು ಎಂಬ ಬಗ್ಗೆ ದುಡಿಯುವ ಜನಗಳಲ್ಲಿ ಗೊಂದಲವಿಲ್ಲದಿದ್ದಾಗ ಜಾತಿ ಮತಗಳ ಕೃತಕ ಗೋಡೆಗಳು ಅಡ್ಡಬರುವುದಿಲ್ಲ. ಪೂರ್ಣಿಯಾ ಜಿಲ್ಲೆಯ ಬಿಜೆಪಿ ಜಮೀಂದಾರರಿಗೆ ಇದರಿಂದಾಗಿ ಕೋಮುಗಲಭೆ ಸೃಷ್ಟಿಸಲು ಸಾಧ್ಯವಾಗಲಿಲ್ಲ. ●

ಕೆಂಪು ಬಾವುಟದ ನೆರಳಿನಲ್ಲಿ ಒಂದು ಲಕ್ಷ ಬ...
ಭೂ ಹೋರಾಟ: ಬಿಹಾರದಲ್ಲಿನ ಮಹ...

ಕಳೆದ ಒಂದು ವರ್ಷದ ಅವಧಿಯಲ್ಲಿ ಬಿಹಾರದಲ್ಲಿ ಭೂ ಹೋರಾಟ ಹೊಸ ಘಟ್ಟ ತಲುಪಿದೆ. ಸಿಪಿಐ(ಎಂ) ನೇತೃತ್ವದ ಕಿಸಾನ್ ಸಭಾ ಮತ್ತು ಖೇತ್ ಮಜದೂರ್ ಸಂಘಗಳು ಕಳೆದ ವರ್ಷದ ಆಗಸ್ಟ್‌ನಲ್ಲಿ ಪ್ರಾರಂಭಿಸಿದ ಈ ಹೋರಾಟದಲ್ಲಿ 22,000 ಎಕರೆ ಬೇನಾಮಿ ಹಿಡುವಳಿಗಳನ್ನು ಭೂ ರಹಿತ ರೈತ ಕೂಲಿಕಾರರು ಆಕ್ರಮಿಸಿಕೊಂಡಿದ್ದಾರೆ. ಈ ಜಮೀನನ್ನು ಜಮೀನ್ದಾರರು ಕಾನೂನು ಬಾಹಿರವಾಗಿ ತಮ್ಮ ಹಿಡಿತದಲ್ಲಿರಿಸಿಕೊಂಡಿದ್ದರು. ಒಂದು ಲಕ್ಷಕ್ಕೂ ಹೆಚ್ಚು ಕೃಷಿ ಕೂಲಿಕಾರರು, ಜಮೀನುಗಳಲ್ಲಿ ಬಡರೈತರು ಕೆಂಪು ಬಾವುಟದಡಿ ಈ ಬೇಸಾಯವನ್ನು ಪ್ರಾರಂಭಿಸಿದ್ದಾರೆ. ಈ ಚಳುವಳಿ ಬಿಹಾರದ ಸುಮಾರು ಇಪ್ಪತ್ತು ಜಿಲ್ಲೆಗಳಿಗೆ ಈಗ ಹರಡಿದೆ.

"ಸಾವಿಗಂಜುವರಲ್ಲ.........."

ಈ ಹೋರಾಟವೇನೂ ಸುಲಭವಾಗಿರಲಿಲ್ಲ. ಕಳೆದೊಂದು ವರ್ಷದಲ್ಲಿ ಹನ್ನೊಂದು ಸಂಗಾತಿಗಳು ತಮ್ಮ ಜೀವ ತೆತ್ತಿದ್ದಾರೆ. ಅನೇಕರು ಜಮೀನ್ದಾರ ಶಕ್ತಿಗಳ ದೌರ್ಜನ್ಯಕ್ಕೊಳಗಾಗಿದ್ದಾರೆ. ಆದರೆ ಈ ಸಮರಶೀಲ ಜನರು ಹಿಮ್ಮೆಟ್ಟಲಿಲ್ಲ. ಸಾವು ನೋವುಗಳ ನಡುವೆಯೂ ಅವರು ಅಮಿತ ಉತ್ಸಾಹದಿಂದ ಮುನ್ನುಗ್ಗಿದ್ದಾರೆ. ಸ್ಪೇನ್‌ನ ಆಂತರಿಕ ಯುದ್ಧದಲ್ಲಿ ಕಮ್ಯುನಿಸ್ಟರ ಬಗ್ಗೆ ಡೊ. ಲೊರಸ್ ಇಬಾರುರಿ ಹೇಳಿದಂತೆ 'ನಾವು ಸಾವಿಗಂಜುವರಲ್ಲ ಯಾಕೆಂದರೆ ನಾವು ಸಾವಿನೊಳೂ ಸಾಯುವುದಿಲ್ಲ' ಎಂಬ ಧೀಮಂತ ಧೋರಣೆಯನ್ನು ಅವರು ಮೆರೆದಿದ್ದಾರೆ.


ಆದರೆ ಈ ದೌರ್ಜನ್ಯ ದಬ್ಬಾಳಿಕೆಗಳಿಗೆ ಕಾರಣವೇನು? ಈ ಚಳುವಳಿ ಕೇಳುತ್ತಿರುವುದು ಕಾನೂನು ಬಾಹಿರವಾದದ್ದೇ? ಅಲ್ಲ, ಈ ಚಳುವಳಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳೆರಡನ್ನೂ ಆ ಸರ್ಕಾರಗಳೇ ತಂದಿರುವ ಕಾನೂನನ್ನು ಕಾರ್ಯರೂಪಕ್ಕೆ ತನ್ನಿ ಎಂದಷ್ಟೇ ಕೇಳುತ್ತಿದೆ. ಇದರಲ್ಲೇನು ತಪ್ಪು?

ಲಲ್ಲೂಪ್ರಸಾದರ ಸರ್ಕಾರವೇ 1990-91 ರ ಆಯ-ವ್ಯಯ ಮಂಡನೆಯ ಸಮಯದಲ್ಲಿ ಸುಮಾರು ಎಂಟು ಲಕ್ಷ ಎಕರೆಗೂ ಮೀರಿ ಮಿಗುತಾಯ ಭೂಮಿಯಿದೆ ಎಂದಿತ್ತು. ಇದರಲ್ಲಿ 4.7 ಲಕ್ಷ ಎಕರೆಗಳನ್ನು ಗುರುತಿಸಿ ಮಿಗುತಾಯ ಭೂಮಿ ಎಂದು ಘೋಷಿಸಿತ್ತು. ಇದರಲ್ಲಿ 3.7 ಲಕ್ಷ ಎಕರೆಗಳನ್ನು ಸರ್ಕಾರ ಸ್ವಾಧೀನಪಡಿಸಿಕೊಂಡು 2.4 ಲಕ್ಷ ಎಕರೆಗಳನ್ನು ಹಂಚಿತ್ತು. ನಿಜದಲ್ಲಿ ಈ ಹಂಚಿಕೆಯಾದ ಭೂಮಿಯೂ ಪುನಃ ಭೂಮಾಲಿಕರ ಹಿಡಿತಕ್ಕೆ ಜಾರಿದೆ. ಈ ನಮ್ಮ ಭೂ ಚಳುವಳಿ ಬಯಸಿದ್ದಿಷ್ಟೇ- ಈಗಾಗಲೇ ಮಿಗುತಾಯವೆಂದು ಗುರುತಿಸಲ್ಪಟ್ಟಿರುವ ಭೂಮಿಯನ್ನು ಭೂ ರಹಿತ ಬಡವರಿಗೆ ಹಂಚಬೇಕು ಎಂದು. ಹಿಂದೆ 1950 ರಲ್ಲಿ ಬಿಹಾರದಲ್ಲಿ ಪಾಲು ರೈತರ ನೊಂದಾವಣೆ ಪ್ರಾರಂಭಿಸಿದಾಗ ಖಾಸಗಿ ಸೇನೆಗಳ ಉಪಟಳದಿಂದ ನೊಂದಣಿ ಕ್ರಮವನ್ನೇ ಕೈಬಿಡಬೇಕಾಗಿ ಬಂದುದನ್ನು ಇಲ್ಲಿ ಸ್ಮರಿಸಬೇಕಾಗುತ್ತದೆ.

ರೈತ ಹೋರಾಟದ ಮಹತ್ವ


ಇಲ್ಲಿ ನಾವು ಆಳುವ ವರ್ಗದ ಸಖ್ಯವನ್ನು ಗಮನಿಸಬೇಕು. ಬೂರ್ಝ್ವಾ ವರ್ಗ ಭೂ ಸುಧಾರಣೆ ಬಯಸಿದರೂ ಅದು ತನ್ನ ಜೊತೆಗಾರ ಜಮೀನ್ದಾರಿ ವರ್ಗದ ಹಿತಾಸಕ್ತಿ ಕಾಯಲು ಭೂ ಸುಧಾರಣೆಯನ್ನು ಜಾರಿಗೆ ತರಲು ಹಿಂಜರಿಯುತ್ತದೆ. ಆದ್ದರಿಂದಲೇ ಅದು ಭೂ ಸುಧಾರಣೆಯ ... ದರೂ ಜಾರಿಗೆ ತರುವಲ್ಲಿ ಆಸಕ್ತಿ... ದಿಲ್ಲ. ಇದು ಈ ಎರಡೂ ವರ್ಗ... ಕ್ತಿಗೆ ತಕ್ಕುದಾದದ್ದು. ಈ ಹಿನ್ನೆಲೆ... ಭಾರತದಲ್ಲಿ ಪ್ರಜಾಸತ್ತಾತ್ಮಕ ಕ್ರಾ... ಗೊಂಡಿಲ್ಲ ಎಂಬುದನ್ನು ಗಮನಿ... ತ್ತದೆ. ಈ ಪ್ರಜಾಸತ್ತಾತ್ಮಕ ಕ್ರಾ... ಪೂರ್ಣಗೊಳಿಸುವ ಅವಶ್ಯಕತೆ... ಇದಕ್ಕೆ ರೈತ ಸಮೂಹ ಕ್ರಿಯಾ... ಹೋರಾಟದ ಕಣಕ್ಕಿಳಿಯಬೇಕಾ...

ಈ ಕ್ರಾಂತಿಯನ್ನು ಸಾಧಿಸ... ಎರಡು ವೈರುಧ್ಯಗಳನ್ನು ಬಳಸಿಕೊ... ಗುತ್ತದೆ. ಆಳುವ ವರ್ಗ ಮ... ಪಕ್ಷಗಳ ಒಳಗಿನದು ಒಂದಾ... ಳಿತ ವರ್ಗದ ವಿರುದ್ಧ ಹರಿತವಾ... ವರ್ಗ ಹೋರಾಟ ಇನ್ನೊಂದ... ಈ ಎರಡನ್ನೂ ಬಹಳ ಎಚ್ಚರಿಕೆ... ಸಬೇಕಾಗುತ್ತದೆ. ಪರಿಮಿತಿಯ... ದರೆ ಅದರಿಂದ ಹಾನಿಯೇ ಹೆ... ಈ ಅರಿವು ಸಿಪಿಐ(ಎಂ) ನ ... ಸಂದರ್ಭದ ಗ್ರಹಿಸುವಿಕೆ ಮತ್ತು... ನಾಗಿ ಅದು ಆಳವಡಿಸಿಕೊಂ... ತಂತ್ರಗಾರಿಕೆಯ ನೆಲೆಗಟ್ಟಾಗಿ... ಹೋರಾಟಕ್ಕೆ ಎರಡು ಮುಖ... ಳಿವೆ. ಒಂದು ಬಿಜೆಪಿಯ... ಫ್ಯಾಸಿಸ್ಟ್ ಕಾರ್ಯಕ್ರಮದ ವಿರುದ್ಧ... ಸತ್ತಾತ್ಮಕ ಮತ್ತು ಜಾತ್ಯಾತೀತ... ಅಣಿನೆರೆಸಿ ಹೋರಾಡುವುದು... ಕಾಂಗ್ರೆಸ್(ಐ)ನ ನೀತಿಗಳ ವಿ... ಹೋರಾಟವನ್ನು ನಡೆಸುವುದು... ಹೋರಾಟ ದುಡಿವ ವರ್ಗದ... ದಲ್ಲಿ ತೀವ್ರವಾದಂತೆ ರೈತ ಹೋ... ಬಹಳ ಮುಖ್ಯವಾಗುತ್ತದೆ. ಆ... ಸಿಪಿಐ(ಎಂ)ನ ಕಾರ್ಯಕ್ರಮ "ಕಾ...



ಬಹು-ಚಾನೆಲ್ ಉಪಗ್ರಹ ಟಿವಿಯ ಭರಾಟೆ

ಮೇಘ ಸಂದೇಶವೋ ಅಥವಾ ಕತ್ತಲು ಕವಿಸುವ ಕಾರ್ಮೋಡಗಳೋ?



--ಶರತ್ ಚಂದ್ರ

ಸ್ಟಾರ್, ಬಿಬಿಸಿ, ಝಿ, ಎ.ಟಿ.ಎನ್, ಸನ್, ಸಿ.ಎನ್.ಎನ್.ಗಳು ಇಂದು ಮನೆಮಾತಾಗಿವೆ. ಸ್ಯಾಟಿಲೈಟ್ ಟಿ.ವಿ., ಕೇಬಲ್ ಟಿವಿ, ಡಿಶ್ ಆಂಟೆನಾ ಎಲ್ಲರಿಗೂ ಪರಿಚಿತ ಶಬ್ದಗಳಾಗಿವೆ. ಹಲವು ನಗರಗಳಲ್ಲಿ, ಸಣ್ಣಪಟ್ಟಣಗಳಲ್ಲೂ ದಿಗಂತದಲೆಲ್ಲಾ ಡಿಶ್ ಆಂಟೆನಾಗಳ ಸಾಲು ಸಾಲು. ಇವು ಕೆಲವರು ಹೇಳುವಂತೆ ದೂರದರ್ಶನದ ಏಕ-ಚಾನೆಲ್‌ನ ಏಕತಾನತೆಯಿಂದ 'ಬಿಡುಗಡೆ' ಮಾಡಿ ಮಾಹಿತಿ, ಮನೋರಂಜನೆ, ವೈವಿಧ್ಯಮಯ ಹೊಸ ಲೋಕಕ್ಕೊಯ್ಯುವ ಪರಿಹಾರರೋ? ಜಗತ್ತು ಒಂದೇ ಹಳ್ಳಿಯೋ ಎಂಬಂತೆ ಸುದ್ದಿ, ಮಾಹಿತಿಯ ತತ್‌ಕ್ಷಣ ವಿತರಣೆ ಮಾಡುವ ಅದ್ಭುತ ಜಾಲವೋ? ಮಾನವ ಸಂಸ್ಕೃತಿಯ ಜಾಗತೀಕರಣದ ಸಾಧನವೋ? ಅಥವಾ ದೈತ್ಯ ಬಹು-ರಾಷ್ಟ್ರೀಯ ಕಂಪನಿಗಳ ಕಪಿಮುಷ್ಟಿಯಲ್ಲಿರುವ ಜನಮನ ಉಗೋಳಿಸುವ ಹೊಸ ಅಸ್ತ್ರಗಳೋ, ಸಾಮ್ರಾಜ್ಯಶಾಹಿಯ ಕಣ್ಣಲ್ಲಿ ಎಲ್ಲಾ ಸುದ್ದಿ, ಮಾಹಿತಿಗಳನ್ನು ನೋಡಿಸಿ ಜನರ ಬುದ್ಧಿಗೆ, ಕಣ್ಣಿಗೆ ಮಂಕು ಕವಿಸುವ ಸಾಧನಗಳೋ? ಜಗತ್ತಿನ ಹಲವು ಪ್ರದೇಶಗಳ ಜನತೆಯ ತನ್ನದೇ ಆದ ವೈವಿಧ್ಯಮಯ ಸಂಸ್ಕೃತಿಗಳನ್ನು ತುಳಿದು, ರೋಗಗ್ರಸ್ತ ಬಂಡವಾಳಶಾಹಿ ಸಂಸ್ಕೃತಿ ಹೇರಿಸುವ ಪ್ರಯತ್ನವೋ? ಬಹು-ಚಾನೆಲ್ ಉಪಗ್ರಹ ಟಿ.ವಿ.ಯ ಹಲವು ಮಗ್ಗಲುಗಳ ಬಗ್ಗೆ ಬೆಳಕು ಬೀರುವ ಲೇಖನ.

ಕಳೆದ ಹಲವು ತಿಂಗಳುಗಳಿಂದ ಉಪಗ್ರಹ-ಟಿವಿ ಚಾನೆಲ್‌ಗಳ ವಿತರಣೆ ಮಾಡುವ ಕೇಬಲ್-ಟಿವಿ ಜಾಲದ ಕನೆಕ್ಷನ್ ಹಾಕಿಸಿಕೊಂಡವರಿಗೆ ಟಿವಿಯಲ್ಲಿರುವ ಹಲವು ಚಾನೆಲ್‌ಗಳ ಉಪಯೋಗ ಮೊದಲಬಾರಿಗೆ ಆಗುತ್ತಿದೆ. ಬೆಂಗಳೂರು ನಗರ ಹಾಗೂ ಇತರ ಹಲವು ನಗರಗಳಲ್ಲೂ, ಪಟ್ಟಣಗಳಲ್ಲೂ ಮೂಲೆ ಮೂಲೆಗಳಲ್ಲಿ ಕೇಬಲ್-ಟಿ.ವಿ. ಜಾಲ ಹಬ್ಬಿದೆ. ರೂ. 500-750 ಮುಂಗಡ, ತಿಂಗಳಿಗೆ 75-100 ರೂ. ತೆತ್ತರೆ ಬರುವ ಈ ಕನೆಕ್ಷನ್ ಸಾಮಾನ್ಯವಾಗಿ ಆರು ಚಾನೆಲ್‌ಗಳನ್ನು ದೊರಕಿಸುತ್ತದೆ. ಸ್ಟಾರ್‌ಪ್ಲಸ್, ಬಿಬಿಸಿ, ಪ್ರೈಮ್ ಸ್ಪೋರ್ಟ್ಸ್, ಮ್ಯೂಸಿಕ್ ಟಿ.ವಿ, ಝೀ.ಟಿವಿ, ಸನ್.ಟಿವಿ. ಇವೆಲ್ಲಾ ಉಪಗ್ರಹದ ಮೂಲಕ ಬಿತ್ತರವಾಗುವ ಹಾಂಗ್-ಕಾಂಗ್‌ನಿಂದ ಉಪಗ್ರಹಕ್ಕೆ ಹೋಗಿ ಬಿತ್ತರವಾಗುವ ಚಾನೆಲ್‌ಗಳು.

ಟಿವಿ ಪ್ರಸಾರಕ್ಕೆ ಉಪಗ್ರಹದ ಬಳಕೆ ಹೊಸದಲ್ಲ. 1984 ರಲ್ಲಿ ದೂರದರ್ಶನದ ದೆಹಲಿ ಕೇಂದ್ರದ ಮರುಪ್ರಸಾರ ದೇಶದ ಉದ್ದಗಲಗಳಲ್ಲಿರುವ ಸುಮಾರು 150 ಕೇಂದ್ರಗಳ ಅಲ್ಪಶಕ್ತಿಯ ಟ್ರಾನ್ಸ್‌ಮಿಟರ್‌ಗಳಿಂದ ಸಾಧ್ಯವಾದದ್ದು ಇನ್ಸಾಟ್ ಉಪಗ್ರಹಗಳ ಬಳಕೆಯಿಂದ. ಈಗ ಉಪಗ್ರಹದ ಬಳಕೆಯ ವಿಶೇಷತೆಯೆಂದರೆ, ಈಗ ಇದು ಬಳಕೆಯಾಗುತ್ತಿರುವುದು ಹಲವಾರು ದೇಶಗಳಿರುವ ವಿಶ್ವದ ದೊಡ್ಡ ಭಾಗವೊಂದಕ್ಕೆ ಪ್ರಸಾರ ಮಾಡುವ ಸಾಮರ್ಥ್ಯ. ಇದನ್ನು ಡಿಶ್ ಆಂಟೆನಾಗಳು ಹಾಗೂ ಉಪಗ್ರಹ ರಿಸೀವರ್‌ಗಳನ್ನಿಟ್ಟುಕೊಂಡರೆ ಯಾರಾದರೂ ಸೀದಾ ಟಿ.ವಿ.ತೆರೆಯಲ್ಲಿ ನೋಡಬಹುದಾದ ಇಲ್ಲವೆ ಇಂತಹ ಡಿಶ್ ಆಂಟೆನಾಗಳನ್ನು ಇಟ್ಟುಕೊಂಡು ಕೇಬಲ್ ಮೂಲಕ 200-300 ಗ್ರಾಹಕರಿಗೆ ವಿತರಣೆ ಆಗುವ ಸಾಧ್ಯತೆ. ಟಿ.ವಿ. ದೇಶಗಳ ಗಡಿಯ ಮಿತಿ ದಾಟಿದ ಅಂತರ್ರಾಷ್ಟ್ರೀಯ ಮಾಧ್ಯಮವಾಗಿರುವುದು ಈಗಿನ ವಿಶೇಷತೆ.

ಕಾನೂನುಬಾಹಿರ ಕ್ರಮ

ಈಗ ಇರುವ ಇಂಡಿಯನ್ ಟೆಲಿಗ್ರಾಫ್ ಕಾನೂನಿನ ಪ್ರಕಾರ ಡಿಶ್ ಆಂಟೆನಾಗಳನ್ನು ಇಟ್ಟುಕೊಳ್ಳುವುದಾಗಲಿ, ಕೇಬಲ್ ಟಿ.ವಿ. ಜಾಲದ ವ್ಯವಸ್ಥೆ ಮಾಡುವುದಾಗಲಿ ಕಾನೂನು ಬಾಹಿರ. ಆದರೂ ಕೇಬಲ್-ಟಿವಿ ಶರವೇಗದಿಂದ ಹಬ್ಬುತ್ತಿದೆ. ಸರ್ಕಾರ ಈ ಕಾನೂನಿನ ಉಲ್ಲಂಘನೆ ನೋಡಿಯೂ ನೋಡದಂತೆ ಕಣ್ಣುಮುಚ್ಚಿ ಕೂತಿದೆ. ಬದಲಾಗಿ ಈ ಕೇಬಲ್ ಟಿ.ವಿ ಜಾಲವನ್ನು ಕಾನೂನು ಸಮ್ಮತಗೊಳಿಸಲು ಕಾನೂನು ಮಾಡ ಹೊರಟಿದೆ.

ಈ ನಡುವೆ ಉಪಗ್ರಹ ಟಿ.ವಿ. ಚಾನೆಲ್‌ಗಳು ವೇಗವಾಗಿ ಹಬ್ಬುತ್ತಿವೆ. ಭಾರತೀಯ ಭಾಷೆಗಳ ಕಾರ್ಯಕ್ರಮ ಪ್ರಸಾರದ ಚಾನೆಲ್‌ಗಳು ಆರಂಭವಾಗಿವೆ. ಹಿಂದಿಯಲ್ಲಿ ಝೀ ಟಿವಿ ಮತ್ತು ಎ.ಟಿ.ಎನ್. ತಮಿಳಿನಲ್ಲಿ ಸನ್ ಟಿವಿ, ಮಲೆಯಾಳಂನಲ್ಲಿ ಏಶಿಯಾನೆಟ್ ಪ್ರಸಾರ ಆರಂಭಿಸಿವೆ. ಸ್ಟಾರ್ ಟಿವಿಯ ವೀಕ್ಷಕರ ಸಂಖ್ಯೆ ಎರಡೇ ವರ್ಷದಲ್ಲಿ ನಾಲ್ಕು ಲಕ್ಷದಿದ 33 ಲಕ್ಷಕ್ಕೇರಿದೆ. ಇನ್ನೂ ಹಲವಾರು ಕಂಪನಿಗಳು, ಉದ್ಯಮಿಗಳು ಉಪಗ್ರಹ ಚಾನೆಲ್‌ನಲ್ಲಿ ಬಂಡವಾಳ ತೊಡಗಿಸಲಾರಂಭಿಸಿದ್ದಾರೆ. ಬಿಜೆಪಿ ಸಂಸತ್ ಸದಸ್ಯ ಡಾ. ಜೆ.ಕೆ. ಜೈನ್ ಹಾಗೂ ಅಮೇರಿಕಾದ ಕೆಲವು ಅನಿವಾಸಿ ಭಾರತೀಯರು ಸೇರಿ ಜೈನ್ (JAIN Joint American Indian Network) ಎಂಬ ಒಂಬತ್ತು ಚಾನೆಲ್‌ಗಳ ಪ್ರಸಾರ ಆರಂಭಿಸಿದ್ದಾರೆ. ಈ ಎಲ್ಲಾ ಪೈಪೋಟಿ ನೋಡಿ ದೂರದರ್ಶನ ಸಹ ಐದು ಚಾನೆಲ್‌ಗಳ ಉಪಗ್ರಹ ಟಿವಿ ಪ್ರಸಾರ ಆರಂಭಿಸಿದೆ. ಈ ರೀತಿ ಉಪಗ್ರಹ ಟಿವಿ ಚಾನೆಲ್‌ಗಳು ಸುಗ್ಗಿಯೇ ಆರಂಭವಾಗಿದೆ. ಬಹುಭಾಗ ವಿದೇಶೀ ನಿಯಂತ್ರಣ ಇರುವ ಇಷ್ಟೊಂದು ಚಾನೆಲ್‌ಗಳು ಆರಂಭವಾಗಿರುವುದರ ಪರಿಣಾಮ ಏನು?


ವ್ಯಾಪಾರೀಕೃತವಾದ ಮಾಧ್ಯಮ

ಉಪಗ್ರಹ ಟಿವಿ-ಚಾನೆಲ್ ಆರಂಭಿಸುವುದು ಕೋಟಿಗಟ್ಟಲೆ ಬಂಡವಾಳ ಬೇಕಾದ ಭಾರಿ ಉದ್ಯಮವಾಗಿಬಿಟ್ಟಿದೆ. ಇದರಲ್ಲಿ ಉಪಗ್ರಹಗಳ ಟ್ರಾನ್ಸ್‌ಪಾಂಡರ್‌ಗಳ ಸಮಯ ಖರೀದಿಗೆ ಹಣ ಹೂಡಿದರೆ, ಭಾರಿ ಕಂಪನಿಗಳ ಟಿವಿ. ಜಾಹೀರಾತುಗಳಿಂದಲೇ ಅಗಾಧ ಲಾಭವಿದೆ. ಈ ಚಾನೆಲ್‌ಗಳು ಹೆಚ್ಚು ಜನರನ್ನು ತಲುಪಿದಷ್ಟು ಜಾಹಿರಾತಿಗೆ ಹೆಚ್ಚು ಸಂಪಾದಿಸಬಹುದು. ಈ ರೀತಿ ಇದರ ಹಿಂದಿರುವ ಉದ್ದೇಶ ಹೆಚ್ಚೆಚ್ಚು ಲಾಭಗಳಿಸುವುದು. ಇದರಲ್ಲಿ ಹಣ ತೊಡಗಿಸುವುದು, ಜಾಹೀರಾತು ನೀಡುವುದು- ದೊಡ್ಡ ದೇಶೀ ಕಂಪನಿಗಳು ಹಾಗೂ ಬಹುರಾಷ್ಟ್ರೀಯ ಕಂಪನಿಗಳು ಜಾಗತಿಕವಾಗಿ ತಮ್ಮ ನೆಲೆ ಭದ್ರ ಪಡಿಸಿಕೊಳ್ಳಲು, ಹರಡಲೂ ಈ ಮಾಧ್ಯಮವನ್ನು ಸ್ವಾಭಾವಿಕವಾಗಿಯೇ ಬಳಸುತ್ತವೆ.

ಉದಾಹರಣೆಗೆ ಸ್ಟಾರ್ ಪ್ರಸಾರ ಮಾಡುವ ಬಿಬಿಸಿ ಸುದ್ದಿಯೆಲ್ಲಾ ಘಟನೆಗಳನ್ನು ಸಾಮ್ರಾಜ್ಯಶಾಹಿ ಕಣ್ಣೋಟದಿಂದ ನೋಡುವ ಪ್ರಸಾರಗಳು ಬಿಬಿಸಿಯ ಸುದ್ದಿ ಪ್ರಸಾರಗಳ ಗುಣಮಟ್ಟದ ಬಗ್ಗೆ ವಿಪರೀತ ಹಾಡಿ ಹೊಗಳಲಾಗುತ್ತದೆ. ಅದರ ವ್ಯಾಪಕತೆ, ತಾಂತ್ರಿಕ ಗುಣಮಟ್ಟದ ಬಗ್ಗೆ ಎರಡು ಮಾತಿಲ್ಲವಾದರೂ, ಅದರ ಪಕ್ಷಪಾತ ನೀತಿ ಸ್ಪಷ್ಟ. ರಶ್ಯಾದ ಬಿಕ್ಕಟ್ಟಿನ ಸುದ್ದಿ ಪ್ರಸಾರ ಮಾಡುವಾಗ ಯೆಲ್ಟ್‌ಸಿನ್‌ಗೆ ಬಹಿರಂಗ ಬೆಂಬಲ ನೀಡುತ್ತಿದೆ. ಅದರ ಪ್ರಕಾರ ... ರುವುದು ... ಯಿದ, ... ಮೂರ... ವಾದಿ ... ... ಲಕಲ್ಲೋ... ಮಾಧ್ಯ... ನಮ್ಮ ದ... ವಾಗಿರು... ಕಾರ್ಯ... ಟಕಾರಿ... ಸಾಮ್ರಾ... ಸುತ್ತವೆ ... ಪಾತ್ರ ... ಪಾತ್ರ ನಿ...

ಸಾಂಸ...

... ಮ್ಯೂಸಿ...



...ರೈತರ ಬೇಸಾಯ ...ಕ ಬೆಳವಣಿಗೆ

ಜನತೆಯ ಪ್ರಜಾಸತ್ತಾತ್ಮಕ ಕ್ರಾಂತಿಯ ಬೆನ್ನೆಲುಬು" ಎಂದು ಗುರುತಿಸುವುದು.

ಭೂ ಹೋರಾಟಗಳು ನಡೆಯುತ್ತಿರುವ ಬಿಹಾರದ ಜಿಲ್ಲೆಗಳಿಗೆ ಭೇಟಿ ನೀಡಿ ಬಂದಿರುವ ಪೊಲಿಟ್‌ಬ್ಯೂರೋ ಸದಸ್ಯ ಕಾಂ. ಸೀತಾರಾಂ ಯೆಚೂರಿ ಈ ಹೋರಾಟಗಳ ಸೈದ್ಧಾಂತಿಕ ನೆಲೆಗಟ್ಟುಗಳನ್ನು ವಿಶ್ಲೇಷಿಸಿದ್ದಾರೆ.

ಕೋಮುವಾದಕ್ಕೆ ಸವಾಲದ ವರ್ಗ ಹೋರಾಟ

ಈ ವಿಶಾಲ ಹಿನ್ನೆಲೆಯಲ್ಲೇ ಬಿಹಾರದ ರೈತರ ಹೋರಾಟ ಪ್ರಾಮುಖ್ಯತೆ ಪಡೆಯುವುದು. ಪೂರ್ಣಿಯಾ ಈ ಭೂ ಹೋರಾಟಗಳು ಭೋರ್ಗರೆಯುತ್ತಿರುವ ಜಿಲ್ಲೆ. ಇಲ್ಲಿ ನಲವತ್ತು ಸಾವಿರಕ್ಕೂ ಹೆಚ್ಚು ಭೂ ರಹಿತರು 10,000 ಎಕರೆಗೂ ಹೆಚ್ಚು ಭೂಮಿಯನ್ನು ಆಕ್ರಮಿಸಿ ಸಾಗುವಳಿ ಮಾಡುತ್ತಿದ್ದಾರೆ. ಇಲ್ಲಿ ರಕ್ತ ಹೊಳೆ ಹರಿದಿದೆ. ದೌರ್ಜನ್ಯ ಅವಿರತವಾಗಿ ನಡೆದಿದೆ. ಹಲವು ಸಂಗಾತಿಗಳು ವೀರಮರಣವನ್ನಪ್ಪಿದ್ದಾರೆ. ಆದರೆ ಈ ಜನ ತಮ್ಮ ಉದ್ದೇಶದಿಂದ ವಿಮುಖರಾಗಿಲ್ಲ. ಬಹಳ ಆಶ್ಚರ್ಯಕರವಾದ ವಿಷಯವೆಂದರೆ ಎಲ್ಲ ಕಡೆ ಕೋಮು ದಳ್ಳುರಿ ಹೊತ್ತಿ ಉರಿದರೂ ಪೂರ್ಣಿಯ ಜಿಲ್ಲೆ ಕೋಮು ವೈಷಮ್ಯ ಕಂಡಿಲ್ಲ. ಯಾಕೆ?

ಯಾಕೆಂದರೆ ಇಲ್ಲಿ ವರ್ಗ ಹೋರಾಟ ಮುಖ್ಯವಾಗಿದೆ. ವರ್ಗ ಹೋರಾಟ ಪ್ರಾಮುಖ್ಯತೆ ಪಡೆದಿರುವಲ್ಲಿ ಜಾತಿ ಧರ್ಮಗಳಂತಹ ಭೇದಗಳು ನಗಣ್ಯವಾಗುತ್ತವೆ. ಯಾಕೆಂದರೆ ಜನರಿಗೆ ತಮ್ಮ ಬದುಕಿನ ಪ್ರಶ್ನೆಗಳು ಮುಖ್ಯವಾಗುತ್ತವೆ. ಇಂತಹ ಸಂದರ್ಭದಲ್ಲಿ ಕೋಮು ದಳ್ಳುರಿ ಹೊತ್ತಿಸಲು ಬಿಜೆಪಿಯ ಜಮೀನ್ದಾರರು ನಡೆಸಿದ ಪಿತೂರಿಯೊಂದು ಪೂರ್ಣವಾಗಿ ವಿಫಲವಾಗಿದೆ. (ಬಾಕ್ಸ್‌ನೋಡಿ)

ಈ ಹೋರಾಟಗಳ ಪರಿಣಾಮ ಎಂತಹದ್ದೆಂದರೆ ಈಗ ಈ ಹೋರಾಟಗಳಿಗೆ ವಿರುದ್ಧವಾಗಿದ್ದ ಬಿಹಾರದ ಮುಖ್ಯಮಂತ್ರಿ ಲಲ್ಲೂ ಪ್ರಸಾದರೂ ಇದರ ವಿರುದ್ಧ ಮಾತನಾಡದಂತಾಗಿದೆ. ಮಂಡಲ್ ಚಳುವಳಿಯ ಹಿನ್ನೆಲೆಯಲ್ಲಿ ಅಧಿಕಾರಕ್ಕೆ ಬಂದಿದ್ದರೂ ಅವರು ಈ ಅಂಶವನ್ನು ಗಮನಿಸುವಂತಾಗಿದೆ. ಸಿಪಿಐ(ಎಂ) ಮಿಸಲಾತಿಯನ್ನು ಪೂರ್ಣವಾಗಿ ಬೆಂಬಲಿಸಿದರೂ ಮಿಸಲಾತಿಯೊಂದರಿಂದಲೇ ಎಲ್ಲವೂ ಸಾಧ್ಯತವಾಗುವುದಿಲ್ಲ, ಆರ್ಥಿಕ ಬಿಡುಗಡೆ ಎಲ್ಲಕ್ಕೂ ಮುಖ್ಯ ಎಂಬ ಅಂಶವನ್ನು ಒತ್ತಿ ಹೇಳಿದೆ. ಇದು ಈ ಹೋರಾಟಗಳಿಂದ ಎಲ್ಲರಿಗೂ ಸ್ಪಷ್ಟವಾಗುತ್ತಿದೆ. ಆದ್ದರಿಂದಲೇ "ಭೂ ಸುಧಾರಣೆಯ ವಿಷಯದಲ್ಲಿ ನಾವು ಪಶ್ಚಿಮಬಂಗಾಳದ ಮಾದರಿಯನ್ನು ಅನುಸರಿಸಬೇಕು" ಎಂದು ಲಲ್ಲೂ ಪ್ರಸಾದ್ ಯಾದವ್ ಹೇಳಿರುವುದು.

ಈ ಹೋರಾಟಕ್ಕೆ ಬೇರೆ ದಿಕ್ಕಿನಿಂದಲೂ ತೊಂದರೆಗಳಿವೆ. 1992 ರ ಜುಲೈ 16 ರಂದು ಸಿಪಿಐ(ಎಂ)ನ ಮುಂದಾಳುತನದಲ್ಲಿ ರಾಜ್ಯದ ರೈತ ಮತ್ತು ಕೃಷಿ ಕೂಲಿಕಾರರ ಸಮಾವೇಶ ನಡೆದು ಈ ಹೋರಾಟದ ನಿರ್ಧಾರ ರೂಪುಗೊಂಡಿತು. ಎಡಪಕ್ಷಗಳೆಲ್ಲ ಸೇರಿ ಈ ಹೋರಾಟವನ್ನು ಪ್ರಾಯೋಜಿಸಿದರೂ ಆಯಾ ಘಟಕಗಳು ಪ್ರಭಾವಶಾಲಿಯಾಗಿರುವಲ್ಲಿ ಅದೇ ಸಂಘಟನೆ ಕ್ರಿಯಾಶೀಲವಾಗಿರಬೇಕೆಂದು ಒಪ್ಪಲಾಗಿತ್ತು. ಆದ್ದರಿಂದಲೇ ಇದು ಪ್ರಾರಂಭದಿಂದಲೂ ವಿಶಿಷ್ಟ ಹೋರಾಟವೆನಿಸಿದ್ದು.


ಆದರೆ ಸಿಪಿಐ(ಎಂ-ಎಲ್) ನೇತೃತ್ವದ ಐ.ಪಿ.ಎಫ್. ವಿಚ್ಛಿದ್ರಕಾರಿ ಪ್ರವೃತ್ತಿಗಳನ್ನು ತೋರತೊಡಗಿದೆ. ಅದರ

ಪುಟ 8ನೋಡಿ

...ಗೆ ಒಲಂಪಿಕ್ಸ್ 2000 ಕೊಡದಿ...ರ ಮಾನವ ಹಕ್ಕುಗಳ ಉಲ್ಲಂಘಟನೆ ...ಮಾತ್ಯ ದೇಶಗಳ ಪಿತೂರಿಯಿಂದಲ್ಲ. ...ಗತ್ತಿನ ದಾರುಣ ಸಮಸ್ಯೆಗಳ, ಸಮಾಜ...ಳ ಬಗ್ಗೆ ಅಪಪ್ರಚಾರ ಪ್ರಸಾರ ಮಾಡುವ ...ದರ ಸಾಮ್ರಾಜ್ಯಶಾಹಿ-ಪರ ಧೋರಣೆ ...ದ ತಿಯಾನನ್ಮೆನ್ ಚೌಕದ ಅಲ್ಲೋಲ...ನ್ನು ತೀವ್ರ ಬಿಕ್ಕಟ್ಟಿಗೆ ತರುವುದರಲ್ಲಿ ಈ ...ಪಾತ್ರ ದೊಡ್ಡದು. ಇಂತಹ ಮಾಧ್ಯಮ ...ಬೆಳವಣಿಗೆಗಳ ಬಗ್ಗೆ ಎಷ್ಟು ವಸ್ತುನಿಷ್ಠ...ಎಂದು ಬೇರೆ ಹೇಳಬೇಕಾಗಿಲ್ಲ. ವಿಚ್ಛಿದ್ರ...ವಾದಿ ಶಕ್ತಿಗಳ ಕುಕೃತ್ಯಗಳು ಆಸ್ಫೋ...ತಿ ನಿರ್ಮಿಸುತ್ತಿರುವ ಹಿನ್ನೆಲೆಯಲ್ಲಿ ಈ ...ಮಾಧ್ಯಮಗಳು ಯಾವ ಪಾತ್ರ ವಹಿ...ಹೇಳುವುದು ಕಷ್ಟ. ಕಿಡಿಗೇಡಿತನದ...ವ ಸಂಭವವೇ. ಹೆಚ್ಚು ಜವಾಬ್ದಾರಿ...ವುದು ತಪ್ಪಾದೀತು.

...ಆಕ್ರಮಣ

...ಇತರ ಚಾನೆಲ್‌ಗಳಿಂದ ಸ್ಟಾರ್‌ಪ್ಲಸ್, ...ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಯಜಮಾನ ಸಂಸ್ಕೃತಿಯಾಗಿ ನಮ್ಮ ಜನತೆಯ ಮೇಲೆ ಹೊರಿಸುವ ಕೆಲಸ ಮಾಡುತ್ತಿದೆ. ಮ್ಯೂಸಿಕ್ ಟಿವಿಯಿಂತೂ ಯುವಕರನ್ನು ಅಶ್ಲೀಲತೆ, ಸ್ವೇಚ್ಛಾಚರದಿಂದ ಆಕರ್ಷಿಸಿ ಹಾದಿ ತಪ್ಪಿಸುವ ಚಾನೆಲ್. ನಮ್ಮ ಜನಪದ, ಶಾಸ್ತ್ರೀಯ ಲಘು ಸಂಗೀತದ ಅಭಿರುಚಿಯ ಗಂಧ ಗಾಳಿ ಇಲ್ಲದ ಒಂದು ಪೀಳಿಗೆಯೇ ಇದರಿದ ತಯಾರಾಗುವ ಸಾಧ್ಯತೆ ಇದೆ.



ಸ್ಟಾರ್‌ಪ್ಲಸ್ ಟಿ.ವಿ. ಧಾರವಾಹಿಗಳಿಂದ ಪಾಶ್ಚಿಮಾತ್ಯ ಬಾಳುವ ರೀತಿ ಮಟ್ಟ, ಸಾಮಾಜಿಕ-ಸಾಂಸ್ಕೃತಿಕ ಸನ್ನಿವೇಶವನ್ನು ಕಾಪಿ ಹೊಡೆಯುವ ಸೆಕೆಂಡ್-ಹ್ಯಾಂಡ್ ಸಂಸ್ಕೃತಿ ನಮ್ಮ ಮಧ್ಯಮ, ಉಚ್ಛ ಮಧ್ಯಮ-ವರ್ಗಗಳಲ್ಲಿ ಆಗಲೇ ಕಂಡಬರುತ್ತಿದೆ. ಹಿಂದಿ ಚಾನೆಲ್ ಝೀ ಟಿವಿಯಲ್ಲಂತೂ ವಾರದ ಭವಿಷ್ಯ ಭೂತ ಪ್ರೇತಗಳ ಕತೆ ಆಧಾರಿತ ಧಾರಾವಾಹಿ- ಈ ರೀತಿ ಸಾಮಾನ್ಯವಾಗಿ ಜವಾಬ್ದಾರಿಯುತ ಮಾಧ್ಯಮಗಳಲ್ಲಿ ಸಲ್ಲದ ಕಾರ್ಯಕ್ರಮಗಳಿವೆ.

ಇನ್ನು ಮಕ್ಕಳ ಮೇಲಿನ ಪರಿಣಾಮದ ಬಗ್ಗೆ ಗಂತೂ ಹೇಳಿ ತೀರದು. 24 ಗಂಟೆ ಪ್ರಸಾರ ಇರುವುದೇ ನೇರವಾಗಿ ವಿದ್ಯಾರ್ಥಿಗಳ ಓದಿಗೆ ಅಡ್ಡಿ ಆಗುವ ದೊಡ್ಡ ಅಂಶ. ಇದರ ದುಷ್ಪರಿಣಾಮಗಳು ಈಗಾಗಲೇ ಪಾಶ್ಚಿಮಾತ್ಯ ದೇಶಗಳಲ್ಲಿ. ಅಮೇರಿಕದಲ್ಲಿ ಆತಂಕರಿಯಾಗಿ ಬೆಳೆದಿದೆ ಅಲ್ಲದೆ ಟಿ.ವಿ ಧಾರವಾಹಿಗಳಲ್ಲಿ, ಕಾರ್ಯಕ್ರಮಗಳಲ್ಲಿ ಬರುವ ಅಶ್ಲೀಲ, ವಯಸ್ಕರು ಮಾತ್ರ ನೋಡಬಹುದಾದ ಮಕ್ಕಳ ಮೇಲೆ ದುಷ್ಪರಿಣಾಮ ಬೀರವ ದೃಶ್ಯಗಳು, ವಿಪರೀತ ಹಿಂಸಾಚಾರ ಒಂದು ಪೀಳಿಗೆಯನ್ನು ಆಗಲೇ ಪೂರ್ತಿಯಾಗಿ ದಾರಿ ತಪ್ಪಿಸುತ್ತಿವೆ ಎಂದು ಹಲವು ಅಧ್ಯಯನಗಳಿಂದ ತಿಳಿದು ಬಂದಿದೆ. ಅಮೇರಿಕನ್ ಮಕ್ಕಳು 16 ವರ್ಷವಾಗುವಷ್ಟು ಹೊತ್ತಿಗೆ ಸರಾಸರಿ 18 ಸಾವಿರ ಗಂಟೆ ಟಿವಿ ನೋಡಿರುತ್ತಾರಂತೆ. ಆದರೆ 11 ಸಾವಿರ ಗಂಟೆಗಳಷ್ಟೇ ಓದಿನಲ್ಲಿ ಕಳೆದಿರುತ್ತದೆ. ಈ ಅವಧಿಯಲ್ಲಿ ಅವರು 33 ಸಾವಿರ ಕೊಲೆ ಹಾಗೂ 2 ಲಕ್ಷ ಮಾನಭಂಗ ಮುಂತಾದ ಹಿಂಸಾಚಾರ ನೋಡಿರುತ್ತಾರಂತೆ. ಸರಾಸರಿ ಗಂಟೆಗೆ 32 ಹಿಂಸಾಚಾರ ಸನ್ನಿವೇಶಗಳನ್ನು ಮಕ್ಕಳು ನೋಡುತ್ತಾರಂತೆ.

ಮಕ್ಕಳು ಮಾತ್ರವಲ್ಲ ವಯಸ್ಕರ ಮೇಲೂ ಇದರ ಪ್ರಭಾವವಿದ್ದೇ ಇರುತ್ತದೆ. ಸಮಾಜದಲ್ಲಿ ಹಿಂಸಾಚಾರ ಸಹಿಸುವಲ್ಲಿ ಅಥವಾ ನಡೆಸುವಲ್ಲಿ ಇದು

ಪುಟ 7ನೋಡಿ

ಐ.ಎಂ.ಎಫ್ ಸಾಲಕ್ಕೆ ಅಲ್ಪ ವಿರಾಮ



ಅವಕಾಶವಾದಿತನಕ್ಕೆ ಸಮಯ ಸಾಧರತನಕ್ಕೆ ಇದಕ್ಕೂ ಹೆಚ್ಚಿನ ನಿದರ್ಶನ ಬೇಕಿಲ್ಲ. ಉದಾರೀಕರಣದ ಕ್ರಮಗಳನ್ನೆಲ್ಲ ಜಾರಿಗೆ ತರುವ ಕೇಂದ್ರ ಸರ್ಕಾರ ಈಗ ಐ.ಎಂ.ಎಫ್.ನ ಮುಂದಿನ ಕಂತಿನ ಸಾಲದ ಮಾತುಕತೆಯನ್ನು ಮುಂದಕ್ಕೆ ಹಾಕುತ್ತಿದೆ. ಇದಕ್ಕೆ ಕಾರಣ? ಉತ್ತರದ ನಾಲ್ಕು ರಾಜ್ಯಗಳಲ್ಲಿನ ಚುನಾವಣೆಗಳು. ಸದ್ಯಕ್ಕಂತೂ ವಿದೇಶೀ ವಿನಿಮಯದ ಬಿಕ್ಕಟ್ಟಿಲ್ಲ. ಜೊತೆಗೆ ಕಾಂಗ್ರೆಸ್‌ನೊಳಗೇ ಉದಾರೀಕರಣಕ್ಕೆ ವಿರೋಧ ಬೆಳೆಯುತ್ತಿದೆ. ಎಡ ಮತ್ತು ರಾಷ್ಟ್ರೀಯ ರಂಗಗಳು ಉದಾರೀಕರಣದ ವಿರುದ್ಧ ಜನರನ್ನು ಸಂಘಟಿಸುವಲ್ಲಿ ಸಫಲವಾಗಿವೆ. ಆದ್ದರಿಂದ ಈಗ ಕೇಂದ್ರ ಸರ್ಕಾರಕ್ಕೆ ಭಯ. ಆದರೆ ಈ ಚುನಾವಣೆಗಳ ನಂತರ? ಮತ್ತೆ ಉದಾರೀಕರಣದ ಬ್ಯಾಂಕ್ ಫಂಡ್ ಧಣಿಗಳ ಆರ್ಡರ್‌ಗಳನ್ನು ಶಿರಸಾವಹಿಸಿ ಜಾರಿಗೆ ತರಲಾಗುವುದು (?)

ಉದಾರೀಕರಣದ ಹೊಸ ಕಂತುಗಳು

ಈ ಕಂತುಗಳು ಮನಮೋಹನ ಸಿಂಗರ ಬತ್ತಳಿಕೆಯಲ್ಲಿವೆ. ಅವನ್ನು ಈ ದೇಶದ ಬಡ ಜನತೆಯ ಮೇಲೆ ಪ್ರಯೋಗಿಸಲು ಅವರು ಕಾತರರಾಗಿದ್ದಾರೆ. ಹಣಕಾಸು ವಲಯ ಮತ್ತು ತೆರಿಗೆ ಪದ್ಧತಿ ಇವು ಅವರ ಮೊದಲ ಪ್ರಾಶಸ್ತ್ಯದ ಬಾಣಗಳು. ಹಣಕಾಸು ವಲಯದಲ್ಲಿ ವಿದೇಶೀ ಬ್ಯಾಂಕುಗಳಿಗೆ ಹೆಚ್ಚಿನ ಅವಕಾಶ ಮಾಡಿಕೊಡುವುದು. ತೆರಿಗೆ ಪದ್ಧತಿಯನ್ನು ಆಮೂಲಾಗ್ರವಾಗಿ ಬದಲಿಸಿ ದೊಡ್ಡ ದೊಡ್ಡ ದೊಡ್ಡ ಕಂಪನಿಗಳ ಮೇಲಿನ ತೆರಿಗೆಯನ್ನು ಕಡಿಮೆ ಮಾಡುವುದು ಇಲ್ಲವೇ ತೆಗೆದು ಹಾಕುವುದು ಇವೆಲ್ಲ ಅವುಗಳಲ್ಲಿ ಸೇರಿವೆ. ಇವುಗಳ ಜೊತೆಗೆ ಕಾರ್ಮಿಕ ಕಾನೂನನ್ನು ತಿದ್ದುಪಡಿ ಮಾಡುವುದೂ ಸೇರಿದೆ. ಕಾರ್ಮಿಕ ಕಾನೂನುಗಳ ತಿದ್ದುಪಡಿಯೆಂದರೆ ತಮ್ಮ ಮನಸ್ಸಿಗೆ ಬಂದಾಗ ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡಲು ಮ್ಯಾನೇಜ್‌ಮೆಂಟ್‌ಗಳಿಗೆ ಅಧಿಕಾರ ನೀಡುವುದು ಈ ಆರ್ಥಿಕ ಮಂತ್ರಿಗಳ ಬತ್ತದ ಬತ್ತಳಿಕೆಯಲ್ಲಿ ಇನ್ನೂ ಎಂತೆಂತಹ ವಿಷ ಅಸ್ತ್ರಗಳು ಅಡಗಿವೆಯೊ ಯಾರಿಗೆ ಗೊತ್ತು?

ಆರ್ಥಿಕ ಸುಧಾರಣೆಗಳು ಇನ್ನೂ ತ್ವರಿತಗೊಳ್ಳಬೇಕು : ಐ.ಎಂ.ಎಫ್. ಹುಕುಂ

ಭಾರತ ಉದಾರೀಕರಣವನ್ನು ಇನ್ನೂ ಹೆಚ್ಚಿನ ವೇಗದಲ್ಲಿ ಮಾಡಬೇಕು ಎಂದು ಐ.ಎಂ.ಎಫ್. ಧಣಿ ಭಾರತ ಸರ್ಕಾರಕ್ಕೆ ಹೇಳಿದೆ. ಅವರ ಪ್ರಕಾರ ತೆರಿಗೆ ಪದ್ಧತಿ, ಬ್ಯಾಂಕಿಂಗ್ ವ್ಯವಸ್ಥೆ ಹಣಕಾಸು ಕ್ರೋಢೀಕರಣ ಇವುಗಳಲ್ಲೆಲ್ಲ ಸುಧಾರಣೆ ಬೇಗ ಆಗಬೇಕಂತೆ. ರೂಪಾಯಿಯ ಪರಿವರ್ತನೆ ಪೂರ್ಣವಾಗಿ ಏಕೀಕರಣಗೊಳ್ಳಬೇಕಂತೆ ತನ್ನ ವಾರ್ಷಿಕ ವರದಿಯಲ್ಲಿ ಈ ಎಲ್ಲ ಅಂಶಗಳನ್ನು ಹೇಳಿರುವ ಈ ಧಣಿ ಭಾರತದ ಅರ್ಥಮಂತ್ರಿಗಳ ಬಾಯೊಳಗೆ ಇವೇ ಮಾತುಕಗಳನ್ನು ತುರುಕಿವೆ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದಲ್ಲವೆ?

ಮತ್ತೆರಡು ರಾಷ್ಟ್ರೀಕೃತ ಬ್ಯಾಂಕುಗಳು ನಷ್ಟದಲ್ಲಿ

ನಷ್ಟ ತೋರುತ್ತಿರುವ ಬ್ಯಾಂಕುಗಳ ಸಾಲಿಗೆ ಇನ್ನೆರಡು ರಾಷ್ಟ್ರೀಕೃತ ಬ್ಯಾಂಕುಗಳು ಸೇರಿವೆ. ಕರ್ನಾಟಕ ಮೂಲದ ವಿಜಯಾ ಬ್ಯಾಂಕ್. ವಿಜಯಾ ಬ್ಯಾಂಕ್ ಮತ್ತು ದೇನಾ ಬ್ಯಾಂಕ್ 98 ಕೋಟಿ ರೂಪಾಯಿಗಳ ಹಾನಿ ತೋರಿದರೆ ದೇನಾ ಬ್ಯಾಂಕ್ 90 ಕೋಟಿ ರೂಪಾಯಿಗಳ ಹಾನಿ ತೋರಿದೆ. ಹಿಂದೆ ಆಡಳಿತ ವರ್ಗದ ಅನುಕೂಲಕ್ಕೆ ಸಾಲ ನೀಡಿ ಇಂದು ಅವು ವಸೂಲಾಗದೆ ಹಾನಿಯಾಗಿ ಪರಿವರ್ತಿತವಾಗಿದೆ. ಇಲ್ಲಿಯವರೆಗೆ ಬ್ಯಾಂಕುಗಳಲ್ಲಿ ಇಂತಹ ಸಾಲಗಳನ್ನು ಮನ್ನಾ ಮಾಡುವ ಪದ್ಧತಿ ಇರಲಿಲ್ಲ. ಅವುಗಳನ್ನು ಹಾಗೇ ಆಸ್ತಿಯೆಂದು ತೋರಿಸಿಕೊಂಡು ಬಂದಿದ್ದವು. ಈ ಬ್ಯಾಂಕುಗಳು ಈಗ ಒಮ್ಮೆಲೆ ನರಸಿಂಹಮ್ ಸಮಿತಿ ಶಿಫಾರಸ್ಸುಗಳಂತೆ ಈ ಸಾಲಗಳನ್ನು ಮನ್ನಾ ಮಾಡಲು ಅವಕಾಶ ಮಾಡುವಂತೆ ಭಾರತೀಯ ರಿಸರ್ವ್ ಬ್ಯಾಂಕ್ ಆದೇಶ ನೀಡಿರುವುದರಿದ ಈ ಪರಿಸ್ಥಿತಿ ಉಂಟಾಗಿದೆ. ಇದಕ್ಕಂತೂ ಸರ್ಕಾರವೇ ಹೊಣೆಯಲ್ಲವೇ?

ಅಂದರೆ ಇದರ ಲಾಭವನ್ನಂತೂ ಖಂಡಿತವಾಗಿ ಆಳುವ ವರ್ಗದ ಕೆಲವರು ಪಡೆದಿರುತ್ತಾರೆ ಅಲ್ಲವೇ?

ಶೇರು ಹಗರಣದಲ್ಲಿ ರೊಮೇಶ್ ಭಂಡಾರಿ

ತ್ರಿಪುರಾದ ರಾಜ್ಯಪಾಲರಾಗಿರುವ ರೊಮೇಶ್ ಭಂಡಾರಿ ಶೇರು ಹಗರಣದಲ್ಲಿ ಪಾತ್ರ ಹೊಂದಿದ್ದಾರೆಂದು ಈಗ ಜಂಟಿ ಸಂಸದೀಯ ಸಮಿತಿಯ ಮುಂದೆ ವಿಚಾರಣೆಗೆ ಬಂದಿದೆ. ಸ್ವಿಟ್ಜರ್‌ಲ್ಯಾಂಡಿನ ಫ್ರಾಂಕೊ ಸಾರ್ಟೋರಿ ಎಂಬಾತ ಸಲ್ಲಿಸಿರುವ ಅಫಿಡವಿಟ್‌ನಲ್ಲಿ ತಾನು ಹರ್ಷದ್ ಮೆಹ್ತನಿಂದ ಬಿಜೆಪಿಯ ಎಲ್.ಕೆ. ಅಡ್ವಾಣಿ, ಮುರಳಿ ಮನೋಹರ್ ಜೋಷಿ, ಪ್ರಮೋದ್ ಮಹಾಜನ್ ಇವರಿಗೆಲ್ಲ ಹಣ ತಲುಪಿಸಿದ್ದೇನೆ ಎಂದಿದ್ದಾನೆ. ಬಿಜೆಪಿಯವರು ಕಾಂಗ್ರೆಸ್ ನರಸಿಂಹರಾಯರ ಮೇಲೆ ಆಪಾದನೆ ಮಾಡಿದ್ದರು. ಈಗ ಬಿಜೆಪಿಯ ನಾಯಕರ ಮೇಲೆ ಆಪಾದನೆ ಬಂದಿದೆ. ಅದರಲ್ಲೂ ವಿದೇಶ ಇಲಾಖೆಯ ಮುಖ್ಯ ಅಧಿಕಾರಿಯಾಗಿದ್ದವರೊಬ್ಬರ ಪಾತ್ರದ ಆರೋಪ. ಕಾಂಗ್ರೆ ಬಿಜೆಪಿಗಳೆರಡೂ ಈ ಹಗರಣದಲ್ಲಿ ಶಾಮೀಲಾಗಿರಬಹುದೆ?

ಒಡೆದು ಆಳುವ ಸರ್ಕಾರದ ಪ್ರಯತ್ನ

ತನ್ನ ಉದಾರೀಕರಣ ನೀತಿಗೆ ಹೆಚ್ಚಿನ ಪ್ರತಿರೋಧವನ್ನು ಸರ್ಕಾರ ಹಣಕಾಸು ವಲಯದ ಉದ್ಯೋಗಿಗಳಿಂದ ಎದುರಿಸುತ್ತಿದೆ. ಎಲ್ಲ ರಾಷ್ಟ್ರೀಕೃತ ಬ್ಯಾಂಕುಗಳನ್ನು ಆಳುವ ವರ್ಗದ ಹಿತಕ್ಕೆ ಬಳಸಿಕೊಂಡ ಸರ್ಕಾರ ಈಗ ಅವುಗಳ ಮೇಲೆ ಗೂಬೆ ಕೂರಿಸಿ ತನ್ನ ಉದಾರೀಕರಣದ ಕ್ರಮಗಳನ್ನು ಸಮರ್ಥಿಸಿಕೊಳ್ಳುವ ಪ್ರಯತ್ನ, ಅಪಪ್ರಚಾರ ಎರಡನ್ನು ಮಾಡುತ್ತಿದೆ.

ವೇತನ ಪರಿಷ್ಕರಣ, ನಿವೃತ್ತಿ ವೇತನದ ಬೇಡಿಕೆಗಳು ಮತ್ತು ಖಾಸಗೀಕರಣದ ವಿರುದ್ಧ ಈ ವಲಯದ ಉದ್ಯೋಗಿಗಳು ಹೋರಾಡುತ್ತಿದ್ದಾರೆ. ಸರ್ಕಾರ ಈಗ ಬ್ಯಾಂಕುಗಳ ಆಡಳಿತ ಮಂಡಳಿಗಳಿಗೆ ಅವರೊಂದಿಗೆ ಒಟ್ಟಾಗಿ ಮಾತುಕತೆ ಬೇಡ ಪ್ರತ್ಯೇಕವಾಗಿ ಮಾತನಾಡಿ, ಆಯಾ ಬ್ಯಾಂಕುಗಳ ಲಾಭ, ಹಾನಿ, ಉತ್ಪಾದಕತೆ ಇತ್ಯಾದಿಗಳನ್ನೆಲ್ಲ ಗಮನದಲ್ಲಿರಿಸಿಕೊಂಡು ಅವರ ಬೇಡಿಕೆಗಳನ್ನು ಕೈಗೆತ್ತಿಕೊಳ್ಳಬಹುದು ಎಂದಿದೆಯಂತೆ. ಅಂದರೆ ಹಿಂದೆ ಸರ್ಕಾರ ಮಾಡಿದ ಎಲ್ಲ ಅವ್ಯವಹಾರಗಳಿಗೆ ಈಗ ಉದ್ಯೋಗಿಗಳು ಜವಾಬ್ದಾರಿರಾಗಬೇಕು. ಇವೆಲ್ಲಕ್ಕಿಂತ ಮುಖ್ಯವಾಗಿ ಅದಕ್ಕೆ ಬ್ಯಾಂಕ್-ಫಂಡ್ ಧಣಿಗಳನ್ನು ಮೆಚ್ಚಿಸಲು ಹಣಕಾಸು ವಲಯದ ಉದಾರೀಕರಣ ಮಾಡಬೇಕು.

ಈ ಸರ್ಕಾರ ಎಂತಹ ಹೀನ ಕೆಲಸಕ್ಕೂ ಹೇಸದು ಎಂಬುದಕ್ಕೆ ಇದು ನಿದರ್ಶನವಲ್ಲವೆ?

ನಿರ್ಗಮನ ನೀತಿ ತರುವ ದಾರುಣ ಬದುಕಿನ ಸ್ಯಾಂಪಲ್ಲು

ಪ್ರಸಿದ್ಧ "ಬಂಗಾಲ ಪಾಟರೀಸ್" ಕಾರ್ಮಿಕರು ಬೀದಿಪಾಲು



'ಬಂಗಾಲ ಪಾಟರಿ'ಯ ಮೂರು ಸಾವಿರಕ್ಕೂ ಹೆಚ್ಚು ಕಾರ್ಮಿಕರು ಇಂದು ಬೀದಿಪಾಲಾಗಿದ್ದಾರೆ. ಕೇಂದ್ರ ಸರ್ಕಾರ ಕಳೆದ ಹದಿನೆಂಟು ವರ್ಷಗಳ ಕಾಲ ನಿರ್ವಹಿಸಿದ ಈ ಉದ್ದಿಮೆ ನಮ್ಮ ದೇಶದ ಸಾಂಪ್ರದಾಯಿಕ ಕರಕುಶಲ ಕಲೆಯೊದರ ಪ್ರತೀಕವೂ ಆಗಿತ್ತು. ಸಿಐಟಿಯು, ಇಂಟಕ್, ಮತ್ತು ಹೆಚ್.ಎಂ.ಎಸ್. ಎಲ್ಲ ಸೇರಿ ಮತ್ತು ಎಡರಂಗದ ಸಂಸದೀಯ ಸೇರಿ ಈ ಉದ್ದಿಮೆ ಉಳಿಸಲು ಶತ ಪ್ರಯತ್ನ ಮಾಡಿದರು. ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಜ್ಯೋತಿಬಸುರವರೇ ಸ್ವತಃ ಈ ಸಮಸ್ಯೆ ಪರಿಹರಿಸಲು ಪ್ರಯತ್ನಿಸಿದರು. ಎಲ್ಲ ಶ್ರಮ ಕೇಂದ್ರದ ಹೊಸ ಆರ್ಥಿಕ ನೀತಿಯಡಿಗೆ ಬಿದ್ದುಹೋಯಿತು. ರೂ. 18.77 ಕೋಟಿಗಳ ಒಂದು ಒಪ್ಪಂದಕ್ಕೆ ಈ ಟ್ರೇಡ್ ಯೂನಿಯನ್‌ಗಳು, ಪಾಟರೀಸ್‌ನ ವ್ಯವಸ್ಥಾಪಕರು ಸಹಿ ಹಾಕಬೇಕಾಯಿತು. ಭಾರತೀಯ ಉದ್ದಿಮೆ ಪುನರ್ನಿರ್ಮಾಣ ಬ್ಯಾಂಕ್‌ನೊಂದಿಗೆ ಈ ಒಪ್ಪಂದವಾಯಿತು.

1919 ರಲ್ಲಿ ಈ ಸಂಸ್ಥೆ ಪ್ರಾರಂಭವಾಯಿತು. ಖ್ಯಾತ ವಿಜ್ಞಾನಿ ಪ್ರಫುಲ್ಲ ಚಂದ್ರ ರಾಯ್ ಇದರ ನಿರ್ದೇಶಕರಾಗಿದ್ದರು ಎಂದೂ ಈ ಘಟಕದಲ್ಲಿ ಗುಣಮಟ್ಟ ಮತ್ತು ಮಾರುಕಟ್ಟೆಯ ಕೊರತೆ ಇರಲಿಲ್ಲ. ಅದ್ಭುತ ಪಿಂಗಾಣಿ ವಸ್ತುಗಳನ್ನು ಅದು ಉತ್ಪಾದಿಸುತ್ತಿತ್ತು.

ಕೆಲವೇ ವರ್ಷಗಳ ಹಿಂದೆ ಸಲಹಾ ಸಂಸ್ಥೆಯೊಂದು ಕೇವಲ 13 ಕೋಟಿ ರೂಪಾಯಿಗಳ ಹೆಚ್ಚಿನ ಹೂಡಿಕೆಯಿಂದ ಈ ಉದ್ದಿಮೆಯನ್ನು ಪುನರ್ಜೀವನಗೊಳಿಸುವುದು ಸಾಧ್ಯವೆಂದಿತ್ತು. ಆದರೆ ಕೇಂದ್ರ ಸರ್ಕಾರ ಮತ್ತು ಭಾರತೀಯ ಉದ್ದಿಮೆ ಪುನರುಜ್ಜೀವನ ಬ್ಯಾಂಕ್ (ಐ.ಆರ್.ಬಿ.ಐ) ಈ ಹಣವನ್ನು ನೀಡಲಿಲ್ಲ. ಅದರ ಬದಲು ಇಷ್ಟು ವರ್ಷಗಳ ಕಾಲ ಸರ್ಕಾರ ಹಲವುಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ.

ಈ ಒಪ್ಪಂದ ಪ್ರಕಾರ ಈ ನಿವೃತ್ತಿಗೆ ಪರಿಹಾರವಾಗಿ ಪ್ರತಿ ಒಂದು ವರ್ಷದ ಸೇವೆಗೆ ಇಪ್ಪತ್ತೊಂದು ದಿನಗಳ ವೇತನವನ್ನು ನೀಡಲಾಗುತ್ತದೆ. ಕಾರ್ಮಿಕರು ಬೇರಾವುದೇ ಹಕ್ಕುಗಳನ್ನು ಪ್ರತಿಪಾದಿಸುವಂತಿಲ್ಲ. ಬೇರೆ ಸೂಚನೆಗಳನ್ನು ನೀಡಲು ಅರ್ಹರು ಅವರು.

ರಾಯಲ್ ಡಾಲ್ಟನ್ ಎಂಬ ಬ್ರಿಟಿಷ್ ಸಂಸ್ಥೆಯೊಂದು ಈ ಘಟಕವನ್ನು ನಿರ್ವಹಿಸಿಕೊಳ್ಳಲಿದೆ. ಈಗ ಬಂಗಾಲ ಪಾಟರಿಯ ಉದ್ಯೋಗಿಗಳು ಆಶಾಭಾವನೆಯಿಂದ ಈ ಬ್ರಿಟಿಷ್ ಸಂಸ್ಥೆಯ ಕಡೆಗೆ ನೋಡುತ್ತಿದ್ದಾರೆ.

ಇದು ನಿರ್ಗಮನ ನೀತಿ ತರುವ ಗೋಳಿನ ಒಂದು ಸ್ಯಾಂಪಲ್ಲು ಮಾತ್ರ.



ಪ.ಬಂಗಾಳ: ಹತಾಶ ಬಿಜೆಪಿ ಗೂಂಡಾ ಹಲ್ಲೆ

ರಾಜಕೀಯದಲ್ಲಿ ತುಂಬಿರುವ "ಅಧರ್ಮ"ವನ್ನು ತೊಳೆದುಹಾಕಲು ರಾಜಕೀಯ ಮತ್ತು ಧರ್ಮದ ಸಂಬಂಧ ಅಗತ್ಯ ಎನ್ನುವ ಬಿಜೆಪಿಯ 'ಧರ್ಮ'ದ ಅರ್ಥ 'ತನಗೆ ಅಧಿಕಾರ' ಎಂದೇಯೆಂಬುದು ಹಲವಡೆ ಹಲವರಿಗೆ ಸ್ಪಷ್ಟವಾಗಿದೆ. ಕಲ್ಕತ್ತೆಯ ಚೌರಿಂಗಿಯಲ್ಲಿ ಠೇವಣಿ ಕಳಕೊಂಡ ಬಿಜೆಪಿ ಅಭ್ಯರ್ಥಿಯ ಬೆಂಬಲಿಗರ ವರ್ತನೆ ಅದಕ್ಕೆ ಮತ್ತೊಂದು ಉದಾಹರಣೆಯಷ್ಟೆ. ಸಿಪಿಐ(ಎಂ)ನ ಚುನಾವಣಾ ವಿಜಯದ ರ್‍ಯಾಲಿಯ ಮೇಲೆ ಸೆಪ್ಟೆಂಬರ್ 19 ರಂದು ಬಿಜೆಪಿ ಬಾವುಟದಡಿ ಎರಗಿದ ಗೂಂಡಾಗಳ ಹಲ್ಲೆಯಲ್ಲಿ "ಸಿಪಿಐ(ಎಂ) ಬೆಂಬಲಿಗರಿಗೆ ಗಾಯಗಳಾಗಿವೆ. ಹೊಸದಾಗಿ ಚುನಾಯಿತ ಎ.ಎಲ್.ಎ. ಅನಿಲ್ ಚಟರ್ಜಿಯವರ ಮೇಲೂ ದೈಹಿಕ ಹಲ್ಲೆ ನಡೆಸಲಾಯಿತು. ಬಾಂಬುಗಳು, ಕಬ್ಬಿಣದ ಸಲಾಕೆಗಳು, ಇಟ್ಟಿಗೆ, ಕಲ್ಲುಗಳಿಂದ ಹಲ್ಲೆ ಮಾಡಲಾಯಿತು.

ಅನಿಲ್ ಚಟರ್ಜಿಯವರನ್ನು ಮೆರವಣಿಗೆಯಲ್ಲಿ ಒಯ್ಯುತ್ತಿದ್ದ ವ್ಯಾನಿನ ಮೇಲೆ ಹತ್ತಿ ಈ ಗೂಂಡಾಗಳು ಹಲ್ಲೆ ನಡೆಸಿದರು. ಸಿಪಿಐ(ಎಂ) ಕಾರ್ಯಕರ್ತರು ತಕ್ಷಣ ಅನಿಲ್ ಚಟರ್ಜಿಯವರ ರಕ್ಷಣೆಗೆ ಧಾವಿಸಿದರು. ಈ ಬಿಜೆಪಿ ಗೂಂಡಾ ಹಲ್ಲೆಯಲ್ಲಿ ಗಾಯಗೊಂಡವರಲ್ಲಿ ಬಹುಮಂದಿ ಮಹಿಳೆಯರು. ಅಮಾಯಕ ದಾರಿಹೋಕರೂ ಈ ಬಿಜೆಪಿ ಗೂಂಡಾಗಳ ಸಮಾಜಘಾತುಕ ಕೃತ್ಯದ ಪರಿಣಾಮ ಅನುಭವಿಸಬೇಕಾಯಿತು. ಸೀಮೆ ಎಣ್ಣೆ ತರಲು ಹೊರಟಿದ್ದ ಮಹಮ್ಮದ್ ವಾಸ್ರಾವ್ ಎಂಬಾತನಿಗೆ ಈ ಗೂಂಡಾಗಳೆಸೆದ ಬಾಂಬು ತಾಗಿ ಮೆದುಳಿನ ಶಸ್ತ್ರ ಚಿಕಿತ್ಸೆ ಮಾಡಬೇಕಾಯಿತು.

ಈ ಹಲ್ಲೆ ನಡೆಸಿದವರು ಕೋಮು ದಂಗೆಗಳಲ್ಲಿ ಆಪಾದನೆ ಹೊತ್ತು ಶಿಕ್ಷೆ ಅನುಭವಿಸಿರುವ ಕ್ರಿಮಿನಲ್‌ಗಳು. ಇತ್ತೀಚಿನವರೆಗೆ ಮಮತಾ ಬ್ಯಾನರ್ಜಿ ನೇತೃತ್ವದ ಕಾಂಗ್ರೆಸ್ ಗುಂಪಿನ ಅನುಯಾಯಿಗಳಾಗಿದ್ದ ಇವರು ಈಗ ಬಿಜೆಪಿ ಸೇರಿದ್ದಾರಂತೆ. ಚೌರಿಂಗಿಯಲ್ಲಿ ಸೋತ ಬಿಜೆಪಿ ಅಭ್ಯರ್ಥಿ ಸವ್ಯಸಾಚಿ ಬಾಗ್ಚಿ ಈ ಪ್ರದೇಶದವರು.

ಎಡರಂಗ ಅಧ್ಯಕ್ಷ ಶೈಲೇನ್ ದಾಸ್ ಗುಪ್ತಾ ಹಾಗೂ ಸಿಪಿಐ(ಎಂ) ಕಲ್ಕತ್ತಾ ಜಿಲ್ಲಾ ಸಮಿತಿ ಕಾರ್ಯದರ್ಶಿ ಲಕ್ಷ್ಮಿಸೇನ್ ಈ ಹಲ್ಲೆಯನ್ನು ಬಲವಾಗಿ ಖಂಡಿಸಿದ್ದಾರೆ. ರಾಜ್ಯಾದ್ಯಂತ ಈ ಹಲ್ಲೆಗೆ ಭಾರೀ ಪ್ರತಿಭಟನೆ ವ್ಯಕ್ತಪಟ್ಟಿದೆ. ಬುದ್ಧಿಜೀವಿಗಳು, ಕಲಾವಿದರೂ ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ.

ಯು.ಡಿ.ಎಫ್‌ನಲ್ಲಿ ಮುಗಿಯದ ಗೊಂದಲ

ಒಟ್ಟಪಾಳಂ ಲೋಕಸಭಾ ಕ್ಷೇತ್ರದಲ್ಲಿ ನಡೆದ ಉಪಚುನಾವಣೆಯ ಫಲಿತಾಂಶ ಕಾಂಗ್ರೆಸ್ (ಐ)ಯನ್ನು ಕಂಗೆಡಿಸಿದೆ. ಅದರ ಜತೆ ಜತೆಯಲ್ಲಿ ಆಳುವ ಸಂಯುಕ್ತ ಪ್ರಜಾಸತ್ತಾತ್ಮಕ ರಂಗ (ಯು.ಡಿ.ಎಫ್.)ದಲ್ಲಿನ ಗೊಂದಲ ಹಾಗೂ ಕಹಿ ಭಾವನೆ ಇನ್ನಷ್ಟು ಹೆಚ್ಚಿದೆ. ಮುಖ್ಯವಾಗಿ ಕಾಂಗ್ರೆ ಮತ್ತು ಮುಸ್ಲಿಂ ಲೀಗ್ ನಡುವಣ ಸಂಬಂಧದ ಮೇಲೆ ಪರಿಣಾಮ ಬೀರಿರುವುದು ಈ ಫಲಿತಾಂಶದಿಂದ ಖಚಿತಪಟ್ಟಿದೆ.

ಕಾಂಗ್ರೆಸ್(ಐ) ಯೊಂದಿಗಿನ ಸಂಬಂಧವನ್ನು ಒಟ್ಟಪಾಳಂ ಫಲಿತಾಂಶದ ಹಿನ್ನೆಲೆಯಲ್ಲಿ ಪುನರ್ ಪರಿಶೀಲಿಸಬೇಕೆಂಬ ಕರೆಯನ್ನು ಮುಸ್ಲಿಂ ಲೀಗ್ ಅಧ್ಯಕ್ಷ ಸುಲೇಮಾನ್ ಸೇಠ್ ಪುನರುಚ್ಚರಿಸಿದ್ದಾರೆ.

ಈ ನಡುವೆ, ಲೀಗ್ ಮತ್ತು ಕಾಂಗ್ರೆಗಳ ಪಾಲಕ್ಕಾಡ್ ಜಿಲ್ಲಾ ಸಮಿತಿಗಳ ನಡುವಿನ ಆರೋಪ ಪ್ರತ್ಯಾರೋಪಗಳಿದ ಉಭಯ ಘಟಕಗಳ ಮಧ್ಯೆ ಬಿಗುವು ಹೆಚ್ಚುತ್ತಿದೆ. ಮುಸ್ಲಿಂ ಮತದಾರರನ್ನು ಮುಖ್ಯಮಂತ್ರಿ ಕೆ. ಕರುಣಾಕರನ್ ದೂಷಿಸಿರುವುದರಿಂದ ಲೀಗ್ ಸಚಿವರು ಘಾಸಿಗೊಂಡಿದ್ದಾರೆ. ಬಾಬರಿ ಮಸೀದಿಯ ನಾಶದಿಂದಾಗಿ ಮುಸ್ಲಿಂ ಮತದಾರರು ಯು.ಡಿ.ಎಫ್. ವಿರುದ್ಧ ತಿರುಗಿಬಿದ್ದಿದ್ದಾರೆ ಎಂದು ಕರುಣಾಕರನ್ ಹೇಳಿರುವುದು ಪಕ್ಷದ ಹೈಕಮಾಂಡ್ ವಿರುದ್ಧ ಪರೋಕ್ಷವಾಗಿ ಮಾಡಿದ ದಾಳಿಯಾಗಿದೆ. ಈ ಬಗ್ಗೆ ಪ್ರಧಾನಿ ನರಸಿಂಹರಾವ್ ಗೃಹ ಸಚಿವ ಎಸ್.ಬಿ. ಚವಾಣ್ ಅತೃಪ್ತರಾಗಿದ್ದಾರೆ ಎಂದು ಹೇಳಿದ್ದಾರೆ.

ಕರುಣಾಕರನ್ ವಿರೋಧಿಯಾದ ಮಾಜಿ ಕೇಂದ್ರ ಸಚಿವ ಎಂ. ರಾಮಚಂದ್ರನ್ ಪ್ರಧಾನಿಗೆ ಒಂದು ಪತ್ರವನ್ನು ಬರೆಯುವ ಮೂಲಕ ನೇರವಾಗಿ ಮಧ್ಯಪ್ರವೇಶ ಮಾಡಿದ್ದಾರೆ. ಒಟ್ಟಪಾಲಂನಲ್ಲಿ ಪಕ್ಷ ಸೋತುಹೋಗಲು ರಾಜ್ಯ ಸರಕಾರಗಳ ನೀತಿಗಳು ಹಾಗೂ ಕಾರ್ಯವೈಖರಿ ಕಾರಣ ಎಂದು ರಾಮಚಂದ್ರನ್ ಹೇಳಿದ್ದಾರೆ.

ಸರಕಾರ ಜನರ ಬೆಂಬಲವನ್ನು ಗಳಿಸುವ ಸ್ಥಿತಿಯಲ್ಲಿಲ್ಲ. ನಾಯಕರ ವಿರುದ್ಧ ಭ್ರಷ್ಟಚಾರದ ಅನೇಕ ಆರೋಪಗಳಿರುವುದರಿಂದ ಕಾರ್ಯಕರ್ತರ ನೈತಿಕ ಸ್ಥೈರ್ಯ ಕುಗ್ಗಿದೆ ಎಂದು ರಾಮಚಂದ್ರನ್ ಹೇಳಿದ್ದಾರೆ. ಆದ್ದರಿಂದ ಇದನ್ನು ಸರಿಪಡಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕು ಎಂದು ಸಲಹೆ ಮಾಡಿದ್ದಾರೆ. ಪಕ್ಷ ಹಾಗೂ ಸರಕಾರದ ಎಲ್ಲಾ ಅಂಶಗಳನ್ನು ಪರಿಗಣಿಸಿ ನಾಯಕ ಎಷ್ಟು ಪರಿಣಾಮಕಾರಿ ಎಂಬುದನ್ನು ಸಮಗ್ರವಾಗಿ ಪರಿಶೀಲಿಸುವುದು ಈ ನಿಟ್ಟಿನಲ್ಲಿ ಮೊದಲ ಹೆಜ್ಜೆಯಾಗಬೇಕು ಎಂದಿದ್ದಾರೆ ರಾಜ್ಯ ನಾಯಕತ್ವ ಬದಲಾವಣೆ ಆಗಬೇಕೆಂದು ರಾಘುಚಂದ್ರನ್ ನೇರವಾಗಿಯೇ ಕರೆ ನೀಡಿದ್ದಾರೆ ಎಂದು ಇದರಿಂದ ಅರ್ಥೈಸಬಹುದು.

ಒಟ್ಟಿನಲ್ಲಿ ಒಟ್ಟಪಾಲಂನಲ್ಲಿ ಕಾಲೇಜ್ ವಿದ್ಯಾರ್ಥಿ ಶಿವರಾಮನ್ ದಾಖಲಿಸಿದ ಜಯಭೇರಿಯಿಂದ ಇಡೀಯಾಗಿ ಯು.ಡಿ.ಎಫ್.ನಲ್ಲಿ ಹಾಗೂ ಅದರ ಅಂಗಪಕ್ಷಗಳ ವಿವಿಧ ಬಣಗಳಲ್ಲಿ ಬಿರುಕು ತೀವ್ರವಾಗಿರುವುದು ಮೇಲ್ನೋಟಕ್ಕೆ ಎದ್ದು ಕಾಣುತ್ತದೆ.

ಕಾಂಗ್ರೆ ನಾಯಕರಿಗೆ ಶಸ್ತ್ರಾಸ್ತ್ರ ಮಾರಾಟ

ಮುಂಬಯಿಯ ಭೂಗತ ಜಗತ್ತು ಹಾಗೂ ಅಂತರ್‍ರಾಷ್ಟ್ರೀಯ ಶಸ್ತ್ರಾಸ್ತ್ರ ಕಳ್ಳಸಾಗಣೆ ಜಾಲದೊಂದಿಗೆ ಸಂಪರ್ಕ ಇರಿಸಿಕೊಂಡಿರುವ ಉರುಮಿ ಮುಸ್ತಾಫಾ (30 ವರ್ಷ) ಎಂಬಾತ ಸೆ. 20 ರಂದು ಕಣ್ಣೂರಿನಲ್ಲಿ ಪೋಲೀಸರಿಗೆ ಶರಣಾದನು. ಆತನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು ನ್ಯಾಯಾಧೀಶರು ಪೋಲೀಸ್ ಕಸ್ಟಡಿಗೆ ಒಪ್ಪಿಸಿದ್ದಾರೆ.

ಬಾಂಬ್ ತಯಾರಿಸುವ ತಂತ್ರಜ್ಞಾನದಲ್ಲಿ ಪಳಗಿರುವ ಮುಸ್ತಾಫಾ ಬಹಿರಂಗಪಡಿಸಿರುವ ಅಂಶ ಆಘಾತಕಾರಿಯಾದುದಾಗಿದೆ. ತಾನು ಅಸ್ತ್ರಗಳನ್ನು ತಯಾರಿಸಿ ಕೆಲವು ಕಾಂಗ್ರೆ ನಾಯಕರಿಗೆ ಮಾರಾಟ ಮಾಡಿರುವುದಾಗಿ ಆತ ಹೇಳಿದ್ದಾನೆ. ಕೊಲ್ಲಿ ರಾಷ್ಟ್ರಗಳಿಗೆ ಅನೇಕ ಸಲ ಭೇಟಿಕೊಟ್ಟಿರುವ ಆತ ಮುಂಬಯಿಯ ಭೂಗತ ದೊರೆ ದಾವೂದ್ ಇಬ್ರಾಹಿಂನೊದಿಗೆ ಸಂಪರ್ಕ ಇರಿಸಿಕೊಂಡಿದ್ದವನು ಎನ್ನಲಾಗಿದೆ.

ಮುಸ್ತಾಫಾ ಕೇರಳಕ್ಕೆ ನುಸುಳಿರುವ ಬಗ್ಗೆ ಪೋಲೀಸರಿಗೆ ತಿಳಿದಿರಲಿಲ್ಲ. ಅವರು ನಿಗಾ ಇಟ್ಟಿರಲಿಲ್ಲ. ಆದರೆ ಅಬಕಾರಿ ಅಧಿಕಾರಿಗಳು ಸುಳಿವನ್ನು ಪಡೆದು ಆತ ಪೋಲೀಸರಿಗೆ ಶರಣಾಗುವಂತೆ ಮಾಡಿದರು ಎಂದು ತಿಳಿದುಬಂದಿದೆ.

ಕೇರಳದಲ್ಲಿ ಸಾರಿಗೆ ನೌಕರರ ವೇತನ ಸ್ಥಗಿತ

ರಾಜ್ಯ ಸಾರಿಗೆ ಸಂಸ್ಥೆಯ ಕಾರ್ಮಿಕರು ಮತ್ತು ನೌಕರರ ವೇತನ ಏರಿಕೆಯನ್ನು ಸ್ಥಗಿತಗೊಳಿಸುವ ಜನವಿರೋಧಿ ನಿರ್ಧಾರವೊಂದನ್ನು ಕೇರಳ ಸರಕಾರ ಕೈಗೊಂಡಿದೆ. ವೇತನ, ತುಟ್ಟಿಭತ್ಯೆ ಮತ್ತು ಇತರ ಭತ್ಯೆಗಳು ಏಪ್ರಿಲ್ ಒಂದರಂದು ಎಷ್ಟಿದ್ದವೋ ಅಷ್ಟಕ್ಕೆ ಸ್ಥಗಿತಗೊಳಿಸಿ ಅದು ಆಜ್ಞೆ ಹೊರಡಿಸಿದೆ.

ಸರಕಾರದ ಈ ಏಕಪಕ್ಷೀಯ ಕ್ರಮವನ್ನು ಎಲ್ಲಾ ಕಾರ್ಮಿಕ ಸಂಘಟನೆಗಳು ವಿರೋಧಿಸಿವೆ. ಈ ನಿರ್ಧಾರದ ವಿರುದ್ಧ ರಾಜ್ಯಾದ್ಯಂತ ಚಳುವಳಿ ನಡೆಯುವ ನಿರೀಕ್ಷೆಯಿದೆ.

ಶಾಲೆಗಳ ನಿರ್ಮಾಣಕ್ಕೆ ಮುಂದಾದ ಯುವಜನರು

ಇತ್ತೀಚಿನ ಪ್ರವಾಹದಿಂದ ಸಂತ್ರಸ್ತವಾಗಿರುವ ಪಶ್ಚಿಮಬಂಗಾಳ ರಾಜ್ಯದಲ್ಲಿ ಅಲ್ಲಿನ ಯುವಜನರು ಉದಾತ್ತ ಕಾರ್ಯಕ್ರಮವೊಂದಕ್ಕೆ ಮುಂದಾಗಿರುವ ಸುದ್ದಿ ಬಂದಿದೆ.

ಜಲಪಾಯ್ಗುರಿ ಮತ್ತು ಕೂಚ್ ಬಿಹಾರ್ ಜಿಲ್ಲೆಗಳಲ್ಲಿ ಅನೇಕ ಶಾಲಾಕಟ್ಟಡಗಳು ಪ್ರವಾಹದಿಂದ ನಾಶವಾಗಿವೆ. ಕೂಚ್ ಬಿಹಾರ್ ಜಿಲ್ಲೆಯ ಬಿಲಪೋತಗ್ರಾಮ ಹಾಗೂ ಜ... ಪಾಯ್ಗುರಿ ಜಿಲ್ಲೆಯ ಫಾರ್ವಡ್ ನಗರ್‌ದ... ಎರಡು ಶಾಲಾ ಕಟ್ಟಡಗಳನ್ನು ನಿರ್ಮಿಸಲು ಡಿ.ವೈ.ಎಫ್.ಐ ಪ.ಬಂಗಾಳ ರಾಜ್ಯ ಸಮಿತಿ ನಿರ್ಧರಿಸಿದೆ. ನೆರೆ ಪೀಡಿತ ಪ್ರದೇಶಗಳಲ್ಲಿ ಡಿ.ವೈ. ಎಫ್.ಐ. ನಾಯಕರು ಪ್ರವಾಸ ನಡೆಸಿದ ನಂತರ ಈ ನಿರ್ಧಾರವನ್ನು ಕೈಗೊಳ್ಳಲಾಯಿತು.

-- ವಿಶ್ವ

ದೂರದರ್ಶನ ಕಾರ್ಯಕ್ರಮಗಳಿ... ಚಿಣ್ಣರ ಪ್ರತಿಭಟನೆ

ದೂರದರ್ಶನ ಪ್ರಸಾರ ಮಾಡುತ್ತಿರು... ಕಾರ್ಯಕ್ರಮಗಳ ಗುಣಮಟ್ಟವನ್ನು ಪ್ರತಿಭಟಿ... ಕಲ್ಕತ್ತ ದೂರದರ್ಶನ ಕೇಂದ್ರ ಮುಂದೆ ಪ್ರತಿಭಟನಾ ಪ್ರದರ್ಶನವೊಂದು ನಡೆಯಿತು. ಇದನ್ನು ಸಂಘಟಿಸಿದ್ದು ಹಾಗೂ ಭಾಗವಹಿಸಿದ್ದು ಸ... ಮಕ್ಕಳೇ ಆಗಿದ್ದುದು ಒಂದು ವಿಶೇಷ.

ಮಕ್ಕಳ ಕಾರ್ಯಕ್ರಮಗಳಿಗೆ ಹೆಚ್ಚಿನ ಸಮ... ಯವನ್ನು ಮೀಸಲಿಡಬೇಕೆಂಬ ಬೇಡಿಕೆಯು... ಮನವಿ ಪತ್ರವೊಂದನ್ನು ಸಂಬಂಧಪಟ್ಟ ಅಧಿಕಾರಿಯ ಮೂಲಕ ದೂರದರ್ಶನದ ಮಹಾ... ರ್ದೇಶಕರಿಗೆ ರವಾನಿಸಲಾಯಿತು.

ವಿದ್ಯಾರ್ಥಿಗಳಿಂದ ಕರಾಳದಿನ...

ಒರಿಸ್ಸಾದ ಕಟಕ್ ಜಿಲ್ಲೆಯ ಬಿಶ... ಬಂಧ ಹಾಗೂ ಕಟಕ್ ಜಿಲ್ಲೆಯ ಸಲೇಪು... ಳಲ್ಲಿ ಸೆ. 7 ರಂದು ಮತಪ್ರದರ್ಶನ ನಡೆಸುತ್ತಿ... ವಿದ್ಯಾರ್ಥಿಗಳ ಮೇಲೆ ಪೋಲೀಸರು ದೌರ್ಜನ್ಯ... ಎಸಗಿದ್ದನ್ನು ಪ್ರತಿಭಟಿಸಿ ಎಸ್.ಎಫ್.ಐ ಸಹಿತ ವಿವಿಧ ವಿದ್ಯಾರ್ಥಿ ಸಂಘಟನೆಗಳು ಸೆ. ... ರಂದು ರಾಜ್ಯಾದ್ಯಂತ ಕರಾಳ ದಿನವನ್ನು ಆ... ರಿಸಿದವು.



ಚೌರಿಂಗಿಯಲ್ಲಿ ಕಾಂಗ್ರೆ "ಕೋಟೆ"ಯನ್ನು ಭೇದಿಸಿದ ಅನಿಲ್ ಚಟರ್ಜಿ ವಿಜಯಕ್ಕೆ ಅಭಿನಂದನೆ

ಸುಕುಮಾರ್ ಸೇನ್ ಗುಪ್ತಾ ನಿಧನ

ಹಿರಿಯ ಕಮ್ಯುನಿಸ್ಟ್ ನಾಯಕ, ಸಿಪಿಐ(ಎಂ) ಪ.ಬಂಗಾಳ ರಾಜ್ಯ ಸಮಿತಿಯ ಸದಸ್ಯ ಕಾಮ್ರೇಡ್ ಸುಕುಮಾರ್ ಸೇನ್‌ಗುಪ್ತಾ ಸೆ. 17 ರಂದು ನಿಧನರಾದರು. ಪಕ್ಷದ ರಾಜ್ಯ ಕೇಂದ್ರ ಕಛೇರಿಯಲ್ಲೇ ಅವರು ಕೊನೆಯುಸಿರೆಳೆದರು. ಅವರಿಗೆ 80 ವರ್ಷ ವಯಸ್ಸಾಗಿತ್ತು.

ಸೇನ್‌ಗುಪ್ತಾ ಸ್ವಾತಂತ್ರ್ಯಚಳುವಳಿಯಲ್ಲಿ ಭಾಗವಹಿಸಿದ್ದರು. ಅವರು ಒಟ್ಟು 19 ವರ್ಷ 9 ತಿಂಗಳು ಕಾಲ ಸೆರೆಮನೆಯಲ್ಲಿ ಕಳೆದಿದ್ದಾರೆ. ಪಶ್ಚಿಮಬಂಗಾಳದಲ್ಲಿ ಇಷ್ಟು ದೀರ್ಘಕಾಲ ಸೆರೆವಾಸ ಅನುಭವಿಸಿದ ಸಂಗಾತಿ ಬೇರೆ ಯಾರೂ ಇಲ್ಲ. 13 ವರ್ಷ ಕಾಲ ಭೂಗತ ಜೀವನವನ್ನು ನಡೆಸಿದ್ದಾರೆ. ಅಗಲಿದ ಈ ಹಿರಿಯ ಸಂಗಾತಿ ಪಕ್ಷದ ಕಛೇರಿಯಲ್ಲೇ ವಾಸಿಸುತ್ತಿದ್ದರು. ಪಕ್ಷದ ಸದಸ್ಯರೇ ಅವರ ಕುಟುಂಬದ ಸದಸ್ಯರಾಗಿದ್ದರು.

ಕಾಂ. ಹರನಾಥ ಚಂದಾ ಇನ್ನಿಲ್ಲ

ಸಿ.ಪಿ.ಐ(ಎಂ) ಪಶ್ಚಿಮಬಂಗಾಳ ರಾಜ್ಯ ಸಮಿತಿ ಸದ... ಹಾಗೂ ಮುರ್ಷಿದಾಬಾದ್ ಜಿಲ್ಲೆಯ ಜನಪ್ರಿಯ ನಾಯ... ಕಾಮ್ರೇಡ್ ಹರನಾಥ್ ಚಂದಾ ಸೆ. 20 ರಂದು ನಿಧನ... ದರು. ಅವರಿಗೆ 57 ವರ್ಷ ವಯಸ್ಸಾಗಿತ್ತು.

ರಾಜ್ಯ ಕಿಸಾನ್ ಸಭಾದ ಸಹ ಕಾರ್ಯದರ್ಶಿಯಾಗಿ... ಅವರು ಅಖಿಲ ಭಾರತ ಕಿಸಾನ್ ಕೌನ್ಸಿಲ್ ಸದಸ್ಯರೂ ಆಗಿದ್ದರು. ಅವರೊಬ್ಬ ಉತ್ತಮ ಲೇಖಕರಾಗಿದ್ದರು.

ಅವರ ಪತ್ನಿ ಶ್ವೇತಾ ಚಂದಾ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ (ಎ.ಐ.ಡಿ.ಡಬ್ಲ್ಯು.ಎ.) ಮುರ್ಷಿದಾಬಾದ್ ಜಿಲ್ಲಾ ಸಮಿತಿಯ ಕಾರ್ಯದರ್ಶಿಯಾಗಿದ್ದಾರೆ.

ಉಭಯ ನಾಯಕರ ನಿಧನಕ್ಕೆ ಸಿಪಿಐ(ಎಂ) ಪ.ಬಂಗಾಳ ರಾಜ್ಯ ಸಮಿತಿ ಹಾಗೂ ಪೊಲಿಟ್‌ಬ್ಯೂರೋ ಶ್ರದ್ಧಾಂಜಲಿ ಅರ್ಪಿಸಿದೆ.

ಪರ್ಯಾಯ ಕೃಷಿ ನೀತಿ ಬಗ್ಗೆ........

ಪುಟ 1ರಿಂದ

ಳಷ್ಟು ಮಾತನಾಡಿದರೂ ಕಾಂಗ್ರೆಸ್ ಸರಕಾರಗಳು, ಕಾಂಗ್ರೆಸ್ಸೇತರ ಬೂರ್ಜ್ವಾ ಸರಕಾರಗಳು ಕೂಡಾ ಮಾಡಿದ್ದು ಏನೂ ಇಲ್ಲ. ಪಶ್ಚಿಮಬಂಗಾಳ, ಕೇರಳ ಹಾಗೂ ಆಂಧ್ರ ಪ್ರದೇಶದ ಕೆಲವು ಪ್ರದೇಶಗಳನ್ನು ಬಿಟ್ಟರೆ ಬೇರೆಲ್ಲೂ ಅರ್ಥಪೂರ್ಣ ಮರು ಹಂಚಿಕೆ ನಡೆದಿಲ್ಲ ಎಂದು ಸುರ್ಜಿತ್ ತಮ್ಮ ಉದ್ಘಾಟನಾ ಭಾಷಣದಲ್ಲಿ ಹೇಳಿದರು. ಭೂ ಸುಧಾರಣಾ ಶಾಸನಗಳಲ್ಲಿ ಮಾಡಿದ ಬದಲಾವಣೆಗಳೆಲ್ಲಾ ಬಹುಪಾಲು ಆಳುವ ವರ್ಗಗಳ ಹಿತಾಸಕ್ತಿಗಳಿಗೆ ಅನುಗುಣವಾಗಿಯೇ ಮಾಡಲಾಗಿದೆ ಎಂದ ಅವರು ಎಡನೇತೃತ್ವದ ಒಂದು ಶಕ್ತಿಶಾಲೀ ರೈತ ಆಂದೋ...ನ ಮಾತ್ರವೇ ಈಗಿನ ಪರಿಸ್ಥಿತಿಯನ್ನು ಬದಲಿಸಬಲ್ಲದು ಎಂದು ಒತ್ತಿ ಹೇಳಿದರು.

ಎ.ಐ.ಕೆ.ಎಸ್. ಸದಾ ಸರಕಾರದ ನೀತಿಗಳ ಮೇಲೆಯೇ ಗಮನ ಕ್ರೋಢೀಕರಿಸಿದ್ದು, ನಮ್ಮದೇ ನೀತಿಗಳಲ್ಲೂ ಇರುವ ನ್ಯೂನ್ಯತೆಗಳೇನು ಎಂದು ಅಧ್ಯಯನ ಮಾಡುವುದೂ ಅಷ್ಟೇ ಮಹತ್ವದ್ದು ಎನ್ನುತ್ತಾ ಇದನ್ನು ಮಾಡುವವರೆಗೆ ನಾವು ಮುಂದುವರೆಯಲು ಸಾಧ್ಯವಿಲ್ಲ ಎಂದರು.

ನೀರಾವರಿಯ ಅಗತ್ಯ ಕೃಷಿಯ ಒಟ್ಟಾರೆ ಅಭಿವೃದ್ಧಿಯ ಅಗತ್ಯ ಬಗ್ಗೆ ಹೇಳಿದ ಸುರ್ಜಿತ್ ಬಹುರಾಷ್ಟ್ರೀಯ ಕಂಪೆನಿಗಳ ಪ್ರವೇಶದಿಂದ ರೈತಾಪಿವರ್ಗ ಇನ್ನಷ್ಟು ದಿವಾಳಿಯಾಗುತ್ತದೆ, ಎಡ ಆಂದೋಲನ ಕೃಷಿ ಕೂಲಿಕಾರರ, ಬಡರೈತರ ಬಹುಕಾಲದಿಂದ ನಿರ್ಲಕ್ಷಿತ ವಿಭಾಗಗಳ ಮೇಲೆ ಗಮನ ಕೇಂದ್ರೀಕರಿಸಬೇಕು ಎದು ತಮ್ಮ ಉದ್ಘಾಟನಾ ಭಾಷಣದಲ್ಲಿ ಮತ್ತೆ-ಮತ್ತೆ ಒತ್ತಿ ಹೇಳಿದರು.

ಕೃಷಿ ಕೂಲಿಕಾರರಲ್ಲಿ 50 ಶೇ. ಮಹಿಳೆಯರು. ಸ್ವಲ್ಪ ಉತ್ತಮ ಸ್ಥಿತಿಯಲ್ಲಿರುವ ಮಹಿಳಾ ವಿಭಾಗಗಳಿಗಿಂತ ಬಹಳ ಹೀನ ಸ್ಥಿತಿಯಲ್ಲಿ ದಿನವಿಡೀ ಇವರು ಗದ್ದೆಗಳಲ್ಲಿ ದುಡಿಯುತ್ತಾರೆ. ರೈತ ಹಾಗೂ ಕೃಷಿ ಕೂಲಿಕಾರರ ಆಂದೋಲನ ಈ ಮಹಿಳೆಯರನ್ನು ದೊಡ್ಡ ಪ್ರಮಾಣದಲ್ಲಿ ಸೆಳೆದುಕೊಳ್ಳಲು ಸಾಧ್ಯವಾದರೆ ಮಾತ್ರವೇ ಈ ಹೋರಾಟಗಳು ಯಶಸ್ವಿಯಾಗಬಲ್ಲವು. ಇಲ್ಲವಾದರೆ ಬಿಜೆಪಿ ಮತ್ತಿತರ ಸಾಮಾಜಿಕವಾಗಿ ಹಿಂದಕ್ಕೆಳೆಯುವ ಶಕ್ತಿಗಳ ಮತಾಂಧತೆ ಅವರನ್ನು ದಾರಿತಪ್ಪಿಸುತ್ತದೆ ಎಂದು ಸುರ್ಜಿತ್ ಎಚ್ಚರಿಸಿದರು.

(ಐ.ಎನ್.ಎಸ್. ಸುದ್ದಿ)

ಸುದ್ದಿಗಳು

ನೀರಿನ ದರ ಏರಿಕೆಗೆ ಪ್ರತಿಭಟನೆ

ನೀರಿಗೂ ಬಂತು ಕೆಡುಗಾಲ. ಜನರು ರಾತ್ರಿ ಕನಸಿನಲ್ಲಿಯೂ ಬೆಳಿಗ್ಗೆ ಯಾವ ವಸ್ತು ಬೆಲೆ ಹೆಚ್ಚುತ್ತೋ ಗೊತ್ತಿಲ್ಲ ಎಂದು ಕಾತರಿಸುವಂತಹ ದಿನಗಳು ಹೆಚ್ಚಾಗುತ್ತವೆ. ಗೊಬ್ಬರದ ಬೆಲೆ, ಬಸ್ ಪ್ರಯಾಣದ ದರ ಮೊನ್ನೆ ತಾನೆ ವಿದ್ಯುತ್, ನೀರಿನ ಕರ ಹಾಕುವುದರ ಮೂಲಕ ಬೆಲೆ ಏರಿಸಿದಾಗ ಸರಕಾರ ಜನರ ಮನಸ್ಸಿಗೆ ಆಘಾತ ತಂದಿದೆ

ನೀರಿನ ದರ ಏರಿಕೆಯನ್ನು ಡಿ.ವೈ. ಎಫ್.ಐ ಬೆಂಗಳೂರು ಜಿಲ್ಲಾ ಸಮಿತಿ ಖಂಡಿಸಿದೆ.

ಬೆಳ್ತಂಗಡಿ ಜಿಲ್ಲಾ ರೈತ ಸಂಘದ ಸಭೆ

ಬೆಳ್ತಂಗಡಿ : ಬೆಳ್ತಂಗಡಿ ತಾಲೂಕು ರೈತ ಸಂಘದ ವಿಸ್ತೃತ ಸಭೆಯು ಇತ್ತೀಚಿಗೆ ಸೆಪ್ಟೆಂಬರ್ 9, 1993 ರಂದು ಸಂಘದ ಅಧ್ಯಕ್ಷರಾದ ಕೆ.ವಿ. ರಾವ್ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಕಾರ್ಯದರ್ಶಿಗಳಾದ ಹರಿದಾಸ್, ಶಿವಕುಮಾರ್, ಮಹಾಲಿಂಗೇಶ್ವರ ಭಟ್ ಸದ... ರನ್ನು ಸ್ವಾಗತಿಸಿ ಸಭೆಯ ಉದ್ದೇಶವನ್ನು ... ರಿಸಿದರು. ಕೇಂದ್ರ ಮತ್ತು ರಾಜ್ಯ ಸರಕಾರ... ಆಡಳಿತ, ಆರ್ಥಿಕ, ರಾಜಕೀಯಗಳ ವೈಫ... ಕೋಮುವಾದಿಗಳ ಬೆಳವಣಿಗೆ, ಭತ್ತ, ತೆಂ... ರಬ್ಬರ್, ಅಡಿಕೆ ಬೆಳಗಾರರ ಸಮಸ್ಯೆಗಳು ... ಬಗೆಗೆ ಚರ್ಚಿಸಿ ಇವುಗಳ ನಿವಾರಣೋ... ಯಗಳ ಬಗೆಗೆ ಯೋಚಿಸಿ ಸಂಘಟನೆಯ... ಬಲಪಡಿಸುವುದು ಅಗತ್ಯ ಎಂದು ತೀರ್ಮಾ... ಸಿತು. ಈ ದಿಸೆಯಲ್ಲಿ ಮುಂಬರುವ ನವಂಬ... ತಿಂಗಳ ಕೊನೆಯ ವಾರದಲ್ಲಿ ಬೆಳ್ತಂಗಡಿಯ... ರೈತ ಕಾರ್ಮಿಕ ಸಮ್ಮೇಲನ 1993 ನ್ನು ಜ... ಸಲು ನಿರ್ಣಯಿಸಲಾಯ್ತು.

ಅಧ್ಯಕ್ಷರಾದ ಕೆ.ವಿ. ರಾಯರು ... ಳನವನ್ನು ಸಂಪೂರ್ಣ ಯಶಸ್ಸು ಗೊಳಿಸ... ಪ್ರಯತ್ನಿಸಲು ಸದಸ್ಯರನ್ನು ಕೇಳಿಕೊಂಡರು.

40 ಮಂದಿ ಸದಸ್ಯರ ಸ್ವಾಗತ ಸ... ಯನ್ನು ರಚಿಸಲಾಯ್ತು. ಸ್ವಾಗತ ಸಮಿತಿ ಅ... ಕ್ಷರಾಗಿ ಕೆ.ವಿ. ರಾವ್ ಅವರು, ಕಾರ್ಯದ... ಯಾಗಿ ಹರಿದಾಸ್ ಅವರೂ ಆಯ್ಕೆ ಆದ... ಜೋಶ್ ವಂದಿಸಿದರು. ಸೆಲಿ... ಳನದ ಯಶಸ್ಸಿಗೆ ಸದಸ್ಯರೆಲ್ಲರೂ ದುಡಿಯ... ಕೇಳಿಕೊಂಡರು.



ಸಂಸತ್ತು ಮತ್ತು ಜನರ ನಡುವೆ ಯೆಲ್ಟ್‌ಸಿನ್‌ನ ಪೋಲೀಸರು ಸಂಸತ್ತಿನ ಬಳಿ ಜನಾಗ್ರ ಮತ ಪ್ರದರ್ಶನ ತಡೆಯಲು ಸಿದ್ಧರಾಗಿರುವ ಪೋಲೀಸರು.

ಲೋಕ ಸಂಚಾರ

-- ಶರತ್ ಚಂದ್ರ

20ನೇ ಶತಮಾನದ ರಶ್ಯನ್ ಝಾರ್ ಶಾಹಿಗೆ ತೀವ್ರ ಪ್ರತಿರೋಧ

ಅಧ್ಯಕ್ಷ ಯೆಲ್ಟ್‌ಸಿನ್ ತಾನು 20ನೇ ಶತಮಾನದ (ರಶ್ಯದ ದೊರೆ) 'ಝಾರ್' ಎಂದು ತಿಳಿದಂತಿದೆ. ಎಲ್ಲಾ ಸಂವಿಧಾನಾತ್ಮಕ ರಾಜಕೀಯ ಅಂಶಗಳನ್ನು ಧಿಕ್ಕರಿಸಿ ಯೆಲ್ಟ್‌ಸಿನ್ ರಶ್ಯನ್ ಪಾರ್ಲಿಮೆಂಟ್ ರದ್ದುಗೊಳಿಸಿ, ಡಿಸೆಂಬರ್‌ನಲ್ಲಿ ಹೊಸ ಚುನಾವಣೆ ನಡೆಸಲು ಸುಗ್ರೀವಾಜ್ಞೆ ಹೊರಡಿಸಿದ್ದಾರೆ. ಇದು ಯೆಲ್ಟ್‌ಸಿನ್ ಹಾಗೂ ಅವರ ಸಾಮ್ರಾಜ್ಯಶಾಹಿ ಪೋಷಕರ ಕೊನೆಯ ಕಂಗೆಟ್ಟ ಕ್ರಮ. ಬಂಡವಾಳಶಾಹಿ ರಶ್ಯದಲ್ಲಿ ಉಂಟುಮಾಡುತ್ತಿರುವ ದುರಂತದ ಬಗ್ಗೆ ಜನರ ತೀವ್ರ ಅಸಮಾಧಾನವನ್ನು, ಪ್ರಜಾಪ್ರಭುತ್ವದ ನಾಟಕದಿಂದ ಹತ್ತಿಕ್ಕಲು ಸಾಧ್ಯವಾಗುತ್ತಿಲ್ಲ. ಅದಕ್ಕೆ ಈ ಬಹಿರಂಗವಾದ ಸರ್ವಾಧಿಕಾರಿ ಕ್ರಮ. ಆದರೆ ಈ ಕ್ರಮಕ್ಕೆ ಪ್ರಜಾಪ್ರಭುತ್ವ, ದೇಶ ಪ್ರೇಮಿ ರಾಷ್ಟ್ರೀಯವಾದಿ ಶಕ್ತಿಗಳಿಂದ ತೀವ್ರ ಪ್ರತಿರೋಧ ಬಂದಿದೆ ಎಂದು ಸಮಾಧಾನಕರ ಅಂಶ.

ಪಾರ್ಲಿಮೆಂಟಿನ ವಿಸರ್ಜನೆ ಸಂವಿಧಾನ- ಬಾಹಿರ ಕ್ರಮ ಎಂದು ಯೆಲ್ಟ್‌ಸಿನ್ನರೇ ಒಪ್ಪಿಕೊಂಡಿದ್ದಾರೆ. ಅಲ್ಲದೆ ರಾಜಕೀಯವಾಗಿಯೂ ಈ ಕ್ರಮ ಸಮರ್ಥಿಸಿಕೊಳ್ಳಲು ಯಾವುದೇ ಆಧಾರಗಳಿಲ್ಲ. ಏಪ್ರಿಲ್‌ನಲ್ಲಿ ನಡೆಸಿದ ಜನಮತ ಗಣನೆಯಲ್ಲಿ ಅಧ್ಯಕ್ಷ ಹಾಗೂ ಪಾರ್ಲಿಮೆಂಟ್ ಚುನಾವಣೆಗಳನ್ನು ಮೊದಲೇ ನಡೆಸುವ ಯೆಲ್ಟ್‌ಸಿನ್ ಸೂಚನೆಯನ್ನು ಬಹುಮತದಿಂದ ಜನ ತಿರಸ್ಕರಿಸಿದ್ದಾರೆ. ಅಧ್ಯಕ್ಷ ಯೆಲ್ಟ್‌ಸಿನ್ ಗೆದ್ದು ಬಂದಿರುವುದು ಕೂಡಾ ಈ ಪಾರ್ಲಿಮೆಂಟು ರಚಿಸಿದ ಕಾನೂನಿನ ಆಧಾರದಲ್ಲಿ ನಡೆದ ನೇರ ಚುನಾವಣೆಯಲ್ಲಿಯೇ ಆಗಸ್ಟ್ 1991 ರ ಬಿಕ್ಕಟ್ಟಿನ ಅವಧಿಯಲ್ಲಿ ಯೆಲ್ಟ್‌ಸಿನ್ನರ ಬೆಂಗಾವಲಿಗೆ ನಿಂತದ್ದು ಇದೇ ಪಾರ್ಲಿಮೆಂಟು. ಆಗ ರಶ್ಯನ್ ಪಾರ್ಲಿಮೆಂಟನ್ನು ಪ್ರಜಾಪ್ರಭುತ್ವದ ಶಕ್ತಿ ಎಂದು ಹಾಡಿಹೊಗಳಲಾಗಿತ್ತು. ಈಗ ಮಾತ್ರ ಅಧ್ಯಕ್ಷರ ಆರ್ಥಿಕ ಸುಧಾರಣೆ (ಬಂಡವಾಳಶಾಹಿ ಬೆಳೆಸುವ ಎಂದು ತಿದ್ದಿಕೊಳ್ಳಿ)ಗೆ ಅಡ್ಡಗಾಲು ಹಾಕುತ್ತಿದೆ ಎಂಬ ಕಾರಣಕ್ಕಾಗಿ ರದ್ದು ಮಾಡಲಾಗಿದೆ. ಜಿ-7 ಗುಂಪಿನ ಸಾಮ್ರಾಜ್ಯಶಾಹಿ ಸರಕಾರಗಳು ಯೆಲ್ಟ್‌ಸಿನ್ನರ ಈ ಸಂವಿಧಾನ-ಬಾಹಿರ ಕ್ಷಿಪ್ರಕ್ರಾಂತಿಗೆ ಬೆಂಬಲ ನೀತಿ ಪ್ರಜಾಪ್ರಭುತ್ವ ಎಂದರೆ ಇವರ ಅರ್ಥಕೋಶದಲ್ಲಿ ಸಾಮ್ರಾಜ್ಯಶಾಹಿ ಹಿತಾಸಕ್ತಿಗಳಿಗೆ ಅನುಕೂಲವಾಗುವ ಸ್ಥಿತಿ ಎದು ಯಾರಿಗಾದರೂ ಸ್ಪಷ್ಟವಾಗುವ ಕ್ರಮ. ಇದ್ದು. ಅಲ್ಲದೆ ಒಂದು ಸಾರ್ವಭೌಮ ದೇಶದ ಆಂತರಿಕ ರಾಜಕೀಯ ವಿಚಾರದಲ್ಲಿ ನೇರ ಹಸ್ತಕ್ಷೇಪ ಕೂಡಾ.

ಪಾರ್ಲಿಮೆಂಟ್ ಯೆಲ್ಟ್‌ಸಿನ್ನರ ಈ ಕ್ರಮದ ವಿರುದ್ಧ ತೀವ್ರ ಪ್ರತಿರೋಧ ಒಡ್ಡಿದೆ. ಅಧ್ಯಕ್ಷರ ಸುಗ್ರೀವಾಜ್ಞೆ 'ಸಂವಿಧಾನ-ಬಾಹಿರ' ಎಂದು ರದ್ದು ಮಾಡಿದೆ. ಹಾಗೂ ಸಂವಿಧಾನದ ಪ್ರಕಾರ ಇಂತಹ ಸಂದರ್ಭದಲ್ಲಿ ಸೂಚಿಸಿರುವಂತೆ, ಉಪಾಧ್ಯಕ್ಷರನ್ನು ಅಧ್ಯಕ್ಷರನ್ನಾಗಿ ನೇಮಿಸಿದೆ. ಅಧ್ಯಕ್ಷರಾಗಿ ನೇಮಕವಾಗಿರುವ ರುತ್‌ಸ್ಕೊಯ್ ಈಗಿನ ರಕ್ಷಣಾ ಮಂತ್ರಿ, ಗೃಹಮಂತ್ರಿ ಹಾಗೂ ಆಂತರಿಕ ಭದ್ರತಾ ಮಂತ್ರಿಗಳನ್ನು ಬದಲಾಯಿಸಿದ್ದಾರೆ. 87 ರಲ್ಲಿ 53 ಪ್ರಾದೇಶಿಕ ಸೋವಿಯೆಟ್‌ಗಳು ಅಧ್ಯಕ್ಷರ ಯೆಲ್ಟ್‌ಸಿನ್ನರ ಕ್ರಮವನ್ನು ತಿರಸ್ಕರಿಸಿವೆ. ಹಾಗೂ ಅಧ್ಯಕ್ಷೀಯ ಸುಗ್ರೀವಾಜ್ಞೆಯನ್ನು ಜಾರಿ ಮಾಡದಿರಲು ನಿರ್ಧರಿಸಿವೆ. ಮಾಸ್ಕೋದಲ್ಲಿ ಪಾರ್ಲಿಮೆಂಟು ಕಟ್ಟದ ಸುತ್ತ ಪಾರ್ಲಿಮೆಂಟು ರಕ್ಷಣಾ ಪಡೆ ಕಾವಲು ಕಾಯುತ್ತಿದೆ. ಅಲ್ಲದೆ ಎಡಪಕ್ಷಗಳ ಹಾಗೂ ಇತರ ರಾಷ್ಟ್ರೀಯವಾದಿ ಪಕ್ಷಗಳ ಸಾವಿರಾರು ಕಾರ್ಯಕರ್ತರು ಕಳೆದ ಹಲವು ದಿನಗಳಿಂದ ಹಗಲು-ರಾತ್ರಿ ಧರಣಿ ಹೂಡಿದ್ದಾರೆ. ಯೆಲ್ಟ್‌ಸಿನ್ ಕಳಿಸಿದ ಆಂತರಿಕ ಭದ್ರತಾ ಪಡೆಗಳು ಪಾರ್ಲಿಮೆಂಟು ಕಟ್ಟಡ ವಶಪಡಿಸಿಕೊಳ್ಳಲು ಪ್ರಯತ್ನಿಸಿದರೆ ಸಶಸ್ತ್ರ ಪ್ರತಿರೋಧ ನೀಡಲು ಸಾವಿರಾರು ಕಾರ್ಯಕರ್ತರು ತಯಾರಾಗಿದ್ದಾರೆ. ಯೆಲ್ಟ್‌ಸಿನ್-ಪರ ಮಾಸ್ಕೋ ಮೇಯರ್‌ರವರು ಮಾಡಿರುವ ಎಲ್ಲಾ ಶಸ್ತ್ರಾಸ್ತ್ರಗಳನ್ನು ವಾಪಸುಮಾಡಿ ಪಾರ್ಲಿಮೆಂಟು ಕಟ್ಟಡ ಬಿಟ್ಟುಹೋಗ ಬೇಕೆಂಬ ಆಜ್ಞೆಯನ್ನು ಪಾರ್ಲಿಮೆಂಟು ಸದಸ್ಯರು ತಿರಸ್ಕರಿಸಿದ್ದಾರೆ. ಪಾರ್ಲಿಮೆಂಟು ಕಟ್ಟಡಕ್ಕೆ ವಿದ್ಯುತ್, ಗ್ಯಾಸ್ ಸರಬರಾಜು ನಿಲ್ಲಿಸಿ ಪಾರ್ಲಿಮೆಂಟು ಸದಸ್ಯರನ್ನು ಮಣಿಸುವ ಪ್ರಯತ್ನ ಸಹ ಸಫಲವಾಗಿಲ್ಲ.

ಯೆಲ್ಟ್‌ಸಿನ್‌ರನ್ನು ಪೂರ್ಣವಾಗಿ ಅಧಿಕಾರದಿಂದ ಇಳಿಸಲು ಸಾಧ್ಯವಾಗುತ್ತದೋ ಇಲ್ಲವೋ ಎನ್ನುವುದು ಸೈನ್ಯ ಹಾಗೂ ಭದ್ರತಾ ಪಡೆಗಳು ಯಾವ ಪಕ್ಷಕ್ಕೆ ಬೆಂಬಲವಾಗಿ ನಿಲ್ಲುತ್ತವೆ ಹಾಗೂ ಜನರು ಬೀದಿಗಿಳಿದು ದೊಡ್ಡಸಂಖ್ಯೆಯಲ್ಲಿ ಪಾರ್ಲಿಮೆಂಟು ನಿಲುವಿಗೆ ಬೆಂಬಲ ನೀಡುತ್ತಾರೆಯೋ ಎಂಬುದರ ಮೇಲೆ ಅವಲಂಬಿಸಿದೆ. ಮಾಸ್ಕೋ ಸೇರಿದಂತೆ ಹಲವು ಪ್ರಮುಖ ನಗರಗಳಲ್ಲಿ ಯೆಲ್ಟ್‌ಸಿನ್ ವಿರೋಧಿ ಭಾರಿ ಪ್ರದರ್ಶನಗಳಾಗಿವೆ. ಸೈನ್ಯದಲ್ಲೂ ಹಲವಾರು ಕಡೆ ಯೆಲ್ಟ್‌ಸಿನ್ ಆಜ್ಞೆ ತಿರಸ್ಕರಿಸಿರುವ ಪ್ರಕರಣಗಳಾಗಿವೆ. ಯೆಲ್ಟ್‌ಸಿನ್ ಪಾರ್ಲಿಮೆಂಟಿನ ಸಂವಿಧಾನಕ ನಿಲುವನ್ನು ಒಪ್ಪದೆ ಘರ್ಷಣೆಗೆ ಇಳಿದರೆ, ಆಂತರಿಕ ಯುದ್ಧ ಮತ್ತು ರಕ್ತಪಾತ ಅನಿವಾರ್ಯವಾಗಬಹುದು. ಈಗಾಗಲೇ ಯೆಲ್ಟ್‌ಸಿನ್ ಸಶಸ್ತ್ರ ಬಲ ಉಪಯೋಗಿಸುವ ಬಗ್ಗೆ ಸೂಚನೆಗಳಿವೆ. ಇದು ಜಾರಿಯಾದರೆ ಸೈನ್ಯದ ವಿಭಾಗ ಅದನ್ನು ವಿರೋಧಿಸುವುದು ಖಚಿತ.

ಬ್ರಿಟನ್‌ನಲ್ಲಿ ಏಶ್ಯನರ ಮೇಲೆ ಹಿಂಸಾಚಾರ

ಲಂಡನ್‌ನ ಕಾರ್ಪೊರೇಷನ್ ಚುನಾವಣೆಗಳಲ್ಲಿ ವರ್ಣದ್ವೇಷದ ಮೇಲೆ ಆಧಾರಿತ ಬ್ರಿಟಿಷ್ ನೇಶನಲ್ ಪಾರ್ಟಿಯ ಅಭ್ಯರ್ಥಿ ಗೆದ್ದಿದ್ದು, ಬ್ರಿಟನ್ ರಾಜಕೀಯ ವಲಯಗಳಲ್ಲಿ ತೀವ್ರ ಆತಂಕ ಹರಡಿದೆ. ಬ್ರಿಟಿಷ್ ನೇಶನಲ್ ಪಾರ್ಟಿ ಕರಿಯರು, ಏಶ್ಯನರನ್ನು ದೇಶದಿಂದ ಹೊರದಬ್ಬುವ ಕಾರ್ಯಕ್ರಮ ಹೊಂದಿರುವ ಫ್ಯಾಸಿಸ್ಟ್ ಪಕ್ಷ. ಈ ವಿಜಯ ಲಂಡನ್‌ನಲ್ಲಿ ಏಶ್ಯನರ ಮೇಲೆ ಹಲವಾರು ಹಲ್ಲೆಗಳು ನಡೆದ ಹಿನ್ನೆಲೆಯಲ್ಲಿ ಬಂದಿದೆ. ಕೆಲವೇ ದಿನಗಳ ಹಿಂದೆ ಬಾಂಗ್ಲಾದೇಶೀ ಒಬ್ಬನನ್ನು ಬಿಳಿಯ ಗೂಂಡಾಯುವಕರ ಗುಂಪೊಂದು ಚೆನ್ನಾಗಿ ಥಳಿಸಿ ಬೀದಿಯಲ್ಲೇ ಕೊಂದು ಹಾಕಿತ್ತು. ಇನ್ನೊಂದು ಘಟನೆಯಲ್ಲಿ ಇಬ್ಬರು ಬಿಳಿಯ ಯುಕರು ಬಾಂಗ್ಲಾದೇಶೀ ನಡೆಸುವ ಟ್ಯಾಕ್ಸಿಯೊಂದರಲ್ಲಿ ಪ್ರಯಾಣಿಸುತ್ತಿರುವಾಗ ಮಧ್ಯದಲ್ಲಿ ನಿಲ್ಲಿಸಿ, ಆತನ ಬಳಿ ಇದ್ದುದನ್ನು ದರೋಡೆ ಮಾಡಿ, ಆತನನ್ನು ಚೆನ್ನಾಗಿ ಥಳಿಸಿ ಪಕ್ಕದ ನದಿಗೆ ತಳ್ಳಿ ಕೊಲೆ ಮಾಡಿದ್ದರು. ಈ ಹಿನ್ನೆಲೆಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಏಶ್ಯನರು ಇರುವ ಪೂರ್ವ ಲಂಡನ್‌ನಲ್ಲಿ ತೀವ್ರ ಆತಂಕ ಉಂಟಾಗಿತ್ತು. ನವ- ನಾಜಿ ಬಿಳಿ ಯುವಕರು ಏಶ್ಯನರ ಮೇಲೆ ಆಕ್ರಮಣ ಮಾಡುವಾಗ ಪೋಲೀಸರು ಮಾಯವಾಗಿ ಬಿಡುತ್ತಾರೆ. ಮಧ್ಯ ಪ್ರವೇಶಿಸುವುದಿಲ್ಲ ಎಂಬುದು ಏಶ್ಯನರ ದೂರು.

ಈ ಹಿನ್ನೆಲೆಯಲ್ಲಿ ಬ್ರಿಟಿಷ್ ನ್ಯಾಶನಲ್ ಪಾರ್ಟಿಯ ಅಭ್ಯರ್ಥಿ ಚುನವಣೆ ಗೆದ್ದಿದ್ದು ರಾಜಕೀಯ ವಲಯಗಳಲ್ಲಿ ತೀವ್ರ ಆತಂಕ ಉಂಟುಮಾಡಿದೆ. ಕ್ಯಾಂಟರ್ ಬರಿಯ ಆರ್ಚ್‌ಬಿಶಪ್ 'ಜನಾಂಗೀಯ ರಾಜಕೀಯದ ಕೆಡುಕು'ಗಳನ್ನು ಮನಗಾಣಲು ಕರೆ ನೀಡಿದ್ದಾರೆ. ಲೇಬರ್ ಪಾರ್ಟಿ ವಕ್ತಾರರು 'ಪ್ರಜಾಪ್ರಭುತ್ವಕ್ಕೆ ತೀವ್ರ ಬೇಸರ ತರಿಸುವ ದಿನ' ಎಂದರೆ ಲಿಬರಲ್ ಡೆಮೊಕ್ರಾಟಿಕ್ ಪಕ್ಷದ ನಾಯಕ 'ತಾನು ಬಹಳ ದುಃಖಿ ಹಾಗೂ ಕೋಪತಪ್ತನಾಗಿದ್ದೇನೆ' ಎಂದು ಬಣ್ಣಿಸಿದ್ದಾರೆ. ಪ್ರಧಾನ ಮಂತ್ರಿ ಜಾನ್ ಮೇಜರ್ 'ದುರದೃಷ್ಟಕರ ಚುನಾವಣಾ ಫಲಿತಾಂಶ, ಇದರ ಪುನರಾವರ್ತನೆಯಾಗಲಿಕ್ಕಿಲ್ಲ ಎಂದು ನನ್ನ ಆಸೆ' ಎಂದಿದ್ದಾರೆ.

ಬಿಜೆಂಗ್ ಬದಲು ಸಿಡ್ನಿಗೆ ಒಲಿಂಪಿಕ್ 2000

ಕ್ರಿ.ಶ. 2000 ದಲ್ಲಿ ಒಲಿಂಪಿಕ್ಸ್ ಯಾವ ನಗರದಲ್ಲಿ ನಡೆಯಬೇಕೆಂದು ಪ್ರಮುಖ ಅಂತರ್ರಾಷ್ಟ್ರೀಯ ರಾಜಕೀಯ ವಿವಾದವಾಗಿಬಿಟ್ಟಿತ್ತು. ಒಲಿಂಪಿಕ್ಸ್‌ನಲ್ಲಿ ಕ್ರೀಡಾ ಮನೋಭಾವದ ಬದಲು ರಾಜಕೀಯ ಕೇಂದ್ರಸ್ಥಾನದಲ್ಲಿತ್ತು. ಅಂತರ್ರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿ ಐದು ನಗರಗಳಲ್ಲಿ ಒಂದನ್ನು ಆರಿಸಬೇಕಾಗಿತ್ತು. ಆ ಐದು ನಗರಗಳು ಬಿಜಿಂಗ್, ಸಿಡ್ನಿ, ಮ್ಯಾಂಚೆಸ್ಟರ್, ಬರ್ಲಿನ್, ಇಸ್ತಾನ್ ಬುಲ್.

ಮೊದಲ ಸುತ್ತಿನ ಮತದಾನಗಳಲ್ಲಿ ಬಿಜೇಂಗ್ ಇತರ ನಗರಗಳಿಗಿಂತ ಮುಂದಿತ್ತು ಹಿಂದೆ ಸರಿದು ಸಿಡ್ನಿಯ ಹೆಸರು ಮುಂದೆ ಬಂತು. ಆದರೆ ಕೊನೆಯ ಸುತ್ತಿನಲ್ಲಿ ಕೇವಲ ಎರಡು ಮತಗಳಿಂದ ಬಿಜೇಂಗ್ ಸಿಡ್ನಿಗೆ ಸೋತಿತು. ಪಾಶ್ಚಿಮಾತ್ಯ ದೇಶಗಳು ಸಮಿತಿಯಲ್ಲಿ ಗ್ಯಾಂಗ್ ಕಟ್ಟಿಕೊಂಡು ಬಿಜಿಂಗ್‌ಗ್ ಒಲಿಂಪಿಕ್ಸ್ ಅವಕಾಶ ಸಿಗದಂತೆ ನೋಡಿಕೊಂಡರು. ಮತದಾನದ ಮೊದಲೇ ಚೀನಾ 'ಮಾನವ ಹಕ್ಕು'ಗಳ ಬಗ್ಗೆ ಸರಿಯಾಗಿ ವರ್ತಿಸುತ್ತಿಲ್ಲ ಎಂಬ ಕಾರಣದಿಂದ ಬಿಜಿಂಗ್‌ನಲ್ಲಿ ಒಪಿಂಪಿಕ್ಸ್ ನಡೆಯಬಾರದು ಎಂದು ಬಾರೀ ಅಪಪ್ರಚಾರ ನಡೆಸಿದ್ದವು. ಚೀನಾ ಸಹ ರಭಸದಿಂದ ಪ್ರತಿ-ಪ್ರಚಾರ ನಡೆಸಿತ್ತು. ಆದರೂ ಮೂರನೇ ಜಗತ್ತಿನ ದೇಶಗಳ ಬೆಂಬಲ ಚೀನಾಕ್ಕೆ ಪೂರ್ತಿ ದೊರಕದ್ದರಿಂದ ಚೀಣಾ ಸೋಲಬೇಕಾಯಿತು.

ಮೋಘ ಸಂದೇಶವೋ.......

t ಪುಟ 4ರಿಂದ

ದೊಡ್ಡ ಪ್ರಭಾವ ಬೀರುತ್ತದೆ ಎನ್ನಲಾಗಿದೆ. 24 ಗಂಟೆ ಜನರನ್ನು ಮರಳುಗೊಳಿಸುವ ಈ ಪ್ರಸಾರಗಳು ಬಹುಶಃ ಸಾಹಿತ್ಯ ನಾಟಕ, ಸಂಗೀತ ಕಚೇರಿ, ಯಕ್ಷಗಾನ, ಸಿನೇಮಾ ಮುಂತಾದ ನಮ್ಮ ನೆಲ ಸಾಂಸ್ಕೃತಿಕ ಚಟುವಟಿಕೆಗಳನ್ನು ತೀರಾ ಕುಂಠಿತಗೊಳಿಸುವ ಅಪಾಯವೂ ಇದೆ.

ಸರ್ಕಾರ - ದೂರದರ್ಶನದ ಹಾಸ್ಯಾಸ್ಪದ ಪ್ರತಿಕ್ರಿಯೆ

ಇಂತಹ ಸಾಂಸ್ಕೃತಿಕ-ರಾಜಕೀಯ ಆಕ್ರಮಣದ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಹಾಗೂ ಅದರ ನಿಯಂತ್ರಣದಲ್ಲಿರುವ ದೂರದರ್ಶನದ ಪ್ರತಿಕ್ರಿಯೆ ಸಪ್ಪೆಯಾಗಿತ್ತು. ಯಾವುದೇ ರೀತಿಯಲ್ಲಿ ಸಕಾರಾತ್ಮಕವಾಗಿಲ್ಲ. ಬರಬರುತ್ತಾ ಹಾಸ್ಯಾಸ್ಪದವಾಗಿದೆ. ದೂರದರ್ಶನದ ಕಳಪೆ ಗುಣಮಟ್ಟ, ಏಕತಾನತೆಯಿಂದ ಭಾರತದ ವೀಕ್ಷಕ ಬೇಸತ್ತಿದ್ದ. ಆದ್ದರಿಂದ ಏನೋ ಒಂದು ಬದಲಿ ಯಾದಾಗ ಉತ್ಸಾಹದಿಂದ ಪ್ರತಿಕ್ರಿಯಿಸಿದ ಎನ್ನುವುದು ಕಂಡುಬರುತ್ತದೆ- ಉಪಗ್ರಹ ಟಿವಿಗಳ ವಿತರಣೆಯ ಕಾರ್ಯಕ್ರಮ ಪಟ್ಟಿ ನೋಡಿದರೆ ಟಿವಿ ವೀಕ್ಷಕರ ಶೇಕಡಾ 20 ನ್ನು ಈ ಉಪಗ್ರಹ ಟಿವಿ ಚಾನೆಗಳು ತಲುಪಿದೆ ಎನ್ನಲಾಗಿದೆ. ಈ ಚಾನೆಲ್‌ಗಳಿಗೆ ಅದರಲ್ಲೂ ಝೀ ಟಿವಿ ಮುಂತಾದ ಭಾರತೀಯ ಭಾಷಾ ಚಾನೆಲ್‌ಗಳಿಗೆ ಈಗಾಗಲೇ ಭಾರತೀಯ ಕಂಪನಿಗಳ ಜಾಹೀರಾತು ಹರಿಯಲಾರಂಭಿಸಿದೆ. ಈ ಚಾನೆಲ್‌ಗಳ ಜಾಹೀರಾತಿನ ದರ ದೂರದರ್ಶನದಕ್ಕಿಂತ ಕಡಿಮೆಯಾಗಿರುತ್ತಂತೆ. ಇದು ಮುಖ್ಯವಾಗಿ ಸರ್ಕಾರಕ್ಕೆ, ದೂರದರ್ಶನಕ್ಕೆ ಆತಂತಕ್ಕೆ ಕಾರಣವಾಗಿ ಹುಚ್ಚು ಹುಚ್ಚು ಪ್ರತಿಕ್ರಿಯೆಗೆ ಕಾರಣವಾಗಿದೆ ಎನ್ನಲಾಗಿದೆ.

ಮೊದಮೊದಲು ವಿದೇಶೀ ಉಪಗ್ರಹದ ಟಿವಿಗಳ ಭರಾಟೆಯನ್ನು ಸರ್ಕಾರ ಗೊತ್ತಿದ್ದೂ, ಗೊತ್ತಿಲ್ಲದಂತೆ ಕಣ್ಣುಮುಚ್ಚಿ ಕೂತಿತ್ತು. ಅದನ್ನು ನಿರ್ಲಕ್ಷಿಸಿತು. ಆಮೇಲೆ ಇದ್ದಕ್ಕಿದ್ದ ಹಾಗೆ ದೂರದರ್ಶನದ ಯಾವುದೇ ತಯಾರಿ, ಯೋಜನೆ ಇಲ್ಲದೆ ಆಗಸ್ಟ್-15 ರಿಂದ ಐದು ಉಪಗ್ರಹ ಟಿವಿ ಚಾನೆಲ್‌ಗಳನ್ನು ಆರಂಭಿಸಿತು. ಅದರ ಸಮಯವನ್ನು ಹಂಚುವಲ್ಲಿ ಹಾಸ್ಯಾಸ್ಪದ ಪರಿಸ್ಥಿತಿ ಉಂಟಾಯಿತು. ಮೊದಲು ಬಂದವರಿಗೆ ಮೊದಲ ಆದ್ಯತೆ ಕೊಡಲಾಗುತ್ತದೆ ಎಂಬ ನೀತಿ ಜಾರಿ ಮಾಡಲು ಹೋದಾಗ ಹಲವು ಕ್ಯೂಗಳ ಗೊಂದಲ, ಕೋರ್ಟ್ ಕೇಸುಗಳಿಂದ ತೀರಾ ಅಧ್ವಾನವಾಯಿತು. ಆಮೇಲೆ ಈ ನೀತಿ ಬದಲಾಯಿಸಿದರೂ ಈ ವಿವಾದ ಬಗೆಹರಿದಿಲ್ಲ. ಈಗ ದೂರದರ್ಶನದ ಹಳೆ ಸ್ಟಾಕ್‌ನಿಂದ ಕಾರ್ಯಕ್ರಮಗಳನ್ನು ಬೇಕಾಬಿಟ್ಟಿಯಾಗಿ ಈ ಚಾನೆಲ್‌ಗಳಲ್ಲಿ ಪ್ರಸಾರ ಮಾಡಲಾಗುತ್ತಿದೆ. ಜನಮರುಳು ಮಾಡುವ ಫಿಲಂ, ಮತ್ತು ಫಿಲಂ ಆಧಾರಿತ ಕಾರ್ಯಕ್ರಮಗಳ ಮೇಲೆ ವ್ಯಾಪಾರೀ ದೃಷ್ಟಿಯಿಂದ ಆಧಾರಿಸಿರುವ ಈ ಚಾನೆಲ್‌ಗಳ ಜತೆ ಪೈಪೋಟಿಗೆ ಇಳಿಯಲು ಹೋಗಿ ಅವುಗಳ ನೀತಿಯನ್ನೇ ಕಾಪಿ ಹೊಡೆಯುತ್ತಿದೆ. ಹಲವಾರು ವಿದೇಶೀ ಟಿವಿಗಳಿಂದ ನೇರವಾಗಿ ಆಮದು ಮಾಡಿದ ಕಾರ್ಯಕ್ರಮಗಳನ್ನು ಉಪಯೋಗಿಸಲಾಗುತ್ತಿದೆ. ಇದು ಬಿಬಿಸಿಯಂತೆ ದೂರದರ್ಶನ ಹವಾಮಾನ ಸುದ್ದಿಯೂ ಮೇಷ್ಟರಂತೆ ಕೋಲು ತೆಗೆದುಕೊಂಡು ಹೇಳುವ ಹಾಸ್ಯಾಸ್ಪದ ಸ್ಥಿತಿ ಉಂಟುಮಾಡಿದೆ.

ಬದಲಿ ನೀತಿ ಏನು?

ಉಪಗ್ರಹ ಟಿವಿ ತಂತ್ರಜ್ಞಾನದ ವಿಶಿಷ್ಟ ಸ್ವಭಾವದಿಂದಾಗಿ ಎಲ್ಲಾ ವಿದೇಶೀ ಚಾನಲ್‌ಗಳನ್ನು ನಿಷೇಧಿಸುವುದು ಸಾಧ್ಯವಾಗಲಿಕ್ಕಿಲ್ಲ, ಬೇಕಾಗಿಯೂ ಇಲ್ಲ. ಆದರೆ ಈ ಚಾನೆಲ್‌ಗಳಲ್ಲಿ ಕಾರ್ಯಕ್ರಮದ ಬಗ್ಗೆ ನಿಗಾ ಇಡುವುದು, ಸಾರ್ವಜನಿಕ ಉದ್ದೇಶಗಳಿಗೆ ವ್ಯತಿರಿಕ್ತವಾದವನ್ನು ನಿರ್ಬಂಧಿಸುವುದು ಸರಿಯಾದ ಕಾನೂನು ನಿರೂಪಿಸಿದರೆ ಸಾಧ್ಯ. ಅದರಲ್ಲೂ ಕೇಬಲ್ ಟಿವಿ ಜಾಲಕರಿಗೆ ನಿರ್ದೇಶನ ನೀತಿ ರೂಪಿಸುವುದರಿಂದ ಸಾಧ್ಯ

ದೂರದರ್ಶನದ ಗುಣಮಟ್ಟವನ್ನು ಉತ್ತಮಪಡಿಸುವುದು ಅತ್ಯಗತ್ಯವಾಗಿದೆ. ಅದು ಸರ್ಕಾರದ ತುತ್ತೂರಿ ಎಂಬ ಅಪಕೀರ್ತಿ ಹೋಗುವಂತೆ ಸುದ್ದಿ ಸಾಮಯಿಕ ವರದಿ ಎಲ್ಲಾ ಆಶಯಗಳನ್ನು ಪ್ರತಿನಿಧಿಸುವಂತಿರಬೇಕು. ದಿಲ್ಲಿ ಕೇಂದ್ರಿತ, ಹಿಂದಿ ಹೊರಿಸುವ ನೀತಿ ಬಿಟ್ಟು ಇತರ ಭಾರತೀಯ ಭಾಷೆಗಳಿಗೆ ಸಮಾನ ಪ್ರಾಮುಖ್ಯತೆ ನೀಡಬೇಕು. ದೂರದರ್ಶನ ತರಾತುರಿಯಲ್ಲಿ ಆರಂಭಿಸಿದ ಚಾನೆಲ್‌ಗಳೂ ಹಿಂದಿ- ಇಂಗ್ಲಿನಲ್ಲಿ ಮಾತ್ರ ಇವೆ ಎಂಬುದನ್ನು ಗಮನಿಸಬೇಕು. ದೂರದರ್ಶನ- ರೇಡಿಯೋ ಜನತಾ ಸರ್ಕಾರ ತಂದ "ಪ್ರಸಾರ ಭಾರತಿ" ಮಸೂದೆಯ ಪ್ರಕಾರ ಸ್ವತಂತ್ರ ಕಾರ್ಪೋರೇಷನ್‌ಗೆ ವಹಿಸಿಕೊಡಬೇಕು. ಆದರೆ ಅದು ಪಾರ್ಲಿಮೆಂಟ್ ಮೇಲ್ವಿಚಾರಣೆಯಲ್ಲಿ ನಡೆಯಬೇಕು. ಭ್ರಷ್ಟಾಚಾರ, ಅಧಿಕಾರಶಾಹಿ ತೊಲಗಿಸಲು ತೀವ್ರ ಕ್ರಮ ಕೈಗೊಳ್ಳಬೇಕು. ದೂರದರ್ಶನದಲ್ಲಿ ಮಧ್ಯಮ, ಉಚ್ಚ- ಮಧ್ಯಮವರ್ಗವಲ್ಲದೆ ಇತರ ಜನವಿಭಾಗಗಳ ಆಶಯಗಳಿಗೆ ಅನುಗುಣವಾದ ಕಾರ್ಯಕ್ರಮ ಬರುವಂತೆ ನಿಗಾವಹಿಸಬೇಕು.

ಕೇಬಲ್ ಟಿವಿ ಪ್ರಜಾಸತ್ತಾತ್ಮಕ ಪ್ರಗತಿಪರ ಸಾಂಸ್ಕೃತಿಕ ಚಳುವಳಿಗಳಿಗೂ ಒಂದು ಹೊಸ ಅವಕಾಶ ಒದಗಿಸುತ್ತದೆ ಎಂದು ಮರೆಯಬಾರದು. ಕೇಬಲ್ ಟಿವಿ- ಜಾಲಗಳ ಮೂಲಕ ಸ್ಥಳೀಯವಾಗಿ ತಯಾರಿಸಿದ ಉತ್ತಮ ಗುಣಮಟ್ಟದ ಕಾರ್ಯಕ್ರಮ ತಲುಪಿಸಲು ಸಂಘಟಿತ ಕೆಲಸದ ಸಾಧ್ಯತೆ ಇದೆ. ಉಪಗ್ರಹ ಟಿವಿ ಚಾನೆಲ್‌ಗಳಲ್ಲೂ ಸೂಕ್ತ ಸಹಕಾರಿ ರಚಿಸಿಕೊಳ್ಳುವ ಮೂಲಕ ಇನ್ನೂ ಹೆಚ್ಚು ಜನರನ್ನು ತಲುಪುವ ಸಾಧ್ಯತೆ ಬಳಸಿಕೊಳ್ಳಬೇಕಾಗಿದೆ.

KRNM/BGS-405 MAG(2) PRB DECR 319-78/79

"ನಿಮ್ಮ ವಿಶ್ವಾಸಾರ್ಹತೆಯನ್ನು ಕಳೆಕೊಳ್ಳಬೇಡಿ" ಡಿ.ಎಂ.ಕೆ.ಗೆ ಸಿಪಿಐ(ಎಂ) ಆಗ್ರಹ

ತಮಿಳುನಾಡಿನಲ್ಲಿ ಇತ್ತೀಚಿನ ಉಪ ಚುನಾವಣೆಗಳ ಸಮಯದಲ್ಲಿ ಆತಂಕಕಾರಿ ರಾಜಕೀಯ ಪ್ರವೃತ್ತಿ ಕಂಡುಬಂದಿದೆ. ಡಿ.ಎಂ.ಕೆ. ಅನುಸರಿಸುತ್ತಿರುವ ಮಾರ್ಗ- ರಾಷ್ಟ್ರೀಯ ಹಿತಾಸಕ್ತಿಗಳಿಗೆ ಹಾಗೂ ತಮಿಳು ಜನಗಳ ಹಿತಾಸಕ್ತಿಗಳಿಗೆ ಅತ್ಯಂತ ಮಾರಕವಾಗಿದೆ ಎಂದು ಸಿಪಿಐ(ಎಂ)ನ ತಮಿಳುನಾಡು ರಾಜ್ಯ ಕಾರ್ಯದರ್ಶಿ ಮಂಡಳಿ ತನ್ನ ತೀವ್ರ ಆತಂಕ ವ್ಯಕ್ತಪಡಿಸಿದೆ. ಒಂದು ಜವಾಬ್ದಾರಿಯುತ ರಾಜಕೀಯ ಪಕ್ಷವಾಗಿ ಡಿ.ಎಂ.ಕೆ.ಯ ವಿಶ್ವಾಸಾರ್ಹತೆಗೆ ಇದು ಕುಂದು ತರುತ್ತದೆಯಷ್ಟೇ ಅಲ್ಲ ಡಿ.ಎಂ.ಕೆ. ಕಾರ್ಯಕರ್ತರು ರಾಜಕೀಯವಾಗಿ ನಿರಾಯುಧವಾಗಿ ಬಿಡುತ್ತಾರೆ ಎಂದು ರಾಜ್ಯ ಕಾರ್ಯದರ್ಶಿ ಮಂಡಳಿ ಪರವಾಗಿ ಪತ್ರಿಕಾ ಹೇಳಿಕೆಯಲ್ಲಿ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಹಾಗೂ ರಾಜ್ಯ ಕಾರ್ಯದರ್ಶಿ ಕಾಂ. ಎ. ನಲ್ಲಶಿವಂ ಎಚ್ಚರಿಸಿದ್ದಾರೆ. ಆದ್ದರಿಂದ ಈ ಆತ್ಮಹತ್ಯಾಕಾರಿ ನೀತಿಯನ್ನು ಬಿಟ್ಟು ತಮ್ಮ ಘೋಷಿತ ಗುರಿಸಾಧನೆಗೆ ಎಡ, ಪ್ರಜಾಪ್ರಭುತ್ವ ಜಾತ್ಯಾತೀತ ಶಕ್ತಿಗಳೊಡನೆ ಮೊದಲಿನಂತೆ ಮಿತ್ರತ್ವವನ್ನು ಮುಂದುವರಿಸಬೇಕೆಂದು ಕಳಕಳಿಯ ವಿನಂತಿ ಮಾಡಿಕೊಂಡಿದ್ದಾರೆ.

ಸಮಯಸಾಧಕ ತಿಳುವಳಿಕೆ

ಸಿಪಿಐ(ಎಂ) ಗೆ ಬಂದಿರುವ ಮಾಹಿತಿಗಳು ಕಾಂಗ್ರೆಸ್(ಐ) ಹಾಗೂ ಡಿ.ಎಂ.ಕೆ. ನಡುವೆ ಆಂತರಿಕ ಒಪ್ಪಂದವಾಗಿತ್ತು ಎಂಬ ಊಹೆಗೆ ತುಂಬಾ ಅವಕಾಶ ನೀಡಿವೆ. ರಾಣೀಪೇಟೆ ವಿಧಾನಸಭಾ ಕ್ಷೇತ್ರ ಡಿ.ಎಂ.ಕೆ.ಗೆ ಪಳನಿ ಲೋಕಸಭಾ ಕ್ಷೇತ್ರ ಕಾಂಗ್ರೆಗೆ ಎಂಬಂತಹ ತಿಳುವಳಿಕೆಗೆ ಅವರೆಡು ಪಕ್ಷಗಳು ಬಂದಂತೆ ಕಾಣುತ್ತದೆ. ಒಂದಲ್ಲ ಒಂದು ನೆವ ಹೇಳಿಕೊಂಡು ರಾಣೀಪೇಟೆಯಲ್ಲಿ ಕಾಂಗ್ರೆ ಅಭ್ಯರ್ಥಿ ಚುನಾವಣಾ ಕಣದಿಂದ ದೂರವೇ ಉಳಿದರೆ ಪಳನಿಯಲ್ಲಿ ಡಿ.ಎಂ.ಕೆ. ಪ್ರಚಾರ ಅತ್ಯಂತ ಸಪ್ಪೆಯಾಗಿತ್ತು. ಪಳನಿಯಲ್ಲಿ ಕಾಂಗ್ರೆ ನೀತಿಗಳ ಬಗ್ಗೆ ಯಾವುದೇ ರಾಜಕೀಯ ಟೀಕೆ ಮಾಡದಿರುವುದು ಹಲವೆಡೆ- ಡಿ.ಎಂ.ಕೆ. ಕಾರ್ಯಕರ್ತರನ್ನು ಚುರುಕುಗೊಳಿಸದೇ ಇರುವುದನ್ನು ಸಿಪಿಐ(ಎಂ) ಮುಖಂಡರು ವೈಯುಕ್ತಿಕವಾಗಿ ಡಿ. ಎಂ.ಕೆ. ಮುಖಂಡರನ್ನು ಭೇಟಿಯಾಗಿ ಅವರ ಗಮನಕ್ಕೆ ತಂದಿದ್ದರು. ಆದರ ನಂತರವೂ ಡಿ.ಎಂ.ಕೆ. ಪ್ರಚಾರ ಕಾರ್ಯದಲ್ಲಿ ಯಾವುದೇ ಸುಧಾರಣೆ ಕಂಡುಬರಲಿಲ್ಲ.

ಡಿ.ಎಂ.ಕೆ ಈ ರೀತಿ ಕಾಂಗ್ರೆಸ್‌ನೊಂದಿಗೆ ಸಮಯಸಾಧಕ ರಾಜಕೀಯ ತಿಳುವಳಿಕೆಗೆ ಬಂದಿರುವುದು ಬಹಳ ದುರದೃಷ್ಟಕರ ಎಂದು ಕಾಂ. ನಲ್ಲಶಿವಂ ಹೇಳಿದ್ದಾರೆ. ಎ.ಐ.ಎ.ಡಿ.ಎಂ.ಕೆ. ಸರಕಾರದ ಜನ-ವಿರೋಧಿ ನೀತಿಗಳೊಂದಿಗೇ ಕಾಂಗ್ರೆಸ್(ಐ)ನ ಆರ್ಥಿಕ ಧೋರಣೆ ಹಾಗೂ ಕೋಮುವಾದಿಗಳೊಡನೆ ರಾಜೀ ಸಂಧಾನ ನೀತಿಗಳನ್ನೂ ವಿರೋಧಿಸುವುದಾಗಿ ಘೋಷಿಸಿಕೊಂಡಿರುವ ಡಿ.ಎಂ.ಕೆ. ಹೇಗಾದರೂ ಮಾಡಿ ಎ.ಐ.ಎ.ಡಿ.ಎಂ.ಕೆ.ಯನ್ನು ಸೋಲಿಸುವ ಆತುರ ತೋರಿದೆ. ತಮಿಳುನಾಡಿನಲ್ಲಿ ತನ್ನದೇ ಜನಬೆಂಬಲವಿಲ್ಲದ, ಸಾಮೂಹಿಕ ನೆಲೆ ಇಲ್ಲದ ಕಾಂಗ್ರೆಸ್(ಐ) ಒಮ್ಮೆ ಡಿ.ಎಂ.ಕೆ.ಯೊಂದಿಗೋ, ಇನ್ನೊಮ್ಮೆ ಎ.ಐ.ಎ.ಡಿ.ಎಂ.ಕೆ. ಯೊಂದಿಗೋ ನೀತಿಬಾಹಿರ ತಿಳುವಳಿಕೆಗೆ ಬರುತ್ತಿರುವುದು ಎಲ್ಲರಿಗೂ ತಿಳಿದಿರುವ ವಿಷಯ. ಕೇಂದ್ರದಲ್ಲಿ ತನ್ನ ಅಧಿಕಾರವನ್ನು ಶಾಶ್ವತಗೊಳಿಸಲು ರಾಜ್ಯ ಸರಕಾರಗಳ ಮೇಲೆ ಸದಾ ಸಂವಿಧಾನದ 356 ವಿ ಕಲಮಿನ ಪ್ರಹಾರ ನಡೆಸುತ್ತಾ ಬಂದಿರುವ ಕಾಂಗ್ರೆಸ್(ಐ) ಎರಡು ಬಾರಿ ಡಿ.ಎಂ.ಕೆ. ಸರಕಾರಗಳನ್ನು ಎರಡು ಬಾರಿ ಎ.ಐ.ಎ.ಡಿ.ಎಂ.ಕೆ. ಸರಕಾರಗಳನ್ನು ವಜಾ ಮಾಡಿ ಇವರೆಡೂ ಪಕ್ಷಗಳನ್ನು ಪರಸ್ಪರ ಎತ್ತಿಕಟ್ಟುವ ತನ್ನ ನೀತಿಯನ್ನು ತೋರ್ಪಡಿಸಿಕೊಂಡಿದೆ ಎಂಬುದೂ ಎಲ್ಲರಿಗೂ ಗೊತ್ತು. ಈ ತಮ್ಮ ಹಿಂದಿನ ಅನುಭವಗಳನ್ನೂ ಪಾಠಗಳನ್ನು ಮರೆತು ಡಿ.ಎಂ.ಕೆ. ಕಾಂಗ್ರೆನೊಂದಿಗೆ ಈ ಸಮಯಸಾಧಕ ತಿಳುವಳಿಕೆಗೆ ಬಂದಿರುವುದು ದುರದೃಷ್ಟಕರ ಎಂದು ಕಾಂ. ನಲ್ಲಶಿವಂರವರು ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕೋಮುವಾದಿಗಳು ಬೆಳೆಯುವ ಅಪಾಯ

ಈ ಹೇಳಿಕೆ ಇನ್ನೊಂದು ಅಪಾಯದತ್ತವೂ ತಮಿಳುನಾಡಿನ ಜನತೆಯ ಗಮನ ಸೆಳೆದಿದೆ. ರಾಜ್ಯದಲ್ಲಿನ ಈ ರಾಜಕೀಯ ಪ್ರವೃತ್ತಿಗಳ ಪ್ರಯೋಜನ ಪಡೆದು ಬಿಜೆಪಿ ತಮಿಳುನಾಡಿನಲ್ಲಿ ಕಾಲೂರಲು ಪ್ರಯತ್ನಿಸುತ್ತಿದೆ. ಕಾಂಗ್ರೆಸ್(ಐ) ಹಾಗೂ ಡಿ.ಎಂ. ಕೆ. ವಿರುದ್ಧ ಹೋರಾಡುವ ನೆಪದಲ್ಲಿ ಎ.ಐ.ಎ.ಡಿ.ಎಂ.ಕೆ.ಗೆ ಬೆಂಬಲ ಕೊಡಲು ಪ್ರಯತ್ನಿಸುತ್ತಿದೆ. ರಾಜ್ಯದಲ್ಲಿ ಈ ರೀತಿ ಕೋಮುವಾದೀ ಶಕ್ತಿಗಳ ಬೆಳವಣಿಗೆಯ ಅಪಾಯದ ಬಗ್ಗೆ ಸಿಪಿಐ(ಎಂ) ಎಚ್ಚರಿಕೆ ನೀಡುತ್ತಾ ತಮಿಳುನಾಡಿನಲ್ಲಿ ಕಾಲೂರುವ ಬಿಜೆಪಿಯ ಪ್ರಯತ್ನಗಳಲ್ಲಿ ವಿಫಲಗೊಳಿಸಬೇಕು ಎಂದೂ ಈ ಹೇಳಿಕೆ ಮನವಿ ಮಾಡಿಕೊಂಡಿದೆ.

ಜೆರುಸಲೇಂ ನಮ್ಮ ರಾಜಧಾನಿ- ಅರಾಫತ್

ಇತ್ತೀಚೆಗೆ ನಡೆದ "ಚಾರಿತ್ರಿ ಪಿ.ಎಲ್.ಓ-ಇಸ್ರೇಲ್ ಒಪ್ಪಂದ" ನಮ್ಮದೇ ಸ್ವತಂತ್ರ ಪ್ಯಾಲೆಸ್ಟೀನ್ ಪ್ರಭುತ್ವ ಸ್ಥಾಪಿಸುವ ಸರಿಯಾದ ದಿಕ್ಕಿನಲ್ಲಿ ಮೊದಲ ಹೆಜ್ಜೆ, ಜೆರುಸಲೇಂ ಈ ಪ್ರಭುತ್ವದ ರಾಜಧಾನಿಯಾಗಿರುತ್ತದೆ ಎಂದು ಪಿ.ಎಲ್.ಓ ಅಧ್ಯಕ್ಷ ಯಾಸೆರ್ ಅರಾಫತ್ ಕಲ್ಕತ್ತೆಯಲ್ಲಿ ತಿಳಿಸಿದರು. ಅವರು ಸೆಪ್ಟೆಂಬರ್ 25 ರ ಮುಂಜಾನೆ ಕಲ್ಕತ್ತಾ ವಿಮಾನ ನಿಲ್ದಾಣದಲ್ಲಿ ಪಶ್ಚಿಮಬಂಗಾಳದ ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದರು.

ಇಂಡೋನೇಶ್ಯಾದಿಂದ ಟರ್ಕಿಗೆ ಹೋಗುವ ದಾರಿಯಲ್ಲಿ ವಿಮಾನಕ್ಕೆ ಇಂಧನ ಹಾಕಿಕೊಳ್ಳಲು ಅವರು ಸ್ವಲ್ಪ ಸಮಯ ಕಲ್ಕತ್ತಾ ವಿಮಾನ ನಿಲ್ದಾಣದಲ್ಲಿ ತಂಗಿದ್ದರು. ಪಶ್ಚಿಮಬಂಗಾಳದ ಮುಖ್ಯ ಕಾರ್ಯದರ್ಶಿ ಎಸ್. ಕೃಷ್ಣಮೂರ್ತಿ ಅವರನ್ನು ಬರಮಾಡಿಕೊಂಡರು. ಅಲ್ಲಿ ನೆರೆದಿದ್ದ ಪತ್ರಕರ್ತರು ಪ್ಯಾಲೆಸ್ಟೀನ್ ಜನತೆಗೆ ಒಂದು ಅಭಿವೃದ್ಧಿಪೂರ್ಣ ಭವಿಷ್ಯವನ್ನು ಹಾರೈಸಿದಾಗ ಅರಾಫತ್ "ಭಾರತ ನನ್ನದೇ ದೇಶವೆಂದು ನಾನು ಪರಿಗಣಿಸುತ್ತೇನೆ" ಎಂದರು.

ಈ ಹೊಸ ಒಪ್ಪಂದ ಹೊಸ ವಿಶ್ವವ್ಯವಸ್ಥೆ ತರುವುದೇ ಎಂದು ಪ್ರಶ್ನಿಸಿದಾಗ "ಅದರಲ್ಲಿ ಸಂಶಯವೇ ಇಲ್ಲ" ಎಂದ ಅರಾಫತ್ ಈ ಒಪ್ಪಂದ ಪ್ಯಾಲೆಸ್ಟೀನ್ ಜನತೆಯ ರಾಜಕೀಯ, ಕಾನೂನು ಬದ್ಧ ಹಕ್ಕನ್ನು ಮಾನ್ಯಮಾಡಿದೆ, ಇದರಿಂದ ಆ ಪ್ರದೇಶದ ಭದ್ರತೆಗೆ ಅವಕಾಶವಾಗುತ್ತದೆ ಎಂದರು. 1988 ರಲ್ಲಿ ಪಿ.ಎಲ್.ಓ.ದ ರಾಷ್ಟ್ರೀಯ ಸಮ್ಮೇಳನ ಎರಡು ಪ್ರಭುತ್ವಗಳ ಪರಿಹಾರದ ರಾಜಕೀಯ ಕಾರ್ಯಕ್ರಮವನ್ನು ಅಂಗೀಕರಿಸಿತ್ತು. ಅದನ್ನು ತಾನು ಡಿಸೆಂಬರ್ 1988 ರ ವಿಶ್ವಸಂಸ್ಥೆಯ ಜಿನೀವಾ ಅಧಿವೇಶನದಲ್ಲಿ ಘೋಷಿಸಿದುದನ್ನು ಅವರು ನೆನಪಿಸಿದರು.

"ಜೆರುಸಲೇಂ ನಮ್ಮ ರಾಜಧಾನಿ. ಅದನ್ನು ಪಡೆದೇ ತೀರುತ್ತೇವೆ" ಎಂದ ಅರಾಫತ್ ಪ್ಯಾಲೆಸ್ಟೀನಿಯನ್ನರಷ್ಟೇ ಅಲ್ಲ. ಮುಸ್ಲಿಮರು, ಅರಬರು, ಕ್ರಿಶ್ಚಿಯನ್ನರು ಎಲ್ಲರೂ ಈ ಬೇಡಿಕೆಯನ್ನು ಬೆಂಬಲಿಸುತ್ತಾರೆ ಎಂದು ಅವರು ಹೇಳಿದರು.

ಇಸ್ರೇಲಿನ ಜನಗಳು ಈ ಒಪ್ಪಂದದ ಬಗ್ಗೆ ಏನು ಹೇಳುತ್ತಾರೆ ಎಂದು ಕೇಳಿದಾಗ ನಾನು ನನ್ನ ಜನಗಳ ಬಗ್ಗೆಯ ಅಷ್ಟೇ ಹೇಳಬಲ್ಲೆ ಎಂದರು.

ಪ್ಯಾಲೆಸ್ಟೀನ್ ಪ್ರದೇಶದಲ್ಲಿ ಮೂಲಭೂತವಾದಿಗಳ ಪ್ರಭಾವ ಬೆಳೆಯುತ್ತಿರುವುದರ ಬಗ್ಗೆ ಪ್ರಶ್ನಿಸಿದಾಗ ಅದನ್ನು ಪ್ರಜಾಪ್ರಭುತ್ವದ ಮೂಲಕ ನಾವು ಮೀರಿನಿಲ್ಲುತ್ತೇವೆ ಎಂದರು. ಮೂಲಭೂತವಾದಿಗಳ ಸಂಖ್ಯೆ ಬಹಳ ಕಡಿಮೆ, ಅವರು ಪ್ಯಾಲೆಸ್ಟೀನ್ ಪ್ರಜಾಪ್ರಭುತ್ವದ ಬಹುಮತವನ್ನು ಒಪ್ಪಬೇಕು ಎಂದರು.

"ಭಾರತ ಜನತೆಯಿಂದ ನಾವು ಬಹಳ ನಿರೀಕ್ಷಿಯಿಟ್ಟುಕೊಂಡಿದ್ದೇವೆ. ಇದುವರೆಗೆ ಬೆಂಬಲ ನೀಡಿದಂತೆ ನಮ್ಮ ಮುಂದಿನ ದೀರ್ಘವಾದ ಕಷ್ಟಕರವಾದ ಮುನ್ನಡೆಯಲ್ಲಿ ಅವರು ಬೆಂಬಲ ನೀಡುತ್ತಾರೆ ಎಂಬ ನಂಬಿಕೆ ನಮಗಿದೆ" ಎಂದರು.

"ಕಳೆದ 27 ವರ್ಷಗಳಲ್ಲಿ ಆಕ್ರಮಿಸಿಕೊಂಡಿದ್ದ ಸೇನಾಪಡೆಗಳು ನಮ್ಮ ನಗರಗಳಲ್ಲಿ ಇದ್ದುದನ್ನೆಲ್ಲಾ ನಾಶಮಾಡಿವೆ. ನಾವು ಎಲ್ಲವನ್ನು ಹೊಸದಾಗಿ ಆರಂಭಿಸಬೇಕಾದಿದೆ. ಎಲ್ಲಾ ರಂಗಗಳಲ್ಲೂ ಭಾರಿ ದೊಡ್ಡ ಜವಾಬ್ದಾರಿಗಳು ನಮಮ ಮೇಲಿವೆ" ಎಂದು ಅವರು ಹೇಳಿದರು.

ರಷ್ಯಾದಲ್ಲಿನ ಬೆಳವಣಿಗೆಗಳು ಈ ಒಪ್ಪಂದದ ಮೇಲೆ ಏನಾದರೂ ಪರಿಣಾಮ ಬೀರುವುದೇ ಎಂದು ಕೇಳಿದಾಗ ಕಾದು ನೋಡಬೇಕು ಎಂದು ಅರಾಫತ್ ರಷ್ಯಾದ ಜನ ತಮ್ಮ ದೇಶದ ಈ ಆಂತರಿಕ ಸಮಸ್ಯೆಯನ್ನು ಅವರು ಪರಿಹರಿಸಿಕೊಳ್ಳಬಲ್ಲರು. ಅವರ ದೇಶದ ಭವಿಷ್ಯವನ್ನು ನಿರ್ಧರಿಸುವವರು ಅವರೇ ಎಂದು ಒತ್ತಿ ಹೇಳಿದರು.

ಇ.ಎಂ.ಎಸ್. ಲೇಖನ ಮಾಲೆ

ಪುಟ 2ರಿಂದ

ಗಾಢವಾಗಲು ಪ್ರಾರಂಭಿಸಿದ್ದು ಐದು ವರ್ಷಗಳ ನಂತರವೇ. ಚೈನಾ ಕಮ್ಯುನಿಸ್ಟ್ ಪಕ್ಷದ 8 ನೇ ಅಧಿವೇಶನಕ್ಕೆ ಭಾರತದ ಸೌಹಾರ್ದ ಪ್ರತಿನಿಧಿಗಳ ತಂಡದ ನಾಯಕನಾಗಿ ನಾನು ಚೀನಾಕ್ಕೆ ಭೇಟಿಕೊಟ್ಟೆ. ಆಗ ಚೀನಾದ ರಾಜಧಾನಿ ಬೀಜಿಂಗ್ ಮತ್ತು ಸುತ್ತಮುತ್ತಲಿನ ಕೆಲಪ್ರದೇಶಗಳಿಗೂ ಭೇಟಿ ನೀಡಿದೆ. ಇದಾದನಂತರ ಎರಡು ಬಾರಿ ಚೀನಾಕ್ಕೆ ಹೋಗಿ ಬಂದೆ. ಆದರೆ ಆ ಸಂದರ್ಭಗಳಲ್ಲಿ ಲೂರವರನ್ನು ನೋಡಲು ಸಾಧ್ಯವಾಗಲಿಲ್ಲ. 1951 ರ ಮೊದಲ ತಿಂಗಳಲ್ಲಿ ಒಂದು ದಿನ ಒಂದು ಗಂಟೆಯ ಕಾಲದ ಭೇಟಿಯಷ್ಟೇ ನನ್ನ ಅವರ ನಡುವಿನ ಸಂಬಂಧ.

ರಾಷ್ಟ್ರದ ಆರ್ಥಿಕ ಸಾಮಾಜಿಕ ಸಮಸ್ಯೆಗಳನ್ನು ವಸ್ತುನಿಷ್ಠವಾಗಿ ಮತ್ತು ವೈಜ್ಞಾನಿಕವಾಗಿ ಅಭ್ಯಸಿಸದೆ ಪಕ್ಷದ ಆಂತರಿಕ ಸಮಸ್ಯೆಗಳಿಗೆ ಪರಿಹಾರ ಕಾಣಲು ಸಾಧ್ಯವಿಲ್ಲವೆಂಬ ಅವರ ಉಪದೇಶ ನನಗೆ ಸಾಕಷ್ಟು ನೆರವಾಯಿತು.

1948-51ರ ಕಾಲಾವಧಿಯ ಪಕ್ಷದ ಆಂತರಿಕ ಹೊಯ್ದಾಟಗಳ ರೀತಿಯಲ್ಲೇ 1955-64ರ ಕಾಲಾವಧಿಯಾಗಿತ್ತು. ಅಂದಿನ ವೈರುಧ್ಯಗಳು ಎರಡು ರೀತಿಯಾಗಿತ್ತು. "ಚೈನಾ ಮಾರ್ಗ"ವು ಒಂದು ಪ್ರಶ್ನೆಯಾಗಿತ್ತು. ರಷ್ಯಾಪರವಾದಿಗಳು, ಚೈನಾಪರವಾದಿಗಳೆಂದು ಎಡ ಮತ್ತು ಬಲ ವಿಭಾಗಗಳೆಂದು ನಮ್ಮ ವಿರೋಧಿಗಳು ನಮ್ಮನ್ನು ಕರೆಯತೊಡಗಿದ್ದರು. ನನ್ನ ಬಲವು ಇದ್ದು ಎಡದ ಕಡೆಗೆ. ಆದರೆ ಎಡದಲ್ಲಿಯೂ ಕೆಲವು ವಿಷಯಗಳಲ್ಲಿ ನನ್ನ ವಿರೋಧ ಇತ್ತು.

ಅದರಂತೆ ಲೂ ಅವರ ಉಪದೇಶ ಅನುಸರಿಸಿ ಕೆಲಸ ಮಾಡಲು ಬುದ್ಧಿಪೂರ್ವಕವಾಗಿ ಶ್ರಮಿಸಲು ತೊಡಗಿದೆನು. ಅದರ ಫಲವೇ ಅರ್ಥಶಾಸ್ತ್ರ ಮತ್ತು ರಾಜಕೀಯ ಕುರಿತಾದ ಒಂದು ಇಂಗ್ಲೀಷ್ ಗ್ರಂಥ, ಸ್ವಾತಂತ್ರ್ಯ ಸಮರದ ಕಾಲದ ಭಾರತದ ರಾಜಕೀಯ, ಸ್ವಾತಂತ್ರ್ಯನಂತರದ ಆರ್ಥಿಕ, ರಾಜಕೀಯಕ ರಂಗಗಳಲ್ಲಿ ಬಂದ ಬದಲಾವಣೆಗಳು, ಅದರ ಪರಿಮಿತಿಗಳು ಮುಂತಾದ ವಿಷಯಗಳೇ ಆ ಗ್ರಂಥದಲ್ಲಿದ್ದದು.

ಆ ಗ್ರಂಥ ತಯಾರು ಮಾಡಲು ನಾನು ನಡೆಸಿದ ಕಠಿಣವಾದ ಕೆಲಸ ನನ್ನ ಪಕ್ಷದ ಆಂತರಿಕ ಹೋರಾಟದ ತಿಳುವಳಿಕೆ ಸಹಾಯವಾಯ್ತು. 1964 ರಲ್ಲಿ ಸಿಪಿಐ(ಎಂ) ಕಾರ್ಯಕ್ರಮ ಅಂಗೀಕಾರ ಮಾಡುವ ಸಂದರ್ಭದಲ್ಲಿ ಕರಡು ವರದಿಗೆ ಮೂಲಭೂತವಾದ ಹಲವು ತಿದ್ದುಪಡಿಗಳನ್ನು ನಾನು ಮಂಡಿಸಿದೆನು. ಅದರಲ್ಲಿ ಹಲವನ್ನು 7ನೇ ಪಕ್ಷದ ಅಧಿವೇಶನ ಅಂಗೀಕರಿಸಿತು. ಮತ್ತೆ ಕೆಲವು ಅಂಗೀಕಾರವಾಗಲಿಲ್ಲ. ಎಡ ಮತ್ತು ಬಲ ಎರಡರ ನಡುವಿನ ಮಧ್ಯವರ್ತಿಯೆಂದು ಅಂದಿನವರೆಗೆ ಕರೆಯುತ್ತಿದ್ದ ನಾನು ಸಿಪಿಐ(ಎಂ)ನ ಗುರುತರವಾದ ನಾಯಕನಾಗಲು ಸಹಾಯವಾಯ್ತು.

ಇನ್ನು ಮುಕ್ತಾಯ ಮಾಡುವ ಮುಂಚೆ ಒಂದು ವಿಷಯವನ್ನು ಹೇಳುತ್ತೇನೆ. ಲೂ ಮತ್ತು ನನ್ನ ನಡುವೆ ಮಾತುಕತೆ ನಡೆದ ಒಂದೆರಡು ತಿಂಗಳ ಅವಧಿಯಲ್ಲಿ ಮಾಸ್ಕೋದಿಂದ 4 ಜನರ ನಿಯೋಗ ಹಿಂತಿರುಗಿ ಬಂದ ನಂತರ ರಷ್ಯಾ ಮಾರ್ಗ ಮತ್ತು ಚೈನಾ ಮಾರ್ಗದ ಸಮಸ್ಯೆಯ ಪರಿಹಾರ ಕಾಣುವಂತಾಯ್ತು.

ಭಾರತದ ಕಮ್ಯುನಿಸ್ಟರು ಅಂಗೀಕಾರ ಮಾಡಬೇಕಾದದ್ದು, ಅವರು ಸ್ವತಂತ್ರವಾಗಿ ಮಾಡಬೇಕಾದ್ದು ಭಾರತದ ಮಾರ್ಗವೇ ಆಗಿದೆ. ರಷ್ಯಾ ಮಾರ್ಗವೋ, ಚೈನಾ ಮಾರ್ಗವೋ ಅಥವಾ ಇನ್ನಾವುದೋ ದೇಶದ ಮಾರ್ಗವೋ ಅಲ್ಲ ಎಂಬುದು ಆ ನಾಲ್ಕು ಜನರಿಗೆ ಆಗ ಅರಿವಾಯ್ತು. ಅಲ್ಲದೆ ಭಾರತದ ಕ್ರಾಂತಿಯ ಕೇಂದ್ರ ಘೋಷಣೆ ಜನತಾ ಪ್ರಜಾಪ್ರಭುತ್ವ ಕ್ರಾಂತಿ ಎಂದು, ಅದನ್ನು ಜಾರಿಗೊಳಿಸಲು ಸಂಸದೀಯ ವ್ಯವಸ್ಥೆಯನ್ನು ಕ್ರಾಂತಿಕಾರಿ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕೆಂದು ಆ ನಾಲ್ಕು ಜನರಿಗೆ ಸ್ಪಷ್ಟವಾಯ್ತು. ನಂತರ 1951 ಅಕ್ಟೋಬರ್ ನಲ್ಲಿ ನಡೆದ ವಿಶೇಷ ಸಮ್ಮೇಳನದಲ್ಲಿ ಜನತಾ ಪ್ರಜಾಪ್ರಭುತ್ವ ಕ್ರಾಂತಿಗೆ ಜನರನ್ನು ತಯಾರುಗೊಳಿಸಲು ಸಂಸದೀಯ ಕೆಲಸವನ್ನು ಕ್ರಾಂತಿಕಾರೀ ರೀತಿಯಲ್ಲಿ ಅಳವಡಿಸಬೇಕೆಂಬ ಕಣ್ನೋಟವನ್ನು ಅಂಗೀಕರಿಸಿತು. ಇದೇನೇ 1952 ರ ಪ್ರಥಮ ಚುನಾವಣೆಗಳಿಂದ ಹಿಡಿದು ಈಗಿನವರೆಗೆ ಭಾರತದ ಕಮ್ಯುನಿಸ್ಟ್ ಚಳುವಳಿಗೆ ಮೂಲಾಂಶ.

ಬಿಜೆಪಿಯ ದಿವಾಳಿಕೋರತನವನ್ನು ....

ಪುಟ 2ರಿಂದ

'ಪರ್ಯಾಯ ನೀಡಬಲ್ಲೆ ಎಂದು ತೋರಿಸಹೊರಟಿತು. ಅದರಲ್ಲಿ ಶೋಚನೀಯವಾಗಿ ಸೋತ ಈ ಪಕ್ಷ ಕೊನೆಗೆ ತನ್ನ ಕೋಮುವಾದಿ ಭಾವನೆಗಳನ್ನು ಉದ್ರೇಕಿಸುವ ಬ್ರಹ್ಮಾಸ್ತ್ರವನ್ನು ಬಳಸಲು ಈ "ಯಾತ್ರೆಗಳ" ಮೊರೆಹೋಗಬೇಕಾಯಿತು ಎಂದು ಈಗ ಎಲ್ಲರಿಗೂ ಸ್ಪಷ್ಟವಾಗಿದೆ.

ನಾಲ್ಕು ಯಾತ್ರೆಗಳಿಗೆ ನೇತೃತ್ವ ನೀಡಿದ ಐವರು ಮುಖಂಡರೂ (ಅಡ್ವಾಣಿ, ಜೋಷಿ, ಕಲ್ಯಾಣ್‌ಸಿಂಗ್, ಶೇಖಾವತ್ ಹಾಗೂ ಸುಂದರ್‌ಲಾಲ್ ಪಟ್ವಾ) ಅಯೋಧ್ಯೆಯ ಪ್ರಶ್ನೆಯನ್ನು ಮತ್ತೆ-ಮತ್ತೆ ಎತ್ತಿ ಅಲ್ಪಸಂಖ್ಯಾಕರನ್ನು, ಕಮ್ಯುನಿಸ್ಟರನ್ನು ಟೀಕಿಸುವುದನ್ನೇ ಮುಖ್ಯ ಕಸುಬಾಗಿ ಮಾಡಿಕೊಂಡರು. ಅಡ್ವಾಣಿಯವರು ಕಮ್ಯುನಿಸ್ಟರ ಟೀಕೆಗೆ ಪ್ರತ್ಯೇಕ ಸಮಯವನ್ನೇ ಕಾದಿರಿಸಿದಂತಿತ್ತು. ಅದು ಸಹಜವೂ ಆಗಿತ್ತು.

ಆದರೆ ಈ ಯಾತ್ರೆಗಳಿಗೆ ಹೆಚ್ಚಿನ ಕಡೆ ಮುಖ್ಯವಾಗಿ ಕಳೆದವರ್ಷ ಡಿಸೆಂಬರ್ 15 ರವರೆಗೆ ಬಿಜೆಪಿ ಆಡಳಿತವಿದ್ದ ನಾಲ್ಕು ರಾಜ್ಯಗಳಲ್ಲಿ, ಗುಜರಾತಿನಲ್ಲಿ, ಪಂಜಾಬಿನಲ್ಲಿ, ಪಶ್ಚಿಮ ಬಂಗಾಳ, ಬಿಹಾರಗಳಲ್ಲಿ ಏನೇನೂ ಜನಸ್ಪಂದನ ದೊರೆಯಲಿಲ್ಲ ಎಂದು ಪತ್ರಿಕಾ ವರದಿಗಳಿಂದ ತಿಳಿದು ಬಂದಿದೆ. ಹಿಮಾಚಲ ಪ್ರದೇಶದ ಹಿಂದಿನ ಆಳುವ ಪಕ್ಷವಾದ ಬಿಜೆಪಿ 'ಯಾತ್ರೆ'ಯ ಸಮಯದಲ್ಲಿ ಒಂದಾದರೂ ಬಹಿರಂಗ ಸಭೆಯನ್ನು ನಡೆಸಲು ಕೂಡಾ ಸಾಧ್ಯವಾಗಲಿಲ್ಲ ಎಂಬುದು ಎಲ್ಲರ ಗಮನ ಸೆಳೆದ ಅಂಶ. ಹಾಲ್‌ಗಳಲ್ಲೋ ದೇವಾಸ್ಥಾನಗಳಲ್ಲೋ ಸಭೆ ನಡೆಸಬೇಕಾಗಿ ಬಂತು.

ಅಡ್ವಾಣಿಯವರು ಈ 'ಯಾತ್ರೆ'ಗಳ ಯಶಸ್ಸಿನ ಬಗ್ಗೆ ತಾನೇ ಬೆನ್ನು ತಟ್ಟಿಕೊಂಡರೂ ವಾಸ್ತವವಾಗಿ ಜನಗಳ ನಿಜವಾದ ಸಮಸ್ಯೆಗಳ ಪರಿವೆಯೇ ಇಲ್ಲದ ತಮ್ಮ ದಿವಾಳಿಕೋರತನವನ್ನು ಈ 'ಯಾತ್ರೆ'ಗಳ ಮೂಲಕ ಮತ್ತೊಮ್ಮೆ ಬಯಲಿಗೆ ಬಂದಿರುವುದನ್ನು ತಡೆಯಲು ಅವರಿಗೂ ಆಗಿಲ್ಲ.

ಕೆಂಪು ಬಾವುಟದ ನೆರಳಿನಲ್ಲಿ ಒಂದು

ಪುಟ 5ರಿಂದ

ಪ್ರಕಾರ ಹೋರಾಟದ ಮೊದಲ ಘಟ್ಟ (ಅಂದರೆ ಉಳುವವನಿಗೆ ಹೊಲ) ಮುಗಿದಿದೆ. ಈಗ ಭೂಮಿಯ ರಾಷ್ಟ್ರೀಕರಣ ಆಗಬೇಕೆನ್ನುತ್ತಿದ್ದಾರೆ ಅವರು. ಸಿಪಿಐ(ಎಂ) ದೀರ್ಘ ಚರ್ಚೆಯ ನಂತರ 'ಉಳುವವನಿಗೇ ಹೊಲ' ಎಂಬ ಜನತಾ ಪ್ರಜಾಸತ್ತಾತ್ಮಕ ಕ್ರಾಂತಿಯ ಘಟ್ಟದಲ್ಲೇ ಇರುವುದರಿಂದ ಮುಂದಿನ ಘಟ್ಟದ ಪ್ರಸ್ತಾಪವೇ ಅನಾವಶ್ಯಕ ಎಂದು ಸ್ಪಷ್ಟ ನಿಲುವು ತೋರಿದೆ.

ಕೆಲವು ಸಮಾಜವಾದೀ ದೇಶಗಳ ಇತ್ತೀಚಿನ ಅನುಭವಗಳಿಂದ ಕಲಿಯಬೇಕಾದದ್ದು ಬಹಳವಿದ್ದು ಭೂಮಿಯ ಸಾಮಾಜೀಕರಣ ಬಹಳ ಸಂಕೀರ್ಣವಾದದ್ದು ಎಂಬುದನ್ನು ಅದು ತೋರಿದೆ. ಕ್ರಾಂತಿಕಾರಿ ಹೋರಾಟಗಳು ಮುಂದುವರಿಯಲು ಮೂರ್ತ ಐತಿಹಾಸಿಕ ಸ್ಥಿತಿಗಳಿಗೆ ಅನುಗುಣವಾಗಿ ಘೋಷಣೆಗಳ ರೂಪ ಮತ್ತು ತಿರುಳು ಇರಲೇ ಬೇಕಾಗುತ್ತದೆ ಭಾರತದ ಇಂದಿನ ವಾಸ್ತವವನ್ನು ಪರಿಗಣಿಸುವುದಾದರೆ ರೈತರ ಹೋರಾಟ ಜಮೀನುದಾರಿ ಪದ್ಧತಿಯನ್ನು ತೊಡೆದು ಹಾಕಿ ಜನತೆಯ ಪ್ರಜಾಸತ್ತಾತ್ಮಕ ಕ್ರಾಂತಿಯನ್ನು ಪೂರ್ಣಗೊಳಿಸಬಲ್ಲದು.

ಐ.ಪಿ.ಎಫ್. ತನ್ನ ಘೋಷಣೆಗಳಿಂದ ಈ ಹೋರಾಟಗಳಿಗೆ ಧಕ್ಕೆಯುಂಟುಮಾಡುತ್ತಿದೆ.

ಈ ಐ.ಪಿ.ಎಫ್.ನ ಸದಸ್ಯರು ಭೂಮಾಲಿಕ ವರ್ಗದೊಡನೆ ಸೇರಿ ಸಿಪಿಐ(ಎಂ)ನ ದರ್ಭಾಂಗಾ ಜಿಲ್ಲೆಯ ಮುಂದಾಳು ಮಹೇಶ್ವರ ಸಿಂಗರನ್ನು ಕ್ರೂರವಾಗಿ ಕೊಲೆ ಮಾಡಿದರು. ಇದಲ್ಲದೆ ಸಿಪಿಐ(ಎಂ) ನ ಅನೇಕರನ್ನು ತನ್ನ 'ಹಿಟ್‌ಲಿಸ್ಟ್'ಗೆ ಅದು ಸೇರಿಸಿಕೊಂಡಿದೆ. ಪಂಜಾಬಿನ ಭಯೋತ್ಪಾದಕರ ಶೈಲಿಯಲ್ಲಿ ಈ ಹೋರಾಟದ ನೇತೃತ್ವವನ್ನು ವಹಿಸಿದವರನ್ನು ಮುಗಿಸಲು ಅದು ಹವಣಿಸಿದೆ.

ಆದರೆ ಐ.ಪಿ.ಎಫ್‌.ನ ಈ ಬುದ್ಧಿ ಅವರಿಗೇ ಮುಳುವಾಗಿದೆ. ಮಹೇಶ್ವರ ಸಿಂಗ್‌ರ ಕೊಲೆಗಾರರನ್ನು ಜನ ಅಟ್ಟಿಸಿಕೊಂಡು ಹೋದರು. ತಪ್ಪಿಸಿಕೊಳ್ಳಲಾರದೆ ಜೀವವುಳಿಸಿಕೊಳ್ಳಲು ಅವರು ಪೋಲೀಸರಿಗೆ ಶರಣಾದರು.

ಬಿಹಾರದ ಸಿಪಿಐ(ಎಂ) ನ ರಾಜ್ಯ ಸಮಿತಿ, ಕಿಸಾನ್ ಮತ್ತು ಕೃಷಿ ಕೂಲಿಕಾರರ ಸಂಘಟನೆಗಳು ಈ ಹೋರಾಟವನ್ನು ಯಶಸ್ವಿಗೊಳಿಸುವತ್ತ ಎಲ್ಲ ಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ. ಬಿಹಾರದಲ್ಲಿ ಮುಂಬರುವ ದಿನಗಳಲ್ಲಿ ಭೂ ಹೋರಾಟಗಳು ಬೆಳೆಯುತ್ತ ಹೋಗುತ್ತವೆ. ಇಂತಹ ಬೆಳವಣಿಗೆಯಿಂದ ವರ್ಗ ಸಂಬಂಧಗಳ ಸಮೀಕರಣ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಲಾಭದಾಯಕವಾಗಿ ಬೆಳೆದು ದೇಶದಲ್ಲೇ ಮಹತ್ವದ ಬದಲಾವಣೆಗಳನ್ನು ತರಲಿವೆ.



ಬಿ.ಜೆ.ಪಿ. "ವೋಟ್ ಯಾ[illegible]ನ್ ಎಕ್ಸ್‌ಪ್ರೆಸ್‌ನಲ್ಲಿ ವ್ಯಂಗ್ಯ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಪರವಾಗಿ ಮುದ್ರಣ ಮತ್ತು ಪ್ರಕಾಶಕ ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ :12, 18ನೇ ಅಡ್ಡರಸ್ತೆ, ಕಾಟಪ್ಪ ಗಾರ್ಡನ್ಸ್, ಸಂಪಂಗಿರಾಮನಗರ, ಬೆಂಗಳೂರು-560 027. ಫೋನ್ ನಂ. : 236462. ಸಂಪಾದಕರು : ಪಿ.ರಾಮಚಂದ್ರರಾವ್